
ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕ - ಹುಬ್ಬಳ್ಳಿ.

೨೫-೪-೪೯

★

ಬೆಲೆ ಎರಡಾಣೆ



ಗಾಂಧೀ ನಿಧಿಗಾಗಿ ಸಂಚರಿಸುತಿರುವ ಬಾಬೂ ರಾಜೇಂದ್ರ ಪ್ರಸಾದರು

—ಪುಟ ೩ ನೋಡಿರಿ

ಅಂತರ್-ರಾಷ್ಟ್ರೀಯ

ಪಾಶ್ಚಾತ್ಯ ದೇಶಗಳಲ್ಲಿ ಸಾಮಾಜಿಕ ಸುರಕ್ಷಿತತೆ

ಸರ್ವರಿಗೂ ಆರ್ಥಿಕ ಸಹಾಯ— ಸರಕಾರದ ಹೊಣೆ— ಸಾಮಾಜಿಕ ವಿಮಾಪದ್ಧತಿ— ಕೂಲಿಕಾರರಿಗೆ ವಿವಿಧ ಸೌಕರ್ಯ

ಜೀವನದಲ್ಲಿಯ ಆಕಸ್ಮಿಕ ಆಪತ್ತುಗಳಿಂದ ತಮ್ಮನ್ನು ಸರಕಾರ ರಕ್ಷಿಸಬೇಕೆಂದು ಜಗತ್ತಿನ ಜನರು ಅಪೇಕ್ಷಿಸುತ್ತಾರೆ. ಎಲ್ಲೆಲ್ಲೂ ಖಾತ್ರಿಯಾದ ಸುರಕ್ಷಿತತೆಗೆ ಜನ ಬಹಳ ಬೆಲೆ ತೆರಬೇಕಾಗಿದೆ. ಮತ್ತು ಎಲ್ಲ ದೊಡ್ಡ ರಾಷ್ಟ್ರಗಳಲ್ಲೂ ಅಂಥ ಸುರಕ್ಷಿತತೆಯನ್ನು ಕೊಡುವ ಪದ್ಧತಿ ಹೆಚ್ಚು ಕಡಿಮೆ ಒಂದೇ ತೆರನಾಗಿದೆ.

ಬ್ರಿಟನ್ನಿನ ವ್ಯವಸ್ಥೆ

ಬ್ರಿಟನ್ನು ಪ್ರತಿಯೊಬ್ಬನಿಗೂ ಉಚಿತ ವೈದ್ಯೋಪಚಾರ ಮತ್ತು ದಂತಚಿಕಿತ್ಸೆಗಳನ್ನು ಒದಗಿಸಿದೆ. ಒಬ್ಬ ತಾಯಿಗೆ ಮಗು ಹುಟ್ಟಿದರೆ ೧೩ ಡಾಲರುಗಳನ್ನು ಖರ್ಚಿಗೆ ಕೊಡಲಾಗುತ್ತದೆ, ಅವಳಿಗೆ ಕೆಲಸ ಹೋಗಿದ್ದರೆ ೧೩ ವಾರಗಳ ವರೆಗೆ ವಾರವೊಂದಕ್ಕೆ ೭.೨೦ ಡಾಲರುಗಳನ್ನು ಕೊಡುವ ವ್ಯವಸ್ಥೆಯಿದೆ. ಒಂದು ಮಗುವಾದ ನಂತರ ೨ನೆಯದರಿಂದ ಪ್ರತಿಯೊಂದು ಮಗುವಿಗೂ ಅದಕ್ಕೆ ೧೫ ವರ್ಷ ವಯಸ್ಸಾಗುವವರೆಗೆ ಅದಕ್ಕಾಗಿ ವಾರಕ್ಕೆ ೧ ಡಾಲರಿನಂತೆ ಕುಟುಂಬಗಳು ಸಂಗ್ರಹಿಸುತ್ತವೆ. ಕೆಲಸಗಾರನೊಬ್ಬನು ಕೆಲಸ ಕಳೆದುಕೊಂಡರೆ ಅವನಿಗೆ ೨೬ ವಾರಗಳ ವರೆಗೆ ಪರಿಹಾರ ಧನವನ್ನು ಸಲ್ಲಿಸಲಾಗುವುದು, ಕಾಹಿಲೆ ಬಿದ್ದರೆ ಒಂದು ವರ್ಷದ ವರೆಗೆ ಅವನಿಗೆ ಖರ್ಚಿಗೆ ಕೊಡಲಾಗುವುದು. ಒಬ್ಬ ಗಂಡಸು ತನ್ನ ೬೫ ನೆಯ ವರ್ಷ ವಯಸ್ಸಿನಲ್ಲಿ ಮತ್ತು ಒಬ್ಬ ಹೆಂಗಸು ತನ್ನ ೬೦ ನೆಯ ವಯಸ್ಸಿನಲ್ಲಿ ವಾರಕ್ಕೆ ೫.೨೦ ಡಾಲರುಗಳ ಮೇಲೆ ನಿವೃತ್ತರಾಗುತ್ತಾರೆ. ಒಬ್ಬ ಕೆಲಸಗಾರ ಸತ್ತರೆ ಅವನ ಉತ್ತರಕ್ರಿಯೆಗಾಗಿ ಅವನ ಮನೆಯವರಿಗೆ ೮೦ ಡಾಲರುಗಳನ್ನು ಕೊಡಲಾಗುತ್ತದೆ.

ಇಂಥ ರಕ್ಷಣೆಯ ವೆಚ್ಚಕ್ಕಾಗಿ ಪ್ರತಿವಾರ ೯೫ ಸೆಂಟುಗಳಿಂದ ೧.೨೫ ಡಾಲರುಗಳ ವರೆಗೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ೧೬ ನೆಯ ವರ್ಷ ವಯಸ್ಸಿನಿಂದ ನಿವೃತ್ತಿ ಹೊಂದುವತನಕ ಕಂತು ಕಟ್ಟುತ್ತದೆ. ಸಾಮಾನ್ಯ ಕೂಲಿಕಾರನು ವಾರಕ್ಕೆ ಸುಮಾರು ೧ ಡಾಲರಿನಷ್ಟು ಕಟ್ಟುತ್ತಾನೆ. ಒಡೆಯರು ಸರಾಸರಿ ೮೫ ಸೆಂಟುಗಳಷ್ಟನ್ನು ಕೂಲಿಕಾರನ ಕಂತಿಗೆ ಸೇರಿಸುತ್ತಾರೆ. ಈ ತೆರಿಗೆಗಳನ್ನು ಸಂಬಳ ಕೊಡುವಾಗಲೇ ವಸೂಲು ಮಾಡಲಾಗುತ್ತದೆ. ಸ್ವತಂತ್ರೋದ್ಯೋಗಿಗಳಿಂದ ವಸೂಲು ಮಾಡಲು ಸ್ಟಾಂಪ್ ಯೋಜನೆಯನ್ನು ಮಾಡಲಾಗಿದೆ. ಆದರೆ ಈ ಸಾಮಾಜಿಕ ಸಹಾಯ ಯೋಜನೆಯ ವೆಚ್ಚದ ಅರ್ಧಕ್ಕಿಂತ ಹೆಚ್ಚು ಅಂಶವನ್ನು ಸರಕಾರ ಒಟ್ಟು ವಸೂಲು ಮಾಡಿದ ಸಾಮಾನ್ಯ ತೆರಿಗೆಯ ಹಣದಿಂದಲೆ ನಿರ್ವಹಿಸಬೇಕಾಗುತ್ತದೆ. ಬ್ರಿಟನ್ನಿನ ಈ ವಿಸ್ತೃತ ಕಾರ್ಯಕ್ರಮಕ್ಕೆ ಸುಮಾರು ೩೧೨,೦೦,೦೦೦,೦೦ ಕೋಟಿ ಡಾಲರುಗಳು, ಅಂದರೆ ಸರಕಾರದ ಎಲ್ಲ ವೆಚ್ಚದ ನಾಲ್ಕನೆಯ ಒಂದಂಶದಷ್ಟು ಬೇಕಾಗುತ್ತದೆ.

ರಶಿಯದ ಯೋಜನೆ

ರಶಿಯದಲ್ಲಿ ಸರಕಾರವು ಎಲ್ಲರಿಗೂ ಕೆಲಸ ಕೊಡುತ್ತದೆ. ಅವರ ಸಂಬಳ ಮತ್ತು ಕೂಲಿಯ ಒಟ್ಟಿನಲ್ಲಿ ನೂರಕ್ಕೆ ೬।। ಯಷ್ಟನ್ನು ಸಾಮಾಜಿಕ ಸಹಾಯಕ್ಕಾಗಿ ತೆಗೆದಿಡುತ್ತದೆ. ಕಲಾಪ್ರಧಾನ ಉದ್ಯಮಗಳಲ್ಲಿ ನೂರಕ್ಕೆ ೩.೭ ಮತ್ತು ರಾಸಾಯನಿಕ ಉದ್ಯಮಗಳಲ್ಲಿ ೧೦.೭ ರ ದರವಿದೆ. ಸಹಾಯವು ಆಯಾ ಕೆಲಸಗಾರನ ಸಂಖ್ಯೆಯ ಪ್ರಮಾಣವನ್ನವಲಂಬಿಸಿದೆ. ಕಾಹಿಲೆ ಬಂದಾಗ ಖರ್ಚಿಗೆ ರೊಕ್ಕ ಅಂಗಹೀನ ವೃದ್ಧಾತುರರಿಗೆ ಉದರಂಭರಣದಕ್ಷಿಣೆ ಇವೂ ಆ ಸಹಾಯದಲ್ಲಿ ಸೇರಿವೆ.

ಸರಕಾರೀ ವೈದ್ಯಕೀಯ ಶಾಖೆಯೋ ಸರ್ವರಿಗೂ ಉಚಿತ ಚಿಕಿತ್ಸೆಯನ್ನು ಒದಗಿಸುತ್ತದೆ; ಕೆಲವು ವರ್ಗದ ವ್ಯಕ್ತಿಗಳಿಗೆ ಮಿಕ್ಕ ವರ್ಗದವರಿಗಿಂತ ಮೊದಲು ಅದನ್ನು ಒದಗಿಸಲಾಗುತ್ತದೆ. ೩ ತಿಂಗಳು ಕೆಲಸ ಮಾಡಿದ ಹೆಂಗಸರು ಗರ್ಭಿಣಿಯರಾದಾಗ ಮತ್ತು ಬಾಣಂತಿಯರಾದಾಗ ಮಾತೃತ್ವವೇತನವನ್ನು ಪಡೆಯುತ್ತಾರೆ. ಹಾಲು ಮುಂತಾದ ಪೋಷಕ ದ್ರವ್ಯಗಳನ್ನು ಕೊಳ್ಳಲು ಸಂಬಳ ಕಡಿಮೆ ಇದ್ದವಳಿಗೆ ಬೇರೆ ಭತ್ತೆಯನ್ನು ಸರಕಾರ ಕೊಡುವದು. ೩ ನೆಯ ಮಗುವಿನ ನಂತರ ಹುಟ್ಟಿದ ಒಂದೊಂದು ಮಗುವಿಗೂ ಸಾಕಷ್ಟು ಹೆಚ್ಚು ಭತ್ತೆಯನ್ನು ಕೊಡಲಾಗುವದು.

'ತೊಟ್ಟಿಲಿಂದ ಸುಡುಗಾಡಿನ ವರೆಗೆ' ಸಾಮಾನ್ಯ ಪ್ರಜೆಗೆ ಆರ್ಥಿಕ ಸುರಕ್ಷಿತತೆಯನ್ನು ಒದಗಿಸಿಕೊಟ್ಟ ಬ್ರಿಟನ್ನಿನ ಅದ್ಭುತ ಸಾಹಸವನ್ನು ಮೆಚ್ಚದವರು ದುರ್ಲಭ. ಅದೇ ಮೇರೆಗೆ ಆ ಮಟ್ಟಕ್ಕೆ ಹೋಗದಿದ್ದರೂ ಸಾಕಷ್ಟು ಮಟ್ಟಿಗೆ ಫ್ರಾನ್ಸ್, ಜರ್ಮನಿ, ರಶಿಯ ಮುಂತಾದ ರಾಷ್ಟ್ರಗಳೂ ಕೂಲಿಕಾರರ, ದರಿದ್ರರ, ಬಾಲವೃದ್ಧಾತುರರ ಯೋಗಕ್ಷೇಮಕ್ಕಾಗಿ ವಿವಿಧ ಯೋಜನೆಗಳನ್ನು ಮಾಡಿ ಜನತಾ ಸೇವೆ ಸಾಗಿಸುತ್ತಿರುವುದನ್ನು "ಯು. ಎಸ್. ನ್ಯೂಸ್ ಎಂಡ್ ವರ್ಲ್ಡ ರಿಪೋರ್ಟ" ನಲ್ಲಿ ವರದಿ ಮಾಡಲಾಗಿದೆ. ಭಾರತ ಅಂಥ ಸುದಿನವನ್ನು ಕಾಣುವುದು ಸನಿಹದಲ್ಲಿ ಒದಗೀತೇ ?

ಫ್ರಾನ್ಸಿನ ಪರಿಸ್ಥಿತಿ

ಫ್ರಾನ್ಸಿನಲ್ಲಿ ಕೂಲಿಕಾರರ ಒಟ್ಟು ಕೂಲಿಯಲ್ಲಿ ೧೦೭೧ ಡಾಲರುಗಳನ್ನು ಮೊದಲು ಸಾಮಾಜಿಕ ಸಹಾಯಕ್ಕಾಗಿ ತೆಗೆದಿಡಲಾಗುತ್ತದೆ; ಒಡೆಯನಿಂದ ನೂರಕ್ಕೆ ೨೯॥ ಯಷ್ಟನ್ನು ವಸೂಲು ಮಾಡಿ ಅದಕ್ಕೆ ಸೇರಿಸಲಾಗುತ್ತದೆ. ಕೆಲಸವಿಲ್ಲವಾಗ ಕೂಲಿಕಾರರಿಗೆ ಕೊಡುವ ದಕ್ಷಿಣೆಯನ್ನು ಸಾಮಾನ್ಯ ತೆರಿಗೆಯಿಂದ ಬಂದ ಆದಾಯದಿಂದಲೇ ತೆಗೆಯಲಾಗುವದು.

ಫ್ರೆಂಚರು ತಾಯಂದಿರಾದವರಿಗೆ ಸಂಪೂರ್ಣವಾಗಿ ಉಚಿತ ಔಷಧೋಪಚಾರವನ್ನು ಕೊಡುವರು. ಗರ್ಭಿಣಿಯರಿರುವಾಗ ಅವರಿಗೆ ಅರ್ಧ ಸಂಬಳ ಸಲ್ಲುತ್ತದೆ. ಮೊದಲು ಮಗು ಹುಟ್ಟಿದಾಗ ಬೋನಸ್ ಕೊಡಲಾಗುವುದು; ಮುಂದೆ ಹುಟ್ಟುವ ಒಂದೊಂದು ಮಗುವಿಗೂ ಭತ್ತೆಯನ್ನು ಕೊಡುವ ವ್ಯವಸ್ಥೆಯಿದೆ. ಕಾಹಿಲೆಯವರಿಗೆ ಭತ್ತೆಯೂ ಅಂಗಹೀನರಿಗೂ ವಯೋವೃದ್ಧರಿಗೂ ದಕ್ಷಿಣೆಯೂ ಸಿಗುತ್ತವೆ.

ಜರ್ಮನಿಯಲ್ಲಿ

ಜರ್ಮನಿಯಲ್ಲಿ ನಾಲ್ಕೂ ವಲಯಗಳ ಆಕ್ರಾಮಕ ಅಧಿಕಾರಿಗಳು ಸುರಕ್ಷಿತತೆಯ ಕಾರ್ಯಕ್ರಮವನ್ನು ಪುನರುಜ್ಜೀವನಗೊಳಿಸಿದರು. ನಾಜಿಗಳು ಸಾಮಾಜಿಕ ಸುರಕ್ಷಿತತೆಯ ನಿಧಿಯನ್ನು ಯುದ್ಧಕ್ಕೆ ಬಳಸಿಕೊಂಡರು; ಸಹಾಯಕ ಭತ್ತೆಗಳನ್ನು ಬಹಳ ಮಟ್ಟಿಗೆ ಇಳಿಸಿದ್ದರು. ಅಮೇರಿಕದ ವಲಯದಲ್ಲೀಗ ಕೂಲಿಕಾರರು ತಮ್ಮ ವಾರ್ಷಿಕ ಆದಾಯವಾದ ೩೬೦೦ ಮಾರ್ಕುಗಳಲ್ಲಿ ನೂರಕ್ಕೆ ೯.೮ ರಷ್ಟನ್ನು ಈ ನಿಧಿಗೆ ಕೊಡುತ್ತಾರೆ, ಒಡೆಯರು ಸಂಬಳದ ೧೦ ನೆಯ ಒಂದಂಶದಷ್ಟನ್ನು ಅದಕ್ಕೆ ಸಲ್ಲಿಸುತ್ತಾರೆ. ಇದರಿಂದ ರೋಗದ ಕಾಲದಲ್ಲಿಯ ವೆಚ್ಚಕ್ಕೆ, ಆಕಸ್ಮಿಕ ಅಪಘಾತದ ವಿಮೆಗೆ ಮತ್ತು ಉದ್ಯೋಗ ಕಳೆದುಕೊಂಡಾಗ ಉದರಭರಣಕ್ಕೆ ಧನಸಹಾಯ ಮಾಡಲಾಗುತ್ತದೆ. ಮಿಕ್ಕ ಸರಕಾರೀ ನಿಧಿಗಳನ್ನು ವೃದ್ಧರಿಗೆ ವರ್ಷಕ್ಕೆ ೪೬.೮೦ ಡಾಲರುಗಳಿಗೆ ಕಡಿಮೆಯಿಲ್ಲದಂತೆ ನಿವೃತ್ತಿವೇತನ ಕೊಡಲು ಬಳಸಲಾಗುತ್ತದೆ,

ಯುರೋಪಿನ ಮಿಕ್ಕ ನಾಡುಗಳಲ್ಲೂ ಸಾಮಾಜಿಕ ಸುರಕ್ಷಿತತೆಯ ಕಾರ್ಯಕ್ರಮ ಹಬ್ಬುತ್ತಿದೆ. ೧೯೫೦ ಜುಲೈ ೧ ರಿಂದ ಸ್ವೀಡನ್ನು ಒತ್ತಾಯದ ಆರೋಗ್ಯವಿಮೆಯನ್ನು ಅಮಲಿನಲ್ಲಿ ತರಲಿದೆ. ವಾರ್ಧಿಕ್ಯ ವೇತನನ್ನು ಈಗಾಗಲೇ ಹೆಚ್ಚು ಮಾಡಲಾಗಿದೆ. ಬೆಲ್ಜಿಯಮ್ಮಿನಲ್ಲಿ ವೇತನದ ನೂರರಲ್ಲಿ ೨೩॥ ಯಷ್ಟು ತೆರಿಗೆ ಮತ್ತು ದಾನಗಳಿಂದ ಸಾಮಾಜಿಕ ಸಹಾಯವನ್ನು ನೀಡಲಾಗಿದೆ.

ಅಮೇರಿಕಖಂಡದ ಅರ್ಜೆಂಟೀನ, ಉರಗ್ವೆ ಮುಂತಾದ ದೇಶಗಳಲ್ಲೂ ಈ ಕಾರ್ಯಕ್ರಮವನ್ನು ಅನುಸರಿಸಲಾಗುತ್ತಿದೆ. ಆಸ್ಟ್ರೇಲಿಯ, ನ್ಯೂಜಿಲೆಂಡುಗಳೂ ಈ ದಿಶೆಯಲ್ಲಿ ಮುನ್ನಡೆಯಲಾರಂಭಿಸಿವೆ. ಅಮೇರಿಕದ ಸಂಯುಕ್ತ ಸಂಸ್ಥಾನ ಇದರಲ್ಲಿ ಮೇಲೆ ಹೇಳಿದ ದೇಶಗಳಷ್ಟು ಪ್ರಗತಿಯನ್ನು ಸಾಧಿಸಿಲ್ಲ. ಆದರೆ ಈಗೀಗ ಆ ಬಗ್ಗೆ ಹೆಚ್ಚು ಪ್ರಯತ್ನ ಮಾಡಲಾಗುತ್ತಿದೆ. ಸಾಮಾಜಿಕವಿಮೆ, ಅಂಗಹೀನರಿಗೆ ದಕ್ಷಿಣೆ, ವೃದ್ಧರಿಗೆ ನಿವೃತ್ತಿವೇತನ, ಮಕ್ಕಳಿಗೆ ಭತ್ತೆ ಮುಂತಾದವನ್ನು ಒದಗಿಸಲು ೧೭೭೦ ಕೋಟಿ ಡಾಲರುಗಳನ್ನು ಈಗ ವೆಚ್ಚ ಮಾಡಲಾಗುತ್ತಿದೆ. ಇನ್ನೂ ಹೆಚ್ಚು ಹಣವನ್ನು ಸಂಗ್ರಹಿಸಲು ಯೋಜನೆ ಮಾಡಲಾಗಿದೆ. ಇದರ ಪ್ರಕಾರ ಬೇರೆಯ ದೇಶಗಳಲ್ಲಿರುವಂತೆ ಕೂಲಿಯ ನೂರಕ್ಕೆ ೧೮ ರಷ್ಟು ತೆರಿಗೆ ಹಾಕಿ ಎಲ್ಲ ವ್ಯವಸ್ಥೆಯನ್ನು ಮಾಡಲು ಇನ್ನು ೪೦ ವರ್ಷಗಳ ಅವಧಿ ಬೇಕು.

ಮದೋಲ್ಲಾಸ

ಗಾಂಧೀಯುಗದಲ್ಲಿ ಕುಡಿಯುವುದು ನಮ್ಮಲ್ಲಿ ನಿಷಿದ್ಧವಾಗಿದೆಯಲ್ಲದೆ ಮಿಕ್ಕ ಯುಗಗಳಲ್ಲಿ "ಯೆಂಡ ಯೆಡ್ತಿ" ಒಂದೇ ಯೋಗ್ಯತೆಯುಳ್ಳ ಸುಖ ಸಾಧನಗಳೆಂದು ತಿಳಿಯಲ್ಪಡುತ್ತಿದ್ದವು. ಹೆಂಡಂದಿರಾದರೂ ಅದೇ ತಮಗೆ ಗೌರವವೆಂದು ಆ ಸ್ಥಾನವನ್ನೇ ಬಹು ಪ್ರೀತಿಯಿಂದ, ಗರ್ವದಿಂದ ಅಲಂಕರಿಸುತ್ತಿದ್ದರು. ತಾವು ಮಾದಕರೆಂಬುದು ಅವರ ನೀಚೋಹಂ ಬುದ್ಧಿಗೆ ತಣಿವನ್ನುಂಟು ಮಾಡುತ್ತಿತ್ತು.

ಹೊಸ ಹುರುಪಿನ ಹುಡುಗತನದ ಅಮೇರಿಕದ ನಾಗರಿಕತೆ ಭಾರತೀಯರು ನಡೆಸುತ್ತ ಬಂದ ಎಲ್ಲ ಸಾಮಾಜಿಕ ಪ್ರಯೋಗಗಳನ್ನು ನಡೆಸಿ ನಷ್ಟಹೊಂದಿ ನಾಗರೀಕತೆಯಲ್ಲಿ ನಮ್ಮ ಮಟ್ಟದ ಅನುಭವ ಗಾಂಭೀರ್ಯವನ್ನು ಪಡೆಯಲು ಮೊದಲು ಹೆಜ್ಜೆಯಿಡತೊಡಗಿದ್ದಾರೆ. ಕುಡಿಕತನ ಅಲ್ಲಿ ಪ್ರಾಚೀನ ಭಾರತದಲ್ಲಿದ್ದಂತೆ ಒಂದು ವಿಲಾಸ ಹೆಂಗಸರು ಸಿಗರೇಟುಗಳನ್ನು ಸೇದುವುದು ಹೇಗೆ ಅಲ್ಲಿ ಸಾಮಾನ್ಯವೋ ಕಾಲೇಜು ಹುಡುಗಿಯರು ಮದ್ಯ ಸೇವಿಸುವುದು ಹಾಗೇ ಸಾಮಾನ್ಯವಾಗಿಬಿಟ್ಟದೆ.

೩೩೭ ಕಾಲೇಜು ಹುಡುಗಿಯರನ್ನು ಅಭ್ಯಸಿಸಲಾಯಿತು. ಅದೊಂದು ಸಹವಿದ್ಯಾಭ್ಯಾಸ ಕೇಂದ್ರ. ಅಲ್ಲಿ ಹೆಂಗಸರನ್ನು ಐದು ಗುಂಪುಗಳನ್ನಾಗಿ ವಿಂಗಡಿಸಲಾಯಿತು: ಕುಡಿಯದವರು, ಆಗಾಗ ಕುಡಿಯುವವರು, ಪರೀಕ್ಷೆಗೆ ೨ ವಾರದ ಹಿಂದಿನಿಂದ ಕುಡಿಯದವರು, ವಿರಳವಾಗಿ ಕುಡಿಯುವವರು ಮತ್ತು ಒಮ್ಮೆ ಕುಡಿದವರು ಎಂದು. ಪರೀಕ್ಷೆಯಲ್ಲಿ ಮೂರನೆಯ ಎರಡಂಶದಷ್ಟು ಹೆಂಗಸರು ಕಾಯಂ ಕುಡಿಯುವವರೆಂದು ತಿಳಿದು ಬಂದಿತು. ವಿರಳವಾಗಿ ಕುಡಿಯುವವರು ತಮ್ಮ ೧೯ ನೆಯ ವರ್ಷ ವಯಸ್ಸಿನಿಂದ ಕುಡಿಯಲಾರಂಭಿಸಿದವರು. ಸದಾಮದ್ಯಪಾಯಿಗಳು ೧೭ ನೆಯ ವರ್ಷದಿಂದ. ಸ್ವಲ್ಪ ಕುಡಿಯುವ ಮತ್ತು ಏನೂ ಕುಡಿಯದ ಹುಡುಗಿಯರು ಚರ್ಚಿಗೆ ಸರಿಯಾಗಿ ಹೋಗುತ್ತಿದ್ದರು. ಕುಡಿಯುವವರಲ್ಲಿ ಬಹಳ ಜನರು ಮನೆಯವರಿಗೆ ಗೊತ್ತಾಗುವಂತೆ ಕುಡಿಯುತ್ತಿದ್ದರು. ಯಾವಾಗಲೂ ಕುಡಿಯುವವರಿಗೆ ಕುಡಿಯಲು ಕ್ರಮದಂತೆ ನಿರ್ಣೀತ ದಿನಗಳಿದ್ದವು. ಈ ಮಧ್ಯಮ ವರ್ಗದ ಸ್ತ್ರೀಯರು ಕುಡಿಕತನದಿಂದ ತಮ್ಮ ವರ್ಗದ ಜೀವನಮಟ್ಟವನ್ನು ಬದಲಾಯಿಸಿದ್ದಾರೆ. ಆದರೆ ಈ ಬದಲಾವಣೆ ಕೆಳಗೋ ಮೇಲೋ ಎಂಬುದನ್ನು ವಾಚಕರೇ ಊಹಿಸಿಕೊಳ್ಳಬಹುದು.

ಮನೋಜ ಸಂಧಿವಾತ

"ಕ್ಲೀಬೇ ಶೌರ್ಯಂ ಮದ್ಯಪೇ ತತ್ವ ಚಿಂತಾ" ಎಂಬ ಶ್ಲೋಕವಾದ ಹೇಳುವಂತೆ ಮದ್ಯಪಾಯಿಗಳ ಬುದ್ಧಿ ನಾಗರಿಕವಾಗಿ ಉಳಿಯುವುದು ಸಾಧ್ಯವೇ ? ಆದರಿಂದಲೇ ಅಮೇರಿಕದಲ್ಲಿ ಅವರಿಂದ ಪೀಡಿತರಾದ ಭ್ರಮಿಷ್ಠರ ಸಂಖ್ಯೆ ಕರುಣಾಜನಕವಾಗಿ ಬೆಳೆಯುತ್ತಿದೆ. ಅವರಲ್ಲಿ ಮಾನಸಿಕ ವೇದನೆಯ ದೆಸೆಯಿಂದ ದೈಹಿಕ ವೇದನೆಗೆ ತುತ್ತಾಗುವವರೂ ಇದ್ದಾರೆಂದು ಮನಃಶಾಸ್ತ್ರಕಾರರು ಕಂಡಿದ್ದಾರೆ. ಅದಕ್ಕೆ Psychogenic Rheumatism— ಮನೋಜ ಸಂಧಿವಾತ ಎಂದು ಹೆಸರು. ಇದರಲ್ಲಿ ನೋವಿನ ಕಾರಣ ಮಾನಸಿಕ, ಆದರೆ ನೋವು ಮಾತ್ರ ದೈಹಿಕ.

ರೋಗಿಯ Mood ಸಂಚಾರಿ ಭಾವ ಬದಲಾದಂತೆ ಈ ನೋವೂ ಬದಲಾಗುತ್ತದೆ. ಆಯಾಸ ಅವನಲ್ಲಿ ಅಶಕ್ತಿಯನ್ನು ಉಂಟುಮಾಡುತ್ತದೆ. ನೋವಲ್ಲದೆ ಬಿಗಿತ, ಅಶಕ್ತಿ, ಸಂವೇದನಾ ಶೂನ್ಯತೆ, ಸೆಳೆತಗಳು ಉದಯಿಸುವುದು ಮನೋಜಸಂಧಿವಾತದ ಚಿಹ್ನವೆನಿಸುತ್ತದೆ. ನ್ಯಾ ತುಂಬ ಗುದ್ದಿಬಿಟ್ಟಹಾಗಿದೆ ಎನ್ನುತ್ತಾರೆ ರೋಗಿಗಳು. ಮಾನಸಿಕ ಕೆಲಸ ಮಾಡುತ್ತಿದ್ದರೇನೋ ಅದು ಕಡಿಮೆಯಾಗುವುದು, ಆದರೆ ಕಡೆಗದು ಮತ್ತೆ ಸಮಯಸಾಧಿಸಿ ತನ್ನ ಕೈತೋರಿಸಿಯೇ ಬಿಡುವುದು.

ಮುಷ್ಯಮದದಂತೆ "ಅನ್ನಮದ, ಅರ್ಥಮದ ಅಖಿಲ ವೈಭವದ ಮದ, ಮುನ್ನ ಪ್ರಾಯದ ರೂಪಮದವು" ಎಂಬಂತೆ ಅಷ್ಟಮದಗಳಲ್ಲಿ ಒಂದು ಎರಡು ಮೂರು ಅಥವಾ ಅಷ್ಟೂ ಇರುವ ಮನುಷ್ಯರು ಸಹಜೀವಿಗಳಿಗೆ ತೊಂದರೆ ಕೊಟ್ಟು ಅವರಲ್ಲಿ ಮೇಲಿನ ರೋಗ ಹುಟ್ಟಲು ಕಾರಣರಾಗುತ್ತಾರೆ. ಅಂಥವರಲ್ಲಿ, ಮಗುವಿನ ಸಾಮಾಜಿಕ ಬೆಳವಣಿಗೆಯಲ್ಲಿ ಅಧಿಕ ಪ್ರಸಂಗಕ್ಕೆ ಕೈಹಾಕುವ ಉಗ್ರ ಮಾತಾಪಿತೃಗಳು, ಕುರೂಪಿಣಿಯಾದ ಮಗಳ ಮೇಲೆ ಅತ್ಯಧಿಕಾರ ಚಲಾಯಿಸುವ ಮಹಾಮಾಯಿಯಾದ ತಾಯಿ, ಅಪ್ರಾಮಾಣಿಕ, ಅಲಕ್ಷ್ಯಮಾಡುವ, ಕುಡಿಯುವ ಗಂಡ ಅಥವಾ ಹೆಂಡತಿ ಮತ್ತು ತಮ್ಮನ್ನು ಅವಲಂಬಿಸಿ ಜೀವಿಸುವ ತಾಯ್ತಂದೆಯರಿಗಾಗಿ ಮನಸ್ಸಿಲ್ಲದ ಮನಸ್ಸಿಂದ ವಿವಾಹಮಾಡಿಕೊಳ್ಳದ ಸ್ತ್ರೀ ಪುರುಷರು ಮುಖ್ಯರು ಎಂದು ಡಾ. ಫಿಲಿಪ್ ಹೆಂಚರು ಲೆಕ್ಕ ಹಾಕಿದ್ದಾರೆ.

ಸ್ವದೇಹ ಪ್ರಿಯತೆ

ಕುಡಿಕತನದಂತೆಯೇ Fashion ವಿಲಾಸದಲ್ಲಿ ಅತ್ಯಾಸಕ್ತವಾಗುವುದೂ ಒಂದು ದುರಭ್ಯಾಸ. ಅಮೇರಿಕ ಇದಕ್ಕೂ ಬಹಳ ಹೆಸರಾಗಿದೆ. ಅಲ್ಲಿ ಪುರುಷರಿಗಿಂತ ಸ್ತ್ರೀಯರು ಹೀಗೆ ಆಟದಲ್ಲಿ ಬರುವ ವೇಷಗಳಂತೆ ತಿರುಗುವುದು ಸ್ತ್ರೀ ಪುರುಷರಿಬ್ಬರೂ ಅಪೇಕ್ಷಣೀಯವೆಂದು ತಿಳಿದಿದ್ದಾರೆ, ಮರ್ಯಾದೆಯೆಂದು, ಸೌಂದರ್ಯವೆಂದು ಗ್ರಹಿಸಿದ್ದಾರೆ. ಇದರ ಮೇಲೆ ಈ ವಿಲಾಸಪ್ರಿಯತೆಗೆ ಮೂಲದ್ರಷ್ಟಾರರೆಂದರೆ ಧನಪಿಶಾಚ ಹಿಡಿದ ಸಾವಕಾರರು. ಅವರು ತಮ್ಮ ಮರ್ಕಟಮತಿಯ ಕಲ್ಪನಾವಿಲಾಸಕ್ಕೆ ಹೊಳೆದ ಎಲ್ಲ ಭಂಗಿಗಳನ್ನೂ ಅದೇ ಉದ್ದೇಶಕ್ಕೆ ಮೀಸಲಾದ ಪತ್ರಿಕೆಗಳಲ್ಲಿ ಪ್ರಕಟಿಸಿ ಎಳವಗೆಯನ್ನು— ಅದರಲ್ಲೂ ಹೆಣ್ಣಿನ ಅಪಕ್ವಬುದ್ಧಿಯನ್ನು— ಸೆರೆಹಿಡಿಯುತ್ತಾರೆ. ಅವರು ಅಪ್ಪನನ್ನೂ ಗಂಡಂದಿರನ್ನೂ ಪೀಡಿಸಿ ಸ್ವದೇಹ ಪ್ರಿಯತೆ ಬೆಳೆಸಿಕೊಳ್ಳುವಂತೆ ಅಲಂಕಾರ ಮಾಡಿಕೊಂಡುಪರಪ್ರೇಮಶಕ್ತಿಯನ್ನು ಕಳೆದುಕೊಂಡು ಭ್ರಾಂತ, ಅರಸಿಕ ಜೀವನ ನಡೆಸುವ Beauty Girls ಬಣ್ಣದ ಕುಡಿಕೆಗಳು ಎನಿಸಿ ಸಮಾಜದಲ್ಲಿ ಪಿಡುಗುಗಳಾಗಿ ಬಾಳುತ್ತಾರೆ. ಎಂಬುದು "ವೋಗ್" ಮತ್ತು 'ವಿಮೆನ್ಸ್ ಹೋಂ ಕಂಪಾನಿಯನ್" ಎಂಬ ಪತ್ರಿಕೆಗಳಿಂದ ತಿಳಿಯಲು ಬರುತ್ತದೆ.

—ಭಾವರೋಗಭೀಷಜ

ಮುಖಪತ್ರದಲ್ಲಿ

ಗಾಂಧೀಜಿಯ ಶಿಷ್ಯರಲ್ಲಿ ಶ್ರೇಷ್ಠರೂ ಭಾರತದ ಘಟನಾ ಸಮಿತಿಯ ಅಧ್ಯಕ್ಷರೂ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷರೂ ಆದ ಡಾ. ರಾಜೇಂದ್ರಪ್ರಸಾದರು ಈ ಸಂಚಿಕೆ ಓದುಗರ ಕೈಸೇರುವ ಹೊತ್ತಿಗೆ ಕರ್ನಾಟಕ ಸಂಚಾರವನ್ನು ಕೈಕೊಂಡಿರುತ್ತಾರೆ. ಗಾಂಧೀ ಸ್ಮಾರಕ ನಿಧಿಯ ಸಲುವಾಗಿ ಧನಸಂಚಯ ಮಾಡುವದೇ ಅವರ ಪ್ರಸ್ತುತ ಸಂಚಾರದ ಉದ್ದೇಶ. ಸರ್ವರ ಉದ್ಧಾರವನ್ನು ಸರ್ವರೀತಿಯಿಂದ ಮಾಡುವದೇ ಗಾಂಧೀಸ್ಮಾರಕ ನಿಧಿಯ ಉದ್ದೇಶ. ಗಾಂಧೀಜಿ ಯಾವ ಧ್ಯೇಯಗಳಿಗಾಗಿ ಬಾಳಿದರೋ ಮತ್ತು ಜೀವತೆತ್ತರೋ ಆ ಧ್ಯೇಯಗಳನ್ನು ಮುಂದೊತ್ತಿ ಭಾರತದ ಜೀವನದಲ್ಲಿ ಅವನ್ನು ಅಳವಡಿಸುವದಕ್ಕಾಗಿ ಈ ನಿಧಿ ವಿನಿಯೋಗಿಸಲ್ಪಡುವದು. ಈಗಾಗಲೇ ನಿಧಿಗಾಗಿ ಅನೇಕ ಕೋಟಿ ರೂಪಾಯಿಗಳು ಸೇರಿವೆ. ಮೊನ್ನೆ ಮೊನ್ನೆ ದೇಶದ ಉದ್ದಿಮೆದಾರರು ನಿಧಿಗೆ ಐದು ಕೋಟಿ ರೂಪಾಯಿ ದಾನ ಮಾಡಿದ್ದಾರೆ. ಆದರೆ ಸಾಮಾನ್ಯ ಜನರ ಉದ್ಧಾರವೇ ಗಾಂಧೀಜಿಯ ಜೀವನ ಧ್ಯೇಯ. ಅದರಿಂದ ಜನಸಾಮಾನ್ಯರೂ ಈ ನಿಧಿಗೆ ಯಥಾಶಕ್ತಿ ದಾನ ಮಾಡುವದವಶ್ಯ. ಗಾಂಧೀ ಪ್ರಾಂತವೆಂದು ಪ್ರಸಿದ್ಧಿ ಪಡೆದ ಕರ್ನಾಟಕದಲ್ಲಿ ಗಾಂಧೀ ನಿಧಿಗೆ ಮುಕ್ತಹಸ್ತದಿಂದ ಧನಸಹಾಯ ದೊರೆಯುವದೆಂದು ನಂಬಬಹುದಾಗಿದೆ. ಪ್ರತಿಯೊಬ್ಬನೂ ತನ್ನ ಹತ್ತು ದಿನದ ಗಳಿಕೆಯನ್ನು ನಿಧಿಗೆ ನೀಡಬೇಕೆಂದು ಬಾಬು ರಾಜೇಂದ್ರರು ಹಿಂದೆ ಬಿನ್ನವಿಸಿಕೊಂಡದ್ದನ್ನು ಇಲ್ಲಿ ನೆನವರಿಕೆಗೆ ತಂದು ಕೊಳ್ಳಬಹುದು.

ಕರ್ಮವೀರ

ಪ್ರತಿ ಸೋಮವಾರ ಹುಬ್ಬಳ್ಳಿಯಿಂದ ಹೊರಡುವ ವಾರಪತ್ರಿಕೆ

ಸಂಸ್ಥಾಪಕರು :
ಶ್ರೀ. ರಂ. ರಾ. ದಿವಾಕರ

ಸಂಪಾದಕರು :
ಶ್ರೀ. ಹ. ರಾ. ಪುರೋಹಿತ

ಹೊಸ ವರ್ಗಣಿ ವಿವರಗಳು :

೧ ವರ್ಷಕ್ಕೆ	ರೂ. ೬—೧೨—೦
೬ ತಿಂಗಳಿಗೆ	ರೂ. ೩—೮—೦
೩ ,,	ರೂ. ೨—೦—೦

ಬಿಡಿಸಂಚಿಕೆ : ೨ ಆಣೆ

ವ್ಹಿ. ಪಿ. ದ್ವಾರಾ ಕಳಿಸಿದರೆ ೦—೬—೦ ಹೆಚ್ಚು ಬೀಳುವದು.

ಸೂಚನೆ : ಈವರೆಗೆ ವರ್ಷಕ್ಕೆ ೪ ವಾರ ರಜೆ ತೆಗೆದುಕೊಳ್ಳುವ ಪರಿಪಾಠವಿತ್ತು. ಓದುಗರಿಗೆ ಇದರಿಂದ ತೊಂದರೆಯಾಗುವದನ್ನರಿತು ಇನ್ನು ಮುಂದೆ ರಜೆಗಳನ್ನು ರದ್ದುಗೊಳಿಸಿ ವರ್ಷದಲ್ಲಿ ೫೨ ಸಂಚಿಕೆಗಳನ್ನು ತೆಗೆಯಲಾಗುವದು. ವಿಶೇಷ ಸಂಚಿಕೆಗಳನ್ನು ಹೊರಡಿಸಿದರೆ ಅದರ ಬಗ್ಗೆ ಪ್ರತ್ಯೇಕ ಬೆಲೆಯನ್ನು ಕೊಡಬೇಕಾಗುವದು.

ಚಂದಾದಾರರು : ತಮ್ಮ ವರ್ಗಣಿ, ಸಂಚಿಕೆಗಳ ತಲುಪುವಿಕೆಯ ಸಂಬಂಧದ ದೂರು ಮೊದಲಾದವುಗಳ ಬಗ್ಗೆ ಪತ್ರ ವ್ಯವಹಾರವನ್ನು ಮಾಡುವಾಗ ವಿಳಾಸದ ಚೀಟಿಯ ಮೇಲಿರುವ ಚಂದಾ ನಂಬರುಗಳನ್ನು ಉಲ್ಲೇಖಿಸಬೇಕು. ಇಲ್ಲದಿದ್ದರೆ ಸಾವಿರಗಟ್ಟಲೆ ಚಂದಾದಾರರಲ್ಲಿ ನಿಮ್ಮ ಹೆಸರನ್ನು ಕಂಡು ಹಿಡಿಯುವದು ಸಾಧ್ಯವಾಗದು.

ಲೇಖಕರು: "ಕರ್ಮವೀರ" ದಲ್ಲಿ ಪ್ರಕಟನೆಗಾಗಿ ಕಳಿಸುವ ಲೇಖ ಕತೆ ಕವಿತೆ ಮೊದಲಾದವುಗಳು ಅಸ್ವೀಕೃತವಾದಲ್ಲಿ ತಿರುಗಿ ಪಡೆಯಲಪೇಕ್ಷಿಸುತ್ತಿದ್ದರೆ ಲೇಖದ ಸಂಗಡಲೇ ಅವಶ್ಯವಿದ್ದಷ್ಟು ಅಂಚೆ ತಿಕೀಟುಗಳನ್ನು ಕಳಿಸಿರಬೇಕು. ಹಾಗೆ ಮಾಡದೆ ಮುಂದೆ ಆ ಲೇಖಗಳ ಬಗ್ಗೆ ಪತ್ರವ್ಯವಹಾರ ಮಾಡಿದರೆ ಅಥವಾ ತಿರುಗಿ ಕಳಿಸಬೇಕೆಂದರೆ ಅದು ಸಾಧ್ಯವಾಗದು. ಸ್ವೀಕೃತವಾದ ಕತೆಗಳಿಗೂ ಪೂರ್ಣಾಕಾರದ, ಅಂದರೆ "ಕರ್ಮವೀರ"ದ ಎರಡು ಕಾಲಂ ಮೀರಿದ ಲೇಖಗಳಿಗೂ ನಿರ್ದಿಷ್ಟ ಪ್ರತಿಫಲ ಕೊಡಲಾಗುವದು.

— ವ್ಯವಸ್ಥಾಪಕ,
"ಕರ್ಮವೀರ" ಹುಬ್ಬಳ್ಳಿ.

ಸಂಪುಟ ೨೧ ಸಂಚಿಕೆ ೨

ಕರ್ಮವೀರ

ಸೋಮವಾರ ಚೈತ್ರ ಬ. ೧೨

ತಾರೀಖು ೨೫—೪—೧೯೪೯

ಕರ್ನಾಟಕ ಪ್ರಾಂತ ರಚನೆ

ತ್ರಿಮೂರ್ತಿಗಳ ವರದಿಯನ್ನು ಕಾಂಗ್ರೆಸ ಕಾರ್ಯ ಸಮಿತಿಯು ಸ್ವೀಕರಿಸಿದ್ದರಿಂದುಂಟಾದ ಪರಿಸ್ಥಿತಿಯನ್ನು ವಿಚಾರಿಸುವದಕ್ಕಾಗಿ ಕಳೆದ ಬುಧವಾರ ಹುಬ್ಬಳ್ಳಿಯಲ್ಲಿ ಕರ್ನಾಟಕ ಏಕೀಕರಣ ಮಹಾ ಸಮಿತಿಯ ವಿಶೇಷ ಅಧಿವೇಶನವು ಸೇರಿತ್ತು. ಸಭಿಕರು ಮತ್ತು ಆಮಂತ್ರಿತರು ವರದಿಯ ಬಗ್ಗೆ ಇದ್ದ ತಮ್ಮ ಪ್ರತಿಕ್ರಿಯೆಗಳನ್ನು ಬಲು ಆವೇಶದಿಂದ ವ್ಯಕ್ತಪಡಿಸಿ ಕೂಡಲೆ ಕರ್ನಾಟಕ ಪ್ರಾಂತವನ್ನು ರಚಿಸಬೇಕು, ಇಲ್ಲದಿದ್ದರೆ ಕರ್ನಾಟಕದಲ್ಲಿ ಅಸಂತೋಷ ಅತೃಪ್ತಿಯುಂಟಾಗುವದೆಂದು ಹೇಳಿದರು. ಕೂಲಂಕಷ ಚರ್ಚೆಯಾದ ನಂತರ ಶ್ರೀ. ದಾತಾರ ಬಳವಂತರಾಯರು ಮಂಡಿಸಿದ ಗೊತ್ತುವಳಿಯು ಸರ್ವಾನುಮತದಿಂದ ಸ್ವೀಕೃತವಾಯಿತು. ಆ ಗೊತ್ತುವಳಿಯ ಆಶಯ ಇಂತಿದೆ—

'ದರ್ ಸಮಿತಿಯ ಪ್ರತಿಗಾಮೀ ವರದಿಯನ್ನು ನಿರಾಕರಿಸಿ ಭಾಷಾನ್ವಯ ಪ್ರಾಂತ ರಚನೆಯ ತತ್ವವನ್ನು ತ್ರಿಮೂರ್ತಿಗಳು ಒಪ್ಪಿದ್ದು ಸಂತೋಷದಾಯಕವಾಗಿದೆ. ಕರ್ನಾಟಕದ ಕಷ್ಟಪರಂಪರೆಗಳನ್ನು ಒಪ್ಪಿದ್ದರೂ ಪ್ರಾಂತೀಕರಣವನ್ನು ಕೆಲ ವರುಷ ಮುಂದೂಡಬೇಕೆಂದು ಹೇಳಿದ್ದನ್ನು ಈ ಸಭೆಯು ನಿರಾಕರಿಸುತ್ತದೆ. ಆಂಧ್ರಕ್ಕಿಂತಲೂ ಕರ್ನಾಟಕದಲ್ಲಿ ಪ್ರಾಂತೀಕರಣದ ಬಗ್ಗೆ ತೀವ್ರ ಮತ್ತು ಒಮ್ಮತದ ಬೇಡಿಕೆಯಿದ್ದರೂ ಆಂಧ್ರ ಪ್ರಾಂತೀಕರಣಕ್ಕೆ ಪ್ರಥಮ ಪ್ರಾಶಸ್ತ್ಯ ಕೊಟ್ಟದ್ದನ್ನು ಪ್ರತಿಭಟಿಸುತ್ತದೆ. ಕಾಂಗ್ರೆಸ ವರಿಷ್ಠರು ಮತ್ತು ಕೇಂದ್ರ ಸರಕಾರದವರು ೧೯೩೫ ನೇ ಇಸ್ವಿಯ ೨೯೦ ನೇ ಕಲ್ಮಿನನ್ವಯ ಒಕ್ಕೂಟ ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸುವ ಪ್ರಾಥಮಿಕ ಕ್ರಮಗಳನ್ನು ಕೈಕೊಳ್ಳಬೇಕು. ಮುಂದೆ ಮೈಸೂರು ಮತ್ತು ಹೈದರಾಬಾದ ಸಂಸ್ಥಾನದಲ್ಲಿನ ಕನ್ನಡ ಭಾಗವನ್ನು ಸೇರಿಸುವ ಅವಕಾಶವಿರಬೇಕು—

ಹೀಗಾಗದಿದ್ದಲ್ಲಿ ಕರ್ನಾಟಕದಲ್ಲಿ ಅತ್ಯಂತ ಅತೃಪ್ತಿ ಮತ್ತು ಅಸಂತೋಷ ಹಬ್ಬಿ ಜನತೆಯ ತಾಳ್ಮೆಯು ಕೊನೆಯ ಮಟ್ಟಕ್ಕೆ ಹೋಗುವದು. ಇದರಿಂದ ಅಶಾಂತಿಯುದ್ಭವಿಸದಂತೆ ನೋಡಿಕೊಳ್ಳುವದು ವರಿಷ್ಠರಿಗೂ ದುಸ್ತರವಾದೀತು.

• ಅಖಂಡ ಕರ್ನಾಟಕ ಪ್ರಾಂತ ರಚನೆಗೆ ಸಹಾಯವಾಗುವಂತೆ ಮೈಸೂರಿನ ವಿಲಯನಕ್ಕೆ ಒಪ್ಪಲು ಈ ಸಭೆಯು ಮೈಸೂರು ಮಹಾರಾಜರು ಮತ್ತು ಮೈಸೂರು ಕಾಂಗ್ರೆಸ ಸಮಿತಿಯನ್ನು ಬಿನ್ನವಿಸುತ್ತದೆ. ಮೈಸೂರಿನ ಜನತೆಯಲ್ಲಿ ವಿಲಯನಕ್ಕೆ ವಿರೋಧಾಭಿಪ್ರಾಯವಿಲ್ಲ; ಆದರೂ ವಿರೋಧಕಶಕ್ತಿಗಳು ಬಯಸಿದಲ್ಲಿ ಅವುಗಳ ವಿರುದ್ಧ ಚಳವಳಿ ಹೂಡಲು ನಾವು ಸಿದ್ಧರಿದ್ದೇವೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯು ೧೯೪೮ ನೇ ಜಾನೇವಾರಿ ೧೪ ರಂದು ಮಾಡಿದ ಗೊತ್ತುವಳಿಯಲ್ಲಿ ಹೇಳಿದಂತೆ ಮತ್ತೆ ಈ ಪ್ರಶ್ನೆಯನ್ನು ಕೈಕೊಳ್ಳಬೇಕು. ಪ್ರಾಂತೀಯ ಕಾಂಗ್ರೆಸ ಸಮಿತಿಯ ಒಪ್ಪಿಗೆಯನ್ನು ಪಡೆಯದೆ ಕಾಂಗ್ರೆಸ ಕಾರ್ಯ ಸಮಿತಿಯು ಈ ವರದಿಯನ್ನು ಸ್ವೀಕರಿಸಿದ್ದನ್ನು ಪ್ರಾಂತೀಯ ಕಾಂಗ್ರೆಸ ಸಮಿತಿಯು ಪ್ರತಿಭಟಿಸಬೇಕು ಮತ್ತು ಸ್ವಾತಂತ್ರ್ಯ ದೊರೆತ ೨೦ ತಿಂಗಳ ವರೆಗೂ ಅಲಕ್ಷಿಸಿದ ಈ ಪ್ರಾಂತೀಕರಣದ ಪ್ರಶ್ನೆಯನ್ನು ಕೂಡಲೆ ನಿರ್ಣಯಿಸಲೊಪ್ಪದಿದ್ದರೆ ಸರಕಾರ ಮತ್ತು ಕಾಂಗ್ರೆಸ ಸಮಿತಿಗಳಲ್ಲಿದ್ದ ತಮ್ಮ ಪ್ರತಿನಿಧಿಗಳನ್ನು ಹಿಂದಕ್ಕೆ ಕರೆಸಿಕೊಳ್ಳುವದಾಗಿ ಸ್ಪಷ್ಟಪಡಿಸಬೇಕು.

ಮಹಾ ಸಮಿತಿಯು ಸ್ವೀಕರಿಸಿದ ಈ ಗೊತ್ತುವಳಿಯು ಸ್ಪಷ್ಟವಿದೆ. ಕರ್ನಾಟಕ ಪ್ರಾಂತರಚನೆಯ ಪ್ರಶ್ನೆಯನ್ನು ಮುಂದೂಡಿದ್ದನ್ನು ತೀವ್ರ ಶಬ್ದಗಳಲ್ಲಿ ಪ್ರತಿಭಟಿಸಲಾಗಿದೆ. ಅದರಿಂದ ಉದ್ಭವವಾಗಬಹುದಾದ ಅಸಂತೋಷ ಅತೃಪ್ತಿಗಳನ್ನು ನಿಯಂತ್ರಿಸುವದು ಕಾಂಗ್ರೆಸ ವರಿಷ್ಠರಿಗೂ ಅಶಕ್ಯವಾಗುವದೆಂದು ಹೇಳಿದೆ. ಕರ್ನಾಟಕವು ಈ ವರೆಗೆ ಕಾಂಗ್ರೆಸ್ಸಿನ ಮೇಲೆ ಅಚಲವಾದ ಶ್ರದ್ಧೆಯನ್ನಿಟ್ಟು ಕಾಂಗ್ರೆಸ್ಸಿನ ಮುಖಾಂತರವಾಗಿಯೇ ತನ್ನ ಪ್ರಾಂತವನ್ನು ಪಡೆಯಬೇಕೆಂದು ಆಸ್ಥೆಯಿಂದ ಒಂದೇಸವನೆ ಕಾರ್ಯ ಮಾಡುತ್ತ ಬಂದಿದೆ. ಆದರೆ ತನ್ನೀ ಧೋರಣದಿಂದ ಪ್ರಾಂತರಚನೆಯು ದೂರ ಹೋಗಹತ್ತಿದ್ದರಿಂದ ಇನ್ನು ಮುಂದೆ ಕಾಂಗ್ರೆಸ್ಸಿನ ಕೂಡ ಅಸಹಕಾರ ಧೋರಣವನ್ನು ಸ್ವೀಕರಿಸಬೇಕೆಂಬ ನಿರ್ಧಾರಕ್ಕೆ ಮಹಾಸಮಿತಿಯು ಬಂದಿದೆ—

ಮಹಾಸಮಿತಿಯು ಒಕ್ಕೂಟ ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸಬೇಕೆಂದು ಕೇಳಿಕೊಂಡಿದ್ದರಿಂದ ಮೈಸೂರು ಸಹಿತ ಕರ್ನಾಟಕ ಪ್ರಾಂತರಚನೆಯ ಧ್ಯೇಯವನ್ನು ಬಿಟ್ಟುಗೊಟ್ಟತೆಂದು ಮಾತ್ರ ಯಾರೂ ತಿಳಿಯಬಾರದು. ಮೈಸೂರು ಕರ್ನಾಟಕದಲ್ಲಿ ಸೇರಬೇಕಾದರೆ ಕೆಲ ಅವಧಿ ಹಿಡಿಯುವುದಾದ್ದರಿಂದ ಕರ್ನಾಟಕಸ್ಥರು ಅಷ್ಟು ಸಮಯ ಕೂಡ ಕಾಯಲಾರದಾದ್ದರಿಂದ ಒಕ್ಕೂಟ ಕರ್ನಾಟಕ ಪ್ರಾಂತವನ್ನು ಕೂಡಲೆ ರಚಿಸಬೇಕೆಂದು ಸಮಿತಿಯ ಗೊತ್ತುವಳಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಕೂಡಲೆ ಒಕ್ಕೂಟ ಕರ್ನಾಟಕ ಪ್ರಾಂತವನ್ನು ರಚಿಸಿ ಮುಂದೆ ಕಾಲಾನುಕ್ರಮ ಮೈಸೂರು ಸಂಸ್ಥಾನ ಮತ್ತು ಹೈದರಾಬಾದದ ಕನ್ನಡ ಪ್ರದೇಶವನ್ನು ಕರ್ನಾಟಕದಲ್ಲಿ ಸೇರಿಸಬೇಕು ಎಂದು ಅದು ಹೇಳಿದೆ. ಸಂಸ್ಥಾನ ಪ್ರದೇಶವು ಇಂತು ಕರ್ನಾಟಕದಲ್ಲಿ ಸೇರಬೇಕಾದರೆ ಮೈಸೂರು ಮಹಾರಾಜರ ಮತ್ತು ಅಲ್ಲಿನ ಜನತೆಯ ಒಪ್ಪಿಗೆ ಅವಶ್ಯವಾಗಿದ್ದರಿಂದ ಅವರು ಆ ಬಗೆಯ ಒಪ್ಪಿಗೆಯನ್ನು ಕೊಡಬೇಕೆಂದೂ ಮಹಾಸಮಿತಿಯು ಬಿನ್ನವಿಸಿಕೊಂಡಿದೆ. ಆದರೆ ಸಮಿತಿಯು ಸ್ವೀಕರಿಸಿದ ಈ ಧೋರಣವು ಇಂದಿನ ಪರಿಸ್ಥಿತಿಯಲ್ಲಿ ಸೂಕ್ತವಾಗಲಾರದು. ನಾವು ಈ ಮೊದಲು ಹಲವಾರು ಸಲ ಹೇಳಿದಂತೆ ಮೈಸೂರನ್ನು ಬಿಟ್ಟು ಕರ್ನಾಟಕ ಪ್ರಾಂತವನ್ನು ರಚಿಸುವದು ಹಾನಿಕರವಾದುದು. ಒಮ್ಮೆ ಮೈಸೂರ ಬಿಟ್ಟು ಕರ್ನಾಟಕ ಪ್ರಾಂತ ರಚಿತವಾದರೆ ಮುಂದೆ ಕಾಲಾನುಕ್ರಮ ಅದರ ಸೇರ್ಪಡೆಯಾಗುವದು ಅಶಕ್ಯವಾಗಬಹುದು. ಆದುದರಿಂದ ಮೈಸೂರು ಸಹಿತ ಕರ್ನಾಟಕ ಪ್ರಾಂತ ರಚಿಸುವತ್ತ ಗಮನಿಸುವದೇ ಅವಶ್ಯವಾಗಿದೆ.

ಮೈಸೂರಿನವರು ನಮ್ಮವರೇ ಆದ್ದರಿಂದ ಮೈಸೂರು ಸಹಿತ ಕರ್ನಾಟಕ ಪ್ರಾಂತರಚನೆಯಿಂದಾಗುವ ಲಾಭಗಳನ್ನು ಅವರಿಗೆ ತಿಳಿಸಿಕೊಡುವದಕ್ಕಾಗಿ ಉತ್ತರ ಕರ್ನಾಟಕದ ಮಹಾ ಜನಗಳು ಪ್ರಯತ್ನಿಸುವದು ಕರ್ತವ್ಯವಾಗಿದೆ. ಮೈಸೂರಿನ ಜನತೆ ಬಹಳ ದಿನಗಳಿಂದ ಉತ್ತರ ಕರ್ನಾಟಕದವರಿಂದ ಬೇರೆಯಿದ್ದುದರಿಂದ ಪರಸ್ಪರ ಸಮ್ಮಿಲನದಿಂದ ಇರಬಹುದಾಗಿದ್ದ ಸ್ನೇಹಸಂಬಂಧ ಉಳಿದಿಲ್ಲ. ಆದರಿಂದ ಅವರಲ್ಲಿ ಕೆಲವರು ಕರ್ನಾಟಕದಿಂದ ಪ್ರತ್ಯೇಕವಾಗಿಯೆ ಇರಬೇಕೆಂದು ಬಯಸುವದು ಸ್ವಾಭಾವಿಕ. ಆದರಲ್ಲಿಯೂ ಈಗ ಮೈಸೂರಿನ ಜನತೆಗೆ ಹೊಣೆಗಾರ ಸರಕಾರ ಸಿಕ್ಕದ್ದರಿಂದ ಮೈಸೂರಿನ ಅರಸರ ಬಗ್ಗೆ ಸತ್ಯಾಗ್ರಹ ಕಾಲದಲ್ಲಿ ಇದ್ದ ಅಸಂತೋಷ ಭಾವನೆಗಳು ಇಲ್ಲದಂತಾಗಿವೆ. ಅದೇನೇ ಇದ್ದರೂ ಸರಿಯಾದ ಪ್ರಚಾರ ನಡೆದುದಾದರೆ ಮೈಸೂರು ಮಹಾರಾಜರೂ ಜನರೂ ಮೈಸೂರಿನ ವಿಲಯನಕ್ಕೆ ಒಪ್ಪುವರೆಂದು ನಮಗೆ ಬಲವಾದ ವಿಶ್ವಾಸವಿದೆ. ಮೈಸೂರು ವಿಲಯನಕ್ಕೆ ಒಪ್ಪಿದ ಕ್ಷಣದಲ್ಲಿಯೆ ಕರ್ನಾಟಕ ಪ್ರಾಂತ ರಚಿತವಾಗುವದು. ಕಾಂಗ್ರೆಸ ವರಿಷ್ಠರು ಮತ್ತು ರಾಷ್ಟ್ರಪತಿಗಳು ಆ ಬಗೆಯ ಆಶ್ವಾಸನವನ್ನು ಕೊಟ್ಟಿದ್ದಾರೆ.

ಕಾಂಗ್ರೆಸ ವರಿಷ್ಠರು ಮತ್ತು ಹಿಂದುಸ್ತಾನ ಸರಕಾರದವರು ಒಂದು ವೇಳೆ ಕನ್ನಡಿಗರ ಈ ತೀವ್ರತರವಾದ ಬೇಡಿಕೆಯನ್ನು ಮನ್ನಿಸದಿದ್ದರೆ ಪ್ರಾಂತೀಯ ಕಾಂಗ್ರೆಸ ಸಮಿತಿಯವರು ಅಸಹಕಾರ ಧೋರಣೆಯನ್ನು ವಹಿಸಿ ತಮ್ಮ ಪ್ರತಿನಿಧಿಗಳನ್ನೆಲ್ಲ ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ಈ ಗೊತ್ತುವಳಿಯ ಕೊನೆಯ ಭಾಗದಲ್ಲಿ ಹೇಳಲಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಈ ಬಗೆಯ ಆಹ್ವಾನ ಕೊಡುವದು ಕಾಂಗ್ರೆಸನಿಷ್ಠ ಕರ್ನಾಟಕಕ್ಕೆ ಶೋಭಿಸದು. ಅದುದರಿಂದ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಮೈಸೂರು ವಿಲಯನವಾಗುವದರ ಕಡೆಗೇ ಗಮನಿಸುವದು ಅವಶ್ಯವಾಗಿದೆ. ಹಿಂದುಸ್ತಾನಕ್ಕಾಗಿ ಪ್ರಜಾತಂತ್ರವನ್ನು ಇಷ್ಟೊಂದು ಸ್ವಾರ್ಥತ್ಯಾಗದಿಂದ ಸಂಪಾದಿಸಿದ ಕಾಂಗ್ರೆಸ್ ವರಿಷ್ಠರು ಪ್ರಜೆಗಳ ಬೇಡಿಕೆಯು ಇಷ್ಟೊಂದು ಪ್ರಬಲವಾದರೆ ಅದನ್ನು ನಿರಾಕರಿಸಿ ಪ್ರಜಾತಂತ್ರ ತತ್ವಕ್ಕೆ ಅರೆದಾಳ ಬಡೆಯಲಿಕ್ಕಿಲ್ಲೆಂದು ನಾವು ಭಾವಿಸುತ್ತೇವೆ. ಮೇಲಿನ ಗೊತ್ತುವಳಿಯಲ್ಲಿಯ ಕಳಕಳಿಯನ್ನು ನೆನೆದು ಕಾಂಗ್ರೆಸ ವರಿಷ್ಠರು ತಾವು ಆಶ್ವಾಸಿಸಿದಂತೆ ಪರಿಸ್ಥಿತಿಯನ್ನು ಪುನರ್ವಿಮರ್ಶಿಸಿ ಯಾವುದೊಂದು ಪ್ರಾಂತಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡದೆ, ಭಾಷಾನ್ವಯ ಪ್ರಾಂತಗಳನ್ನೆಲ್ಲ ಕೂಡಲೆ ರಚಿಸುವ ಕ್ರಮವನ್ನು ಕೈಕೊಂಡು ದೇಶದಲ್ಲಿ ಉದ್ಭವಿಸಬಹುದಾದ ಅಸಂತೋಷ, ಅತೃಪ್ತಿ, ಅಶಾಂತಿಯನ್ನು ತಪ್ಪಿಸುವರೆಂದು ಬಲವಾಗಿ ನಂಬುತ್ತೇವೆ.

× × × ×

ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳ ಸಮಸ್ಯೆ ಇನ್ನೂ ಬಗೆಹರಿಯಲೊಲ್ಲದು. ಬಗೆ ಬಗೆಯ ತೊಡಕುಗಳು ಇದರಲ್ಲಿ ಉದ್ಭೂತವಾಗಹತ್ತಿವೆ. ವಿಶೇಷವಾಗಿ ತಿರುವಾಂಕೂರಿನ ಸಮಸ್ಯೆ ಹೆಚ್ಚು ಜಟಿಲವಾಗಿದೆ. ತಿರುವಾಂಕೂರಿನಲ್ಲಿ ಅರಸರಿದ್ದರೂ ಅಲ್ಲಿನ ಆಡಳಿತ ಶ್ರೀ ಪದ್ಮನಾಭ ದೇವರ ಹೆಸರಿನಿಂದಲೆ ನಡೆಯುತಿದೆ. ಈ ಪರಂಪರೆಯನ್ನು ತಾವು ಬಿಟ್ಟುಗೊಡುವದು ಹೇಗೆ? ಎಂದು ಅರಸರು ಅಭಿಪ್ರಾಯಪಡುತಿರುವರು. ತಿರುವಾಂಕೂರಿನಲ್ಲಿಯ ಪರಂಪರೆ ಸಂಪ್ರದಾಯಗಳನ್ನು ನೋಡಿದರೆ ಅರಸರ ಈ ಹೇಳಿಕೆಯು ಅವಾಸ್ತವವಿಲ್ಲ ಎಂದು ತೋರುತ್ತದೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಈ ಮಾತು ಎಷ್ಟರ ಮಟ್ಟಿಗೆ ಸರಿಹೋಗಬಲ್ಲುದು ಎಂಬುದು ಮತಭೇದದ ಮಾತಾಗಿದೆ. ಸಂಸ್ಥಾನ ಖಾತೆಯವರಿಗೆ ತಿರುವಾಂಕೂರು ಅರಸರ ಈ ಪ್ರತಿಪಾದನೆಯಿಂದ ಆಶ್ಚರ್ಯಯಾಗಿದೆಯಲ್ಲದೆ ಒಕ್ಕೂಟದ ರಚನೆಯಾದಾಗ ರಾಜಪ್ರಮುಖರ ನೇಮಕದ ಬಗ್ಗೆ ತೊಡಕು ಉಂಟಾಗಬಹುದೆಂದು ಭಾವಿಸಲಾಗುತ್ತದೆ. ತಾವು ಸಿಂಹಾಸನತ್ಯಾಗಮಾಡಿದರೆ ಈ ಬಗೆಯ ತೊಡಕು ಉದ್ಭವಿಸಲಾರದು ಎಂದು ಮಹಾರಾಜರು ಅಭಿಪ್ರಾಯಪಡುತಿರುವರಂತೆ. ಹೀಗಾದಲ್ಲಿ ಮುಂದೆ ಬರುವ ಅರಸರು ಮೇಲೆ ಉಲ್ಲೇಖಿಸಿದ ಆಕ್ಷೇಪವನ್ನೆತ್ತಲಾರರೆಂದು ಸಂಸ್ಥಾನಖಾತೆಯ ಅಭಿಪ್ರಾಯ. ಇವೆರಡೂ ಸಂಸ್ಥಾನಗಳನ್ನು ಒಟ್ಟುಗೂಡಿಸಿ ಚೀಫ ಕಮೀಶನರರ ಪ್ರಾಂತವನ್ನು ಮಾಡಿ ಕೇಂದ್ರ ಸರಕಾರದವರೆ ಆಡಳಿತೆಯನ್ನು ನಡೆಸಬೇಕು ಎಂಬ ವಿಚಾರವೂ ನಡೆದಿದೆ. ಅಲ್ಲದೆ ಇವೆರಡೂ ಸಂಸ್ಥಾನಗಳನ್ನು ಮದ್ರಾಸ ಪ್ರಾಂತದಲ್ಲಿ ವಿಲೀನಮಾಡಿ ಬಿಡಬೇಕೆಂಬ ವಿಚಾರವೂ ನಡೆದಿದೆ. ಹೀಗೆ ಬಗೆ ಬಗೆಯ ವಿಚಾರ ನಡೆದಿದ್ದರಿಂದ ಸಮಸ್ಯೆ ಹಾಗೆಯೆ ಉಳಿದಿದೆ. ಇವೆರಡೂ ಸಂಸ್ಥಾನಗಳನ್ನು ವಿಲೀನಗೊಳಿಸಿ ಸ್ವತಂತ್ರ ಕೇರಳ ಪ್ರಾಂತವನ್ನು ರಚಿಸಿ ಬಿಟ್ಟರೆ ಈ ತೊಡಕುಗಳು ಬಹಳಮಟ್ಟಿಗೆ ನಿವಾರಣೆಯಾಗಬಹುದು. ಜನತೆಯ ಕೈಗೆ ಅಧಿಕಾರವನ್ನು ಒಪ್ಪಿಸಿ ಬಿಡುವದರಿಂದ ಅರಸರ ಮೇಲಿನ ಹೊಣೆಯೂ ಇಲ್ಲದಂತಾಗಬಹುದು. ಸದ್ಯದ ಪರಿಸ್ಥಿತಿಯಲ್ಲಿ ಹೀಗೆ ಮಾಡುವದೆ ಸೂಕ್ತವಾಗಿದೆ.

ಪೂರ್ವ ಪಂಜಾಬದ ಪ್ರಶ್ನೆ ಬಿಟ್ಟಿತು

ವಿಂಧ್ಯ ಪ್ರದೇಶ ಒಕ್ಕೂಟದ ವಿಸರ್ಜನೆ

ಸಂಸ್ಥಾನಗಳ ಆರ್ಥಿಕ ಸಮೀಕರಣ

ಪೂರ್ವ ಪಂಜಾಬ ಪ್ರಶ್ನೆ

ಪೂರ್ವ ಪಂಜಾಬ ಕಾಂಗ್ರೆಸ ಶಾಸನ ಸಭಾ ಪಕ್ಷದಲ್ಲಿ ಇಬ್ಬಂದಿತನವಾದ್ದರಿಂದ ಭಾರ್ಗವ ಮಂತ್ರಿಮಂಡಲವು ರಾಜೀನಾಮೆ ಕೊಟ್ಟು ಸಾಚಾರ ಮಂತ್ರಿಮಂಡಲವು ರಚಿತವಾಗ ಬೇಕಾಯಿತು. ಒಂದೇ ಬಗೆಯ ಧ್ಯೇಯ ಧೋರಣೆಗಳನ್ನಿಟ್ಟುಕೊಂಡು, ಕಾಂಗ್ರೆಸಮಹಾ ಸಂಸ್ಥೆಯ ಪ್ರತಿನಿಧಿಗಳಾಗಿ ಆರಿಸಿ ಹೋಗಿರುವವರಲ್ಲಿ ಇಂತು ಭಿನ್ನಾಭಿಪ್ರಾಯವಾದುದು ಶೋಚನೀಯವಾದುದು. ಅಧಿಕಾರಲಾಲಸೆಯೆ ಇದಕ್ಕೆ ಮೂಲವೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಆದರೆ ಪ್ರಾಂತದ ಆಡಳಿತೆಯು ಸುಸೂತ್ರವಾಗಿ ಸಾಗಬೇಕಾದರೆ ಆಡಳಿತೆ ವಹಿಸಿದ ಪಕ್ಷದಲ್ಲಿಯೆ ಭಿನ್ನಾಭಿಪ್ರಾಯವಾಗುವದು ಇಷ್ಟವಲ್ಲ. ಇದನ್ನು ನೆನೆದು ಕಾಂಗ್ರೆಸ ವರಿಷ್ಠರು ಎರಡೂ ಪಕ್ಷದವರನ್ನು ಕರೆಯಿಸಿಕೊಂಡು ಒಡಂಬಡಿಕೆ ಮಾಡಿ ಎರಡೂ ಪಕ್ಷದ ಪ್ರತಿನಿಧಿಗಳನ್ನೊಳಕೊಂಡ ಮಂತ್ರಿಮಂಡಲವನ್ನು ರಚಿಸಲು ಆದೇಶಿಸಿದರು. ಕಾಂಗ್ರೆಸ ಪಕ್ಷದ ಧುರೀಣರಾಗಿ ಆರಿಸಿಬಂದ ಸಾಚಾರರು ಕಾಂಗ್ರೆಸ ವರಿಷ್ಠರ ಮುಂದೆ ಹಾಗೆ ಮಾಡುವದಾಗಿ ಒಪ್ಪಿಕೊಂಡರೂ ತಮಗೆ ವಿರುದ್ಧ ಮತ ಕೊಟ್ಟವರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳದಿದ್ದುದರಿಂದ ಮತ್ತೆ ತೊಡಕು ಉಂಟಾಗಿತ್ತು. ಆದರೆ ಅವರು ತಮ್ಮ ಧೋರಣದ ಪುನರ್ವಿಮರ್ಶೆಮಾಡಿ ಭಾರ್ಗವರನ್ನೂ ಅವರ ಪಕ್ಷದವರನ್ನೂ ಮಂತ್ರಿಮಂಡಲದಲ್ಲಿ ಸೇರಿಸಿಕೊಂಡುದು ಬಹಳ ಸ್ತುತ್ಯವಾಗಿದೆ. ಪ್ರಾಂತದ ಅನೇಕ ಪ್ರಶ್ನೆಗಳನ್ನು ಬಿಡಿಸಿ ಸ್ವರಾಜ್ಯದ ಸುಫಲಗಳು ಜನತೆಗೆ ಸಿಕ್ಕುವಂತೆ ಮಾಡಬೇಕಾದರೆ ಆಡಳಿತೆ ವಹಿಸಿದ ಪಕ್ಷದಲ್ಲಿ ಯಾವದೇ ಬಗೆಯ ಭಿನ್ನಾಭಿಪ್ರಾಯವಿರುವದು ಇಷ್ಟವಲ್ಲ. ಇದನ್ನರಿತು ಆಯಾ ಪ್ರಾಂತಗಳಲ್ಲಿಯ ಕಾಂಗ್ರೆಸ ಶಾಸನ ಸಭಾ ಪಕ್ಷಗಳು ಅಧಿಕಾರ ಲಾಲಸೆಯ ವ್ಯಾಮೋಹಕ್ಕೆ ಬಲಿ ಬೀಳದೆ ಇಡೀ ರಾಷ್ಟ್ರದ ಮತ್ತು ತಮ್ಮ ತಮ್ಮ ಪ್ರಾಂತಗಳ ಸಾರ್ವಾಂಗಿಕ ಉನ್ನತಿಯನ್ನು ನೆನೆದು ಒಕ್ಕಟ್ಟಿನಿಂದ ವರ್ತಿಸಬೇಕೆಂದು ಸೂಚಿಸಬಯಸುತ್ತೇವೆ.

ವಿಂಧ್ಯಪ್ರದೇಶದಲ್ಲಿ

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಂದಿನಿಂದ ಅನೇಕ ಕಾಂಗ್ರೆಸ್ಸಿಗರಲ್ಲಿ ಅಧಿಕಾರಲಾಲಸೆ, ಲಂಚಗುಳಿತನ, ಪಕ್ಷಾಂಧತೆ ಮೊದಲಾದವುಗಳು ಹೆಚ್ಚುತಿವೆಯೆಂಬುದಕ್ಕೆ ಇದೀಗ ಅನೇಕ ನಿದರ್ಶನಗಳು ಕಂಡು ಬರುತ್ತಿವೆ. ಅವೆಲ್ಲಕ್ಕೂ ಕಳಸ ಕಟ್ಟಿದಂತೆ ವಿಂಧ್ಯಪ್ರದೇಶದಲ್ಲಿಯ ಇತ್ತೀಚಿನ ಘಟನೆಗಳಿವೆ. ಅಲ್ಲಿನ ಕಾಂಗ್ರೆಸ ಸಮಿತಿಯು ಮಂತ್ರಿಮಂಡಲದ ವಿರುದ್ಧ ಅವಿಶ್ವಾಸದ ಗೊತ್ತುವಳಿಯನ್ನು ಪಾಸುಮಾಡಿದೆ. ಆದರೆ ಈಗ ಆ ಕಾಂಗ್ರೆಸ ಸಮಿತಿಯನ್ನೇ ವಿಸರ್ಜಿಸಿಬಿಟ್ಟಿದ್ದರಿಂದ ಅವಿಶ್ವಾಸದ ಗೊತ್ತುವಳಿ ನಿಷ್ಕ್ರಿಯವಾದಂತಾಗಿದೆ. ಇದರಿಂದ ಕಾಂಗ್ರೆಸ್ಸಿಗರು ಕೆರಳಿದಂತಾಗಿ ಮಂತ್ರಿಗಳು ನಡೆಸಿದ ಲಂಚಗುಳಿತನ, ಅಧಿಕಾರದ ದುರುಪಯೋಗ, ಸಾರ್ವಜನಿಕನಿಧಿಯ ಅಪವ್ಯಯ ಮುಂತಾದ ವಿವರಗಳನ್ನೆಲ್ಲ ಪ್ರಕಟಿಸಿಟ್ಟಿದ್ದಾರೆ. ಒಬ್ಬ ಮಂತ್ರಿಗಳು ತಮ್ಮ ತವರೂರಾದ ಹಳ್ಳಿಯನ್ನು ಮುಖ್ಯ ರಾಜಬೀದಿಗೆ ಜೋಡಿಸುವದರ ದೆಸೆಯಿಂದ ಮೂವತ್ತು ಮೈಲುಗಳ ರಾಜಮಾರ್ಗ ರಚನೆಗೆ ಸರಕಾರದ ಮನ್ನಣೆ ಪಡೆದಿದ್ದರಂತೆ. ಇನ್ನೊಬ್ಬ ಮಂತ್ರಿಗಳು ತಮ್ಮ ಹೊಲ ಎರಡು ತುಂಡಾಗಬಾರದೆಂದು ರಾಜಮಾರ್ಗದ ದಿಕ್ಕನ್ನೇ ಬದಲು ಮಾಡಿಸಿದರಂತೆ. ದುರುದ್ದೇಶದ ಸರಿಯಾದ ಲೆಕ್ಕಪತ್ರಗಳನ್ನು ನಿಧಿ ಸಂಗ್ರಾಹಕ ವಿಶ್ವಸ್ತರಿಗೆ ತೋರಿಸದೆ ರಾಷ್ಟ್ರೀಯ ಸ್ಮಾರಕ ನಿಧಿಯನ್ನು ಎತ್ತಿದಾರಂತೆ. ಇದಲ್ಲದೆ ನೌಕರರನ್ನು ನೇಮಿಸಿಕೊಳ್ಳುವಾಗ, ಲಾಯಸೆನ್ಸು ಕೊಡುವಾಗ ಅಧಿಕಾರದ ದುರುಪಯೋಗ ಮಾಡಿದ ಆರೋಪ ಸಾಮೂಹಿಕವಾಗಿ ಎಲ್ಲ ಮಂತ್ರಿಗಳ ಮೇಲೆಯೂ ಇದೆ. ಈ ವಿಂಧ್ಯಪ್ರದೇಶದಲ್ಲಿ ಬುಂದೇಲಖಂಡ ಬಾಘೇಲಖಂಡಗಳ ೩೫ ಸಂಸ್ಥಾನಗಳು ಸೇರಿದ್ದು ಪ್ರಾರಂಭಕ್ಕೆ ರಚಿತವಾದ ಒಕ್ಕೂಟಗಳಲ್ಲಿ ಇದೊಂದು. ಅಲ್ಲಿಯ ಉಪಮುಖ್ಯಮಂತ್ರಿಗಳಾದ ಶ್ರೀ ಶಿವಬಹದ್ದೂರ ಸಿಂಗರನ್ನು ಬಂಧಿಸಲಾಗಿದೆ. ಮಂತ್ರಿಮಂಡಲವು ರಾಜೀನಾಮೆ ಕೊಟ್ಟದ್ದು ಕೇಂದ್ರ ಸರಕಾರವು ಆಡಳಿತೆಯನ್ನು ವಹಿಸಿಕೊಂಡಿದೆ. ಎಸ್. ಎನ್. ಮೇಥಾ ಆಯ್. ಸಿ. ಎಸ್. ಇವರು ಮುಖ್ಯ ಕಾರ್ಯದರ್ಶಿಗಳಾಗಿ ನೇಮಿಸಲ್ಪಟ್ಟಿದ್ದಾರೆ. ವಿಂಧ್ಯ ಪ್ರದೇಶದಲ್ಲಿಯ ಈ ಘಟನೆಯು ಅಲ್ಲಿನ ಕಾಂಗ್ರೆಸ್ಸಿಗರಿಗೆ ಯಾವ ರೀತಿಯಿಂದಲೂ ಭೂಷಣಪ್ರದವಾಗಲಾರದು.

ಕಾಮನವೆಲ್ಥ ಪರಿಷತ್ತು

ಕಾಮನ್‌ವೆಲ್ಥ ಪರಿಷತ್ತು ಕಳೆದ ಶುಕ್ರವಾರ ಪ್ರಾರಂಭವಾಗಿದೆ. ಒಂದು ವಾರ ಈ ಪರಿಷತ್ತು ನಡೆಯುವದೆಂದು ಸಾರಲಾಗಿದೆ. ಈ ಮೊದಲು ಕಾಮನ್‌ವೆಲ್ಥದಲ್ಲಿ ಇದ್ದ ರಾಷ್ಟ್ರಗಳ ಮುಖ್ಯ ಮಂತ್ರಿಗಳು, ಅವರ ಪ್ರತಿನಿಧಿಗಳು, ಪರಿಷತ್ತಿಗೆ ದಯಮಾಡಿಸಿದ್ದಾರೆ. ಹಿಂದುಸ್ತಾನದ ಮುಖ್ಯಮಂತ್ರಿಗಳಾದ ಪಂಡಿತ ಜವಾಹರಲಾಲರು ೧೯ ನೇ ತಾರೀಕಿನ ರಾತ್ರಿ ವಿಮಾನ ಮಾರ್ಗವಾಗಿ ಲಂಡನ್ನಿಗೆ ತೆರಳಿದರು. ವಿಮಾನ ನಿಲ್ದಾಣದಲ್ಲಿ ಕಿಕ್ಕಿರಿದ ಜನಸಮುದಾಯವು ಅವರನ್ನು ಶುಭಾಶಯಗಳೊಂದಿಗೆ ಬೀಳ್ಕೊಟ್ಟಿತು. ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಲಿಯಾಕತ್ ಅಲ್ಲೀಖಾನರು ಮತ್ತು ಅವರಿಗೆ ಸಹಾಯಕರೆಂದು ವಿದೇಶ ಮಂತ್ರಿ ಸರ್ ಝಫರುಲ್ಲಾಖಾನರು ಲಂಡನ್ನಿಗೆ ಹೋಗಿರುತ್ತಾರೆ. ಬ್ರಿಟಿಶ ಮುಖ್ಯ ಮಂತ್ರಿ ಆ್ಯಟ್ಲೀಯವರು ಪರಿಷತ್ತು ಸೇರುವ ಮುನ್ನ ಎಲ್ಲ ಮಂತ್ರಿಗಳನ್ನು ಪ್ರತ್ಯ ಪ್ರತ್ಯೇಕವಾಗಿ ಬೆಟ್ಟಿಯಾಗಿ ಚರ್ಚೆ ನಡೆಸುವರು. ಕಾಮನ್‌ವೆಲ್ಥದಲ್ಲಿ ಆಯಾ ರಾಷ್ಟ್ರಗಳು ಉಳಿಯಬೇಕೋ ಬಾರದೊ ಎಂಬ ಮಹತ್ವದ ಸಮಸ್ಯೆಯು ಈ ಪರಿಷತ್ತಿನಲ್ಲಿ ಚರ್ಚಿಸಲ್ಪಟ್ಟು ನಿರ್ಣಯ ಸ್ವೀಕೃತವಾಗುವದಿದ್ದುದರಿಂದ ಇಡೀ ಜಗತ್ತಿನ ಲಕ್ಷ್ಯವು ಅತ್ತ ವೇಧಿಸಿದೆಯೆಂದು ಹೇಳಿದರೆ ತಪ್ಪಾಗದು. ವಿಶೇಷವಾಗಿ ಹಿಂದುಸ್ತಾನವು ಈ ಸಂಬಂಧದಲ್ಲಿ ಯಾವ ಧೋರಣವನ್ನು ವಹಿಸುವದೆಂಬ ಬಗ್ಗೆ ಹೆಚ್ಚು ಲಕ್ಷ್ಯ ವೇಧಿಸಲ್ಪಟ್ಟಿದೆ. ಮುಖ್ಯ ಮಂತ್ರಿಗಳು ಮುಂಬಯಿಯಿಂದ ವಿಮಾನದಿಂದ ಹೊರಡುವ ಮೊದಲು ಇಡೀ ರಾಷ್ಟ್ರದ ಜನತೆಗೆ ಸಂದೇಶವೀಯುತ್ತ 'ಲಂಡನ ಪರಿಷತ್ತಿನಲ್ಲಿ ನನಗೆ ಕೊಟ್ಟ ಸೂಚನೆಗಳಂತೆ ಮತ್ತು ನಮಗೆ ಸ್ಫೂರ್ತಿಪ್ರದವಾದ ತತ್ವಗಳಿಗೆ ವಿಸಂಗತವಾಗದಂತೆ ನಾನು ವರ್ತಿಸುವೆನು ಎಂದು ಹೇಳಿ ಪರಸ್ಪರ ವಿರುದ್ಧವಾಗಿ ನಿಂತ ಪ್ರಬಲರಾಷ್ಟ್ರಗಳಲ್ಲಿ ಯಾವ ಪಕ್ಷವನ್ನೂ ಸೇರದೆ ಜಾಗತಿಕ ಸಮಸ್ಯೆಗಳನ್ನು ಬಿಡಿಸಲು ರಾಷ್ಟ್ರರಾಷ್ಟ್ರಗಳಲ್ಲಿ ಸ್ನೇಹ ಸೌಹಾರ್ದಭಾವನೆಯನ್ನು ಬೆಳೆಸಿ ಜಗತ್ತಿನ ಶಾಂತಿ ಸ್ಥಾಪನೆ ಮಾಡಲು ಶಕ್ತರಾಗುವ ಧೋರಣೆಯನ್ನು ವಹಿಸುವುದಾಗಿ ಮತ್ತೊಮ್ಮೆ ಸಾರಿ ಹೇಳಿದರು. ವರ್ತಮಾನ ಭವಿಷ್ಯತ್ಕಾಲಗಳ ಮೇಲೆ ಪರಿಣಾಮವಾಗುವಂಥ ಸಮಸ್ಯೆಗಳನ್ನು ಬಿಡಿಸಲು ಪಾಶ್ಚಾತ್ಯರಿಗೆ ನಮ್ಮ ದೃಷ್ಟಿಕೋನ ತಿಳಿಸಲು ಹೊರಟ ಸಮಯದಲ್ಲಿ ಜನರು ಸಹಾನುಭೂತಿ ಪ್ರೀತಿ ಸಹಕಾರಗಳನ್ನು ಎಂದಿಗಿಂತಲೂ ಹೆಚ್ಚಾಗಿ ನೀಡುವದು ಈಗ ಅವಶ್ಯವಾಗಿದೆ ಎಂದು ಪತ್ರಿಕಾಪ್ರತಿನಿಧಿಗಳಿಗೆ ಇತ್ತ ಸಂದೇಶದಲ್ಲಿ ಹೇಳಿದರು. ಸ್ವತಂತ್ರ ಪ್ರಜಾತಂತ್ರ ರಾಷ್ಟ್ರವಾಗಿಯೂ ಕಾಮನ್‌ವೆಲ್ಥದಲ್ಲಿ ಉಳಿಯುವುದರಿಂದ ಹಿಂದುಸ್ತಾನಕ್ಕೆ ಲಾಭವಾಗುವದೆಂದೆನಿಸಿದರೆ ಕಾಮನ್‌ವೆಲ್ಥದಲ್ಲಿ ಉಳಿಯುವದು ಬೇಡ ಎಂದು ಯಾರೂ ಹೇಳಲಾರರು ಹೇಳಬಾರದು. ಜವಾಹರಲಾಲರು ಈ ಸಂಬಂಧದಲ್ಲಿ ಒಂದು ಯೋಜನೆಯನ್ನು ತಯಾರಿಸಿದ್ದು ಅದನ್ನು ಬ್ರಿಟಿಶ ಮುಖ್ಯ ಮಂತ್ರಿಗಳಿಗೆ ಕೊಟ್ಟಿರುವರೆಂದು ತಿಳಿಯುತ್ತದೆ. ಅದರೂ ಇಂಥ ವಿಷಯಗಳನ್ನು ಮಹಾಮುತ್ಸದ್ದಿಗಳಿಗೆ ಬಿಟ್ಟುಕೊಡುವದು ಒಳಿತು.

ಮೈಸೂರಿನ ಆರ್ಥಿಕ ಸಮೀಕರಣ

ಹೊಸರಾಜ್ಯ ಘಟನೆಯು ಜಾರಿಯಲ್ಲಿ ಬರುವ ವರೆಗೆ ಕೇಂದ್ರದೊಂದಿಗೆ ಸಂಸ್ಥಾನಗಳ ಆರ್ಥಿಕ ಸಮೀಕರಣವಾಗುವದಿಲ್ಲ. ಈಗಿದ್ದ ವ್ಯವಸ್ಥೆಯೆ ಉಳಿಯುವದೆಂದು ತಿಳಿಯುತ್ತದೆ. ಸಂಸ್ಥಾನಗಳ ಆರ್ಥಿಕ ಸಮೀಕರಣದ ಬಗೆಗೆ ನೇಮಕವಾದ ಕೃಷ್ಣಮಾಚಾರಿ ಸಮಿತಿಯು ಮೇ ತಿಂಗಳ ಕೊನೆಯೊಳಗಾಗಿ ವರದಿಯನ್ನು ಒಪ್ಪಿಸಲಿದೆ. ಆರ್ಥಿಕ ಸಮೀಕರಣ ಯೋಜನೆಯ ಪ್ರಕಾರ ಮೈಸೂರು ಸರಕಾರ ಕೇಂದ್ರ ಸರಕಾರಕ್ಕೆ ಆದಾಯಕರ, ಆಮದು ಪೆಟ್ಟಿಗೆ, ತಂಬಾಕು, ಸಕ್ಕರೆ, ಪಾವರ ಅಲ್ಕೋಹಾಲ, ಅಡಿಕೆ, ಕಾಫೀ, ವನಸ್ಪತಿ ಮುಂತಾದವುಗಳ ಮೇಲಿನ ಅಬಕಾರಿಕರ, ಮೈಸೂರುರೇಲ್ವೆ, ಟೆಲಿಫೋನ ಮತ್ತು ರೇಡಿಯೋ ಲಾಯಸೆನ್ಸ ಈ ಆದಾಯದ ಬಾಬುಗಳನ್ನು ವಹಿಸಿಕೊಂಡು ಸೈನ್ಯ ಮತ್ತು ಆಕಾಶವಾಣಿ ಕೇಂದ್ರ ಈ ಎರಡು ವೆಚ್ಚದ ಬಾಬುಗಳನ್ನು ವಹಿಸಿಕೊಳ್ಳುವದು. ಕಳೆದ ವರುಷದ ಮುಂಗಡ ಪತ್ರಿಕೆಯನ್ವಯ ಸಂಸ್ಥಾನದ ಆದಾಯಕರದಿಂದ ೧೪೪ ಲಕ್ಷ, ಅಬಕಾರಿ ಕರದಿಂದ ೧೦೭ ಲಕ್ಷ, ರೇಲ್ವೆಗಳಿಂದ ೪೮ ಲಕ್ಷ, ಟೆಲಿಫೋನಿನಿಂದ ೨ ಲಕ್ಷ ಹೀಗೆ ಒಟ್ಟು ಸುಮಾರು ೩ ಕೋಟಿ ರೂಪಾಯಿಗಳ ಆದಾಯ ಕೇಂದ್ರ ಸರಕಾರಕ್ಕೆ ಮೈಸೂರಿನಿಂದ ದೊರೆಯುವದು. ಮೈಸೂರು ಸೈನ್ಯಕ್ಕಾಗಿ ಕೇಂದ್ರ ಸರಕಾರವು ೩೮ ಲಕ್ಷ ರೂಪಾಯಿ ಮಾತ್ರ ವೆಚ್ಚ ಮಾಡುತಿದೆಯಂತೆ. ಇದರಿಂದ ಸಂಸ್ಥಾನದ ಆದಾಯ ಬಹಳ ಮಟ್ಟಿಗೆ ಕಡಮೆಯಾಗಿ ಮುಂಗಡ ಪತ್ರಿಕೆಯಲ್ಲಿ ಕೊರತೆ ಬೀಳುವದೆಂಬ ಭೀತಿ ಉತ್ಪನ್ನವಾಗಿದೆ. ಇದಲ್ಲದೆ ಮೈಸೂರು ಸರಕಾರವು ಸಂಸ್ಥಾನ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಯನ್ನು ಗೊತ್ತುಪಡಿಸಿದ್ದು ಇದಕ್ಕಾಗಿ ೨೭ ಕೋಟಿ ರೂಪಾಯಿಗಳ ಅನಾವರ್ತ ವೆಚ್ಚ ಮತ್ತು ೨ ಕೋಟಿ ರೂಪಾಯಿಗಳ ಆವರ್ತ ವೆಚ್ಚ ಬರುತ್ತದೆ. ಇವುಗಳಲ್ಲಿ ಕೆಲವು ಯೋಜನೆಗಳನ್ನು ಈಗಾಗಲೆ ಪ್ರಾರಂಭಿಸಲಾಗಿದೆ. ಕೋಲಾರ ಚಿನ್ನದ ಕರದಿಂದ ಬರುತಿದ್ದ ಒಂದು ಕೋಟಿ ರೂಪಾಯಿಗಳಲ್ಲಿ ಈಗ ಕಡಮೆಯಾಗಿದೆ. ಕಾಯ್ದಿಟ್ಟ ನಿಧಿ ೧೫ ಕೋಟಿ ರೂಪಾಯಿಗಳಲ್ಲಿ ಬಹ್ವಂಶ ಬೇರೆ ಬೇರೆ ಕಾರಖಾನೆಗಳ ಸ್ಥಾಪನೆಗಾಗಿ ಈಗಾಗಲೆ ಬಳಸಲಾಗಿದೆ. ಇದೆಲ್ಲವನ್ನು ನಿರೀಕ್ಷಿಸಿದರೆ ಸಂಸ್ಥಾನವು ಬೀಳಬಹುದಾದ ಕೊರತೆಯನ್ನು ಎಂತು ನಿವಾರಿಸಿಕೊಳ್ಳಬಲ್ಲದೆಂದು ಸಂಸ್ಥಾನದಲ್ಲಿಯ ಕೆಲ ಜನರು ಗಾಬರಿಗೊಂಡಂತೆ ತೋರುತ್ತದೆ. ಆದರೆ ಆರ್ಥಿಕ ಸಮೀಕರಣದ ಯೋಜನೆಯ ಉದ್ದೇಶವು ಆಯಾ ಸಂಸ್ಥಾನಗಳ ಆರ್ಥಿಕ ಭದ್ರತೆ ಇದೆಯಲ್ಲದೆ ಆರ್ಥಿಕ ರಚನೆಯನ್ನು ಹದಗೆಡಿಸುವುದಕ್ಕಲ್ಲ ಎಂಬುದು ಸುಸ್ಪಷ್ಟವಿದೆ. ಆರ್ಥಿಕ ಸಮೀಕರಣ ಯೋಜನೆಯಿಂದ ಯಾವುದೊಂದು ಸಂಸ್ಥಾನದ ಆರ್ಥಿಕ ಪರಿಸ್ಥಿತಿ ಹದಗೆಡುತಿದ್ದರೆ ಹಿಂದುಸ್ತಾನ ಸರಕಾರವೇನು ಕಣ್ಣುಮುಚ್ಚಿಕೊಂಡು ಅದರ ಮೇಲೆ ಈ ಆರ್ಥಿಕ ಸಮೀಕರಣ ಯೋಜನೆಯನ್ನು ಹೇರಲಾರದೆಂಬುದು ನಿಶ್ಚಿತವಿದೆ.

❋ ರಾತ್ರಿ ಒಬ್ಬ ಡಾಕ್ಟರರ ದವಾಖಾನೆಯ ಮಾಡಿನ ಹಂಚೆಬ್ಬಿಸಿ ಒಳಬರಲು ಪ್ರಯತ್ನಿಸುತಿದ್ದಾಗ ಕಳ್ಳ ಕಾಲುತಪ್ಪಿ ಒಳಗೆ ಬಿದ್ದು ಕಾಲು ಮುರಿದುಕೊಂಡ. ಕಡೆಗೆ ಅಲ್ಲಿಂದಲೇ ಆ ಡಾಕ್ಟರನ ಮನೆಗೆ ಟೆಲಿಫೋನು ಮಾಡಿ ವೈದ್ಯಕೀಯ ಸಹಾಯ ಬೇಡಿದ!

❋ ಅನೇಕ ದಿನ ಕಷ್ಟಪಟ್ಟು ಸುರಂಗ ತೋಡಿ ಒಂದು ಕಂಪನಿಯ ಉಗ್ರಾಣವನ್ನು ಕೊಳ್ಳೆ ಹೊಡೆಯಲು ಸಾಹಸ ಮಾಡಿ ಕಳ್ಳರು ಆ ಉಗ್ರಾಣವನ್ನು ಹೊಕ್ಕಾಗ ಅದರಲ್ಲೇನೂ ಇರಲಿಲ್ಲ. ಏಕೆಂದರೆ ಆ ಕಂಪನಿ ದಿವಾಳಿಯೆದ್ದು ನಾಲ್ಕು ವರ್ಷಗಳಾಗಿದ್ದವು.

ಹರಟೆ

ಬೆಣ್ಣೆಯ ಮೀಮಾಂಸೆ

ಲೇಖಕರು: ಶ್ರೀ ಮಾಧವ ಕೌಜಲಗಿ

"ಈವತ್ತು ಆದಿತ್ಯವಾರ ಅದ. ಗೊತ್ತಿಲ್ಲೇನು ?"

"ಓಹೊ ಗೊತ್ತಿರದೇನು? ಈ ನೌಕರಿ ಮಾಡೊತನಕಾ ಏನ ಮರತರೂ ಆದಿತ್ಯವಾರ ಮರಿಯುವದಿಲ್ಲ ನೋಡು," ಎಂದು ನಾನು ಹೇಳಿದೆ.

"ಅದೇನಾರೆ ಇರವಲ್ಲಾಕ್ಯ ಈವತ್ತ ಬೆಣ್ಣಿ ತರೂತನಕಾ ಊಟಕ ತುಪ್ಪ ಇಲ್ಲೋದ್ರಿ."

"ಅಲ್ಲಾ, ಸರಕಾರದಾಗ ಎಂಥಾ ಅರ್ಜಂಟ ಹುಕುಮ ಹೊರಟರೂ ಕನಿಷ್ಟ ೨೪ ತಾಸಿನ ನೋಟೀಸ.ರೆ ಕೊಡತಿರತಾರ. ಅಂಥಾದ್ದು ನೀ ಒಂದು ತಾಸಿನ ಸವಲತ್ತು ಸುದ್ಧಾ ಕೊಡುದಿಲ್ಲಲ್ಲಾ. ನಿಂದು ಒಳ್ಳೇ ಮಿಲಿಟರಿ ರಾಜ್ಯಾತು ಬಿಡ."

"ಬಿಡ್ರಿ, ನನಗೇನು ಬೇಕಾಗೇದ? ಬ್ಯಾಡಂದ್ರ ಅದಗಿ ಸುದ್ಧಾ ಬಿಟ್ಟಬಿಡತೀನಿ."

ಮುಂದ ಮಹರಾಯಳು ಏನೇನ ಅಂದಳೊ ನನಗ ಕೇಳಿಸಲಿಲ್ಲ. ಶಬ್ದಗಳು ಅಸ್ಪಷ್ಟವಿದ್ದವು. ಅದೇ ಊರಲ್ಲಿ ಎಲ್ಲಾಕಡೆ ಸಂಪಿನ ಗಾಳಿ ಬಿಟ್ಟದ್ದರಿಂದ, ಹೀಗೆ ಮಾತಿಗೆ ಮಾತು ಬೆಳೆದು ನಮ್ಮ ಅಡಿಗೆ ಮನೆಯಲ್ಲಿಯೂ ಸಂಪು ಆದೀತೆಂದು ನಾನು ಒಮ್ಮೆಲೆ ನನ್ನಾಕೆಯ ಎಲ್ಲ ಬೇಡಿಕೆಗಳನ್ನು ಯಾವ ಕರಾರಿಲ್ಲದೆ ಒಪ್ಪಿಕೊಂಡುಬಿಟ್ಟೆ. ಇತ್ತಿತ್ತಲಾಗಿ ಕಾರಖಾನೆಯ ಕೂಲಿಯವರಿಗಿಂತ ನಮ್ಮ ಹೆಂಗಸರೊಳಗೆ ಕಮ್ಯುನಿಜಂ ಹೆಚ್ಚಾಗಿ ಬೆಳದ ಹಾಗೆ ಕಾಣುತ್ತದೆ.

ಅಂತೂ ಪೇಟೆಗೆ ಹೋಗುವದು ಅನಿವಾರ್ಯವಾಗಿ ಕಂಡುಬಂತು. ಹೋಗುವ ಮುಂದೆ ಏನಾದರೂ ಸ್ವಲ್ಪ ತಿಂದು ಹೋಗಬೇಕೆಂದರೆ ಅದಕ್ಕೂ "ವಾತಾವರ್ಣ" ಅನುಕೂಲ ಕಂಡು ಬರಲಿಲ್ಲ. ದೂರದೃಷ್ಟಿಯಿಂದ ವಿಚಾರಮಾಡಿ ಹೆಚ್ಚಿಗೇನೂ ಕೇಳದೆ, ಹೇಳದೆ, ಚೀಲದಲ್ಲಿ ಒಂದು ಡಬ್ಬಿಯನ್ನಿಟ್ಟುಕೊಂಡು ಬೆಣ್ಣೆಯ ಬಾಜಾರಕ್ಕೆ ಹೊರಟೆ. ಬರುವ ಮುಂದೆ ಎರಡು ಎಪ್ಪರ ಸಿಲ್ವರ ತಾಟು ಹಾಗೂ ಒಂದು ಮಾಲೆ ತಂದು ಈಕೆಗೆ 'Surprise' ಕೊಟ್ಟುಬಿಟ್ಟರೆ, ಎಲ್ಲವೂ ಸರಿ ಹೋಗುವದೆಂಬ ಉಲ್ಲಾಸದಿಂದ ನಾನು ಹೊರಟಿದ್ದೆ.

ಪ್ರತಿವಾರ ಬೆಣ್ಣೆತರಲಿಕ್ಕೆ ಹೋಗುತ್ತಿದ್ದದ್ದರಿಂದ ಸಾಧಾರಣವಾಗಿ ನನಗೆ ಬೆಣ್ಣೆತರುತ್ತಿದ್ದವರ ಊರು, ಹೆಸರು, ಅವರು ತರುತ್ತಿರುವ ಬೆಣ್ಣೆಯ ಗುಣ ಎಲ್ಲಾ ಗೊತ್ತಾಗಿಬಿಟ್ಟಿತ್ತು. ನನ್ನ ಸುದೀರ್ಘ ಅನುಭವದಿಂದ ನಾನೊಬ್ಬ ಬೆಣ್ಣೆ ತಜ್ಞನಾಗಿದ್ದೆನೆಂದು ಹೇಳಬಹುದು. ಬೆಣ್ಣೆಯ ಬಾಜಾರದ ಧಾರಣೆ ಗೊತ್ತು ಮಾಡುವವರಲ್ಲಿ ನಾನೊಬ್ಬ. ನಾನು ಉತ್ತಮವೆಂದು ಹೇಳಿಕೊಟ್ಟ ಬೆಣ್ಣೆಯನ್ನು ಜನರು ಮುಗಿಬಿದ್ದು ತಕ್ಕೊಳ್ಳುತ್ತಿದ್ದರು. ಅದಕ್ಕಾಗಿ ಎಲ್ಲ ಬೆಣ್ಣೆಯವರು, ತಮ್ಮ ಬೆಣ್ಣೆಗೆ ನನ್ನ "ಆಶೀರ್ವಾದ" ದೊರೆಯಬೇಕೆಂದು ಎಲ್ಲ ಬಗೆಯಿಂದಲೂ ಪ್ರಯತ್ನಿಸುತ್ತಿದ್ದರು. ಅವರಿಂದ ದೊರೆಯುವಷ್ಟು ಸನ್ಮಾನವು ನನಗೆ ಬೇರೆಯಾರಿಂದಲೂ ಸಿಕ್ಕಿಲ್ಲ. ಆದರೂ ನಾನು ಬೆಣ್ಣೆ ಕೊಳ್ಳುವವರ ಹಿತದ ದೃಷ್ಟಿಯಿಂದ, ಮತ್ತು ನಾನೂ ಅವರ ವರ್ಗದವನೇ ಇದ್ದದ್ದರಿಂದ ಬೆಣ್ಣೆಯವರ ಕೂಡ ಸ್ವಲ್ಪ ಬಿಗುವಿನಿಂದಲೇ ವರ್ತಿಸುತ್ತಿದ್ದೆ.

ಇಂದಾದರೂ ನಾನು ಬೆಣ್ಣೆ ಬಾಜಾರದಲ್ಲಿ ಪ್ರವೇಶಿಸಿದ ಕೂಡಲೆ, ಮೊಟ್ಟಮೊದಲು ಕೂತವಳು "ಯಣ್ಣಾ, ಈ ಬೆಣ್ಣೆ ತುಪ್ಪಾ ನರೆ ಮಾಡಿನೋಡ್ರಿ, ಕಸ್ತೂರಿ ಅಕ್ಕೈತಿ ಕಸ್ತೂರಿ" ಎಂದು ಕರೆದಳು.

"ಏನ ಹೇಳಬ್ಯಾಡ ಬಿಡ, ಬ್ಯಾತನಾಳಿ ಬೆಣ್ಣೆ ಗುಣ ಗೊತ್ತಿಲ್ಲೇನು ನನಗೆ? ಅದರ ತುಪ್ಪ ಇಳೀದೂ ಅಷ್ಟ. ಪಂಚೇರ ಬೆಣ್ಣೆ ತಗೊಂಡು, ತುಪ್ಪಾ ಮಾಡಿದರ ಅತ್ತರ ಬಾಟ್ಲಾಗ ಹಾಕಿ ಮೂಸಿ ಸುದ್ಧಾ ನೋಡಲಿಕ್ಕೆ ಸಾಕಾಗುವದಿಲ್ಲ" ಎಂದು ನನ್ನ ಜಜಮೆಂಟು ಕೊಟ್ಟು ಮುಂದಕ್ಕೆ ಹೊರಟೆ.

"ಇಕಾ ನೋಡ್ರಿ, ಸೇರಿಗೆ ಸವ್ವಾಸೇರು ತುಪ್ಪ ಆಗೋ ಬೆಣ್ಣೀ" ಎಂದು ಮತ್ತೊಬ್ಬಾಕೆ ಕರೆದಳು.

ನಾನು ಆಕೆಯ ಕಡೆಗೆ ತಿರುಗಿದೆ. ಬೆಣ್ಣೆಯ ಗಡಿಗೆ ಮುಂದಿಟ್ಟುಕೊಂಡು ಬಕ್ಕರಿ ತಿನ್ನುತ್ತ ಕೂತಿದ್ದಳು. ಆಕೆಯ ಎಂಜಲು ಕೈಯಿಂದ ಬೆಣ್ಣೆ ತಕ್ಕೊಳ್ಳುವ ಮನಸ್ಸಾಗಲಿಲ್ಲ. ಆಕೆಯ ಒಂದು ಕೈಯಲ್ಲಿ ಎರಡು ಬಕ್ಕರಿ, ಅದರಲ್ಲಿ ಮಡಿಕೆಯ ಉಸಳಿ, ಎರಡು ಉಳ್ಳಿಗಡ್ಡೆಗಳಿದ್ದವು. ಅಲ್ಲಿಯೆ ಅದನ್ನು ಮುರಿದು ತಿನ್ನುತ್ತ, ಬಾಯಿಂದ "ಲಿಸ್-ಲಿಸ್" ಮಾಡುತ್ತಿದ್ದಳು.

ಒಂದು ಕ್ಷಣ ನನಗೆ ಒಳ್ಳೆ ಸಿಟ್ಟು ಬಂದು ಇಲ್ಲಿಗೇನು ಬೆಣ್ಣೆ ಮಾರಾಕ ಬಂದಿಯೋ ಏನ್ ಊಟಾಮಾಡಾಕ ಬಂದಿಯೊ?" ಎಂದು ಕೇಳಿಬಿಡಬೇಕೆಂದೆನಿಸಿತು. ಮರುಕ್ಷಣದಲ್ಲಿಯೇ ಮತ್ತೊಂದು ವಿಚಾರ ಬಂದು ಆಕೆಯ ಮೇಲಿನ ಸಿಟ್ಟು ಹೋಗಿ ಕನಿಕರ ಉಂಟಾಯಿತು. "ಏನವಾ, ಇಷ್ಟು ದೊಡ್ಡ ಬೆಣ್ಣೆ ಗಡಿಗೆ ಮುಂದ ಇಟ್ಟುಕೊಂಡ ಒಣ ಒಣ ರೊಟ್ಟಿ ಕಟೀತೀಯಲ್ಲಾ! ಹಿಂಗ ಮಾಡಿ ಎಷ್ಟು ಭಂಗಾರ ಮನಿಕಟ್ಟಿಸಿದಿ?" ಎಂದು ಕೇಳಿದೆ.

"ಭಂಗಾರ ಮನೀನೂ? ಮಣ್ಣಿನ ಕಟ್ಟಿಸೀನ ಬಿಡ. ಆದರ ಆ ಮನಿಯೊಲ್ಲಾ ಸಾರದಾಗ ನಿಮ್ಮಂಥವರಿಗೆ ಇರಲಾಕ ಕೊಟ್ಟೇನಿ. ನಾ, ನಾ, ಒಣ ರೊಟ್ಟಿ ತಿನಕೋತ ಇನಾ ಗುಡಿಸಲದಾಗ ಇರತೀನ ನೋಡ ಯಣ್ಣಾ" ಎಂದು ಸಸಾರವಾಗಿ ಹೇಳಿಬಿಟ್ಟಳು.

ಆಕೆ ನನಗೆ ಉದ್ದೇಶಪೂರ್ವಕವಾಗಿ ಹೀಗೆ ಉತ್ತರ ಕೊಟ್ಟಳೊ ಏನೊ ತಿಳಿಯಲಿಲ್ಲ. ಆದರೆ ಆಕೆಯ ಉತ್ತರ ಮಾತ್ರ ಒಳ್ಳೇ ಮಾರ್ಮಿಕವಾಗಿತ್ತು. ನಾನು ಪ್ರತ್ಯಕ್ಷವಾಗಿ ಯಾವ ದೇಶಭಕ್ತಿಯ ಕೆಲಸವನ್ನು ಮಾಡದಿದ್ದರೂ ಅಂತಃಕರಣದಲ್ಲಿ ಮಾತ್ರ ಹಳ್ಳಿಗರ ಪಕ್ಷಪಾತಿಯಾಗಿದ್ದೆನು. ಪಟ್ಟಣಿಗರಿಂದ ಅನೇಕ ಬಗೆಯ ಅನ್ಯಾಯಗಳು ಅವರ ಮೇಲೆ ನಡೆಯುತ್ತವೆಂದು ತಿಳಿದವರಲ್ಲಿ ನಾನೊಬ್ಬ. ಆದ್ದರಿಂದ ಬೆಣ್ಣೆ ಮಾರುವವರೆ ಒಣ ರೊಟ್ಟಿ ತಿಂದು ಗುಡಿಸಲಿನಲ್ಲಿದ್ದು, ಪಟ್ಟಣಿಗರಿಗೆ ಭಂಗಾರದ ಮನೆ ಕಟ್ಟಿಸಲು ಆಸ್ಪದ ಮಾಡಿ ಕೊಡುತ್ತಿದ್ದರೆ, ಅದನ್ನು ತಡೆಯುವದು ಅವಶ್ಯವೆಂದೆನಿಸಿತು.

"ನೀನು ದುಡಿದು ತೆಗೆದ ಬೆಣ್ಣೆಯನ್ನು ಮೊದಲು ನಿನಗೆ ಹಾಗೂ ನಿನ್ನ ಮನೆಯವರಿಗೆ ಸಾಕಾಗುವಷ್ಟು ಇಟ್ಟುಕೊಂಡು ಹೆಚ್ಚಾದದ್ದನ್ನಷ್ಟೇ ಏಕೆ ಮಾರುವದಿಲ್ಲ?" ಎಂದು ನಾನು ಬುದ್ಧಿ ಕಲಿಸಲು ಹೋದೆ. "ಬೆಣ್ಣೆ ತಕ್ಕೊಳ್ಳುವರಿಗೆ ಇಷ್ಯಾಕ ಕಾರಭಾರ?" ಎಂದು ಎಲ್ಲಿ ಕೇಳುವಳೋ ಎಂಬ ಭಯ. ಸುದೈವದಿಂದ ಆಕೆ ಸಿಟ್ಟಿಗೆ ಬರದೆ ತಾಳ್ಮೆಯಿಂದ ಸಮರ್ಪಕ ಉತ್ತರ ಕೊಟ್ಟಳು.

"ಬೆಣ್ಣೆ ಮಾರುವರೆಲ್ಲಾ ಬೆಣ್ಣೆ ತಿನ್ನಾಕ ಹತ್ತಿದರೆ ಸಂಸಾರ ಹ್ಯಾಂಗ ಸಾಗೀತರಿ? ಮನ್ಯಾಗ ಹಿರ್ಯಾ ಬ್ಯಾನಿ ಬಿದ್ದು ಹಾಸಿಗಿ ಹಿಡದಾನು. ಅವಗ ಶಕ್ತಿ ಬರುಲಾಕ ಡಾಕ್ಟರ ಒಂದು ಔಷಧ್ಯ ಬರಕೊಟ್ಟಾನು. ಮಗಳ ಹೆಕ್ಕಿಲ್ಲಬಾ ಹೊರಟನಿಂತಾಳ. ಆಕೀಗ ಒಂದ ಕಪಾನ್ಯರಿ ಕೊಡಬ್ಯಾಡ? ಬೆಳಗಾದರ ಹಬ್ಬ ಬಂದೇತಿ, ಮಕ್ಕಳಿಗೆ ಬಟ್ಟೇ ತಗೋಬ್ಯಾಡ? ಇದ್ದ ಬೆಣ್ಣೆಯೆಲ್ಲಾ ತಿಂದಕೂತರ ಸಂತೀ ಏನ ಮಾಡಬೇಕ? ಸಾಮಾನ ಏನ ಮಾಡಬೇಕ ರಾಯರಾ?"

ಮೊದಲು ಮೊದಲು ಅವಳ ಉತ್ತರದಿಂದ, ಹಳ್ಳಿಯವರಿಗೆ ಬೆಣ್ಣೆ ಮಾರುವದು ಅವರ ಸಂಸಾರ ಸಾಗಿಸಲು ಅನಿವಾರ್ಯವೆಂದೆನಿಸಿತು. ಮತ್ತು ಪಟ್ಟಣಿಗರು ಅದನ್ನು ಕೊಳ್ಳುವದರಲ್ಲಿ ಅವರ ಸ್ವಾರ್ಥವಿದ್ದರೂ ಹಳ್ಳಿಯವರಿಗೆ ಅವರ ಸಂಸಾರ ಸಾಗಿಸಲು ಅನುಕೂಲ ಮಾಡಿಕೊಡುವ ಸತ್ಕಾರ್ಯವನ್ನು ಅವರು ಮಾಡುತ್ತಿದ್ದಾರೆಂದು ಅನಿಸಿತು. ಆದರೆ ಆಕೆ ಸ್ವತಃ ಒಣರೊಟ್ಟಿ ತಿಂದು ಹೊರಗೆ ಬೆಣ್ಣೆ ಮಾರುವ ವಿಚಾರವು ನನಗೆ ಸರಿಬೀಳಲಿಲ್ಲ. ಅದರಲ್ಲಿ ಏನೋ ದೋಷವಿದ್ದಂತೆತೋರಿತು. ಈಗ ಬೆಣ್ಣೆ ಮಾರಿ, ಬೇನೆಬಿದ್ದ ಗಂಡನಿಗೆ ಔಷಧ ಒಯ್ಯುವ ವಿಚಾರ ನೋಡಿದರೆ, ಮನೆಯಲ್ಲಿಯ ಎಲ್ಲ ಹಾಲು ಮಾರಿ, ಮಕ್ಕಳಿಗೆ ಸಶಕ್ತರಾಗಲು 'ಟಾನಿಕ' ಕೊಂಡು ಕೊಡುವ ಹುಚ್ಚುತನದಂತೆ ಕಂಡುಬಂದಿತು.

ಹಳ್ಳಿಗರು ತಮ್ಮಲ್ಲಿ ಉತ್ಪನ್ನವಾಗುವ ಹಾಲು, ಮೊಸರು, ಬೆಣ್ಣೆ, ಕಾಯಿಪಲ್ಲೆ ಇತ್ಯಾದಿ ಸತ್ವಯುತ ಆಹಾರಗಳನ್ನು ತಮಗೆ ಬೇಕಾಗುವಷ್ಟು ಸಹ ಇಟ್ಟುಕೊಳ್ಳದೆ ಸಮೀಪದ ಪಟ್ಟಣಗಳಿಗೆ ಮಾರಿ, ಬಂದ ಹಣದಲ್ಲಿ ಔಷಧ, ಬಟ್ಟೆ, ಎಣ್ಣೆ ಮುಂತಾದವುಗಳನ್ನು ಕೊಂಡುಕೊಳ್ಳುವದು ಎಷ್ಟು ಹಾನಿಕಾರಕವಿರುವದೆಂಬುದು ಅವರಿಗಿನ್ನೂ ಚನ್ನಾಗಿ ಮನವರಿಕೆಯಾದಂತೆ ಕಾಣುವದಿಲ್ಲ. ಇಂಥ ಪದಾರ್ಥಗಳನ್ನು ಮಾರುವ ಮುಂಚೆ ಮೊದಲು ಹಳ್ಳಿಗರು ತಮಗೆ ಅವಶ್ಯವಾಗಿಬೇಕಾಗುವಷ್ಟು ಪ್ರಮಾಣವನ್ನು ತೆಗೆದಿಟ್ಟು, ಹೆಚ್ಚಾದಷ್ಟನ್ನಷ್ಟೆ ಮಾರಬೇಕು. ಹೀಗೆ ಮಾಡುವದರಿಂದ ಅವರಿಗೆ ಇತರ ಪದಾರ್ಥಗಳನ್ನು ಕೊಂಡುಕೊಳ್ಳಲು ಹಣದ ಕೊರತೆ ಬೀಳಬಹುದು. ಆದರೆ ಅಂಥ ಪ್ರಸಂಗದಲ್ಲಿ ಹೊರಗಿನಿಂದ ಕೊಳ್ಳುವ ಇತರ ಪದಾರ್ಥಗಳಲ್ಲಿಯೇ ಕಡಿಮೆ ಮಾಡಬೇಕೆ ಹೊರತು ತಮ್ಮ ಅವಶ್ಯಕಗಳನ್ನು ತಡುಗಿಟ್ಟುಕೊಳ್ಳದೇ ಅವರು ಮಾರಬಾರದು.

ಉದಾಹರಣಾರ್ಥವಾಗಿ ಈ ಬೆಣ್ಣೆ ಮಾರುವವಳು ನನಗೆ ಒಂದು ರೂಪಾಯಿಗೆ ಒಂದು ಸೇರು ಬೆಣ್ಣೆಕೊಡುವಳೆಂದು ಇಟ್ಟುಕೊಳ್ಳೋಣ. ಆ ವ್ಯಾಪಾರದಲ್ಲಿ ಅವಳ ಎಲ್ಲವೆಚ್ಚ ಹೋಗಿ ರೂಪಾಯಿಗೆ ನಾಲ್ಕಾಣೆ ಲಾಭವಾಗುವದೆಂದು ತಿಳಿಯುವಾ. ಹೀಗೆ ಬಂದ ಒಂದು ರೂಪಾಯಿಯಿಂದ ಆಕೆ ಕೊಂಡುಕೊಳ್ಳುವ ವಸ್ತುಗಳನ್ನು ನೋಡುವಾ. ಮೊದಲು ಆಕೆ ಹೇಳಿದ ಪ್ರಕಾರ ಕೊಳ್ಳುವದು ಔಷಧ. ಇದು ಒಂದು ದೃಷ್ಟಿಯಿಂದ ಹಳ್ಳಿಗರಿಗೆ ಅವಶ್ಯವಾದ ವಸ್ತುವಿರಬಹುದು. ಆದರೆ ಹಳ್ಳಿಗರು ತಮ್ಮ ರೊಟ್ಟಿಯ ಜೊತೆಗೆ ಹಾಲು ಮೊಸರು ಬೆಣ್ಣೆ ಮುಂತಾದವುಗಳನ್ನು ಸಾಕಷ್ಟು ತಕ್ಕೊಳ್ಳದೇ ಹೋದದ್ದರಿಂದಲೇ, ಅವರ ಆರೋಗ್ಯ ಕ್ಷೀಣವಾಗಿ ಅದರಿಂದ ಸಹ ಬೇನೆ ಬೀಳುವ ಸಂಭವ ಹೆಚ್ಚು. ಮಕ್ಕಳಿಗೆ ಚಿಕ್ಕಂದಿನಲ್ಲಿ ಹಾಲು ಬೆಣ್ಣೆಗಳನ್ನು ಸಾಕಷ್ಟು ಕೊಡದೆ ಹೋದರೆ ಅವುಗಳ ಬೆಳವಣಿಗೆ ಕುಂಠಿತವಾಗಿ, ಅವು ನಿಶ್ಶಕ್ತವಾಗುವವು. ಇಂಥ ನಿಶ್ಶಕ್ತ ಮಕ್ಕಳೇ ಮುಂದೆ ರೈತರಾಗುವರು. ಬೆಣ್ಣೆ ಮಾರಿ ಔಷಧ ಒಯ್ಯುವದು ಹುಚ್ಚುತನವಲ್ಲವೆ?

ಎರಡನೇ ವಸ್ತುವೆಂದರೆ ಬಟ್ಟೆ. ಮುಖ್ಯವಾಗಿ ಆಕೆ ಕೊಂಡು ಕೊಳ್ಳುವದು ಗಿರಣೀ ಬಟ್ಟೆ ಅಥವಾ ಗಿರಣೀ ನೂಲಿನ ಬಟ್ಟೆ. ಇದು ಇಷ್ಟರ ಮಟ್ಟಿಗೆ ಅವಶ್ಯಕ? ಹಳ್ಳಿಗರು ತಾವು ಉತ್ಪಾದನ ಮಾಡುವ ಪದಾರ್ಥಗಳನ್ನು ಮೊದಲು ತಮಗೆ ಬೇಕಾಗುವಷ್ಟು ಇಟ್ಟುಕೊಂಡು ಹೆಚ್ಚಾದದ್ದನ್ನಷ್ಟೆ ಮಾರಬೇಕು. ಹೀಗೆ ಮಾರಿ ಬಂದ ಹಣದಿಂದ, ಹೊರಗಿನಿಂದ ಏನಾದರೂ ಕೊಳ್ಳುವದಾದರೆ ಮೊಟ್ಟಮೊದಲು ಅವರು ಯಾವ ಪದಾರ್ಥ ಹಳ್ಳಿಯಲ್ಲಿ ಮಾಡಲಿಕ್ಕೆ ಸಾಧ್ಯವಿಲ್ಲವೊ ಮತ್ತು ಯಾವ ಪದಾರ್ಥವಿಲ್ಲದೆ ಅವರಿಗೆ ಜೀವನ ಸಾಗಿಸುವದು ಸಾಧ್ಯವಿಲ್ಲವೊ ಅಂಥ ಪದಾರ್ಥಗಳನ್ನಷ್ಟೇ ಕೊಂಡುಕೊಳ್ಳಬೇಕು. ನಂತರ ಈ ಕ್ರಮದ ಪ್ರಕಾರ ಬಂದ ಉಳಿದ ಪದಾರ್ಥಗಳನ್ನೂ ತಕ್ಕೊಳ್ಳಬೇಕು. ಈ ಪ್ರಕಾರ ನೋಡಿದರೆ ಬಟ್ಟೆ ಹಳ್ಳಿಗರಿಗೆ ಅವಶ್ಯವಾಗಿ ಬೇಕೇಬೇಕು. ಆದರೆ ಅದನ್ನು ತಮ್ಮ ಬಿಡುವಿನ ವೇಳೆಯಲ್ಲಿ ಅವರಿಗೇ ಸ್ವತಃ ಮಾಡಿಕೊಳ್ಳಲು ಬರುವದು ಸಾಧ್ಯವಿದ್ದದ್ದರಿಂದ ಅದರ ಮೇಲೆ ಹಳ್ಳಿಗರು ಹಣ ವೆಚ್ಚ ಮಾಡುವದು ಹಾನಿಕರವೆಂದು ಹೇಳಬಹುದು. ಇನ್ನು ಆ ಹಳ್ಳಿಗನಿಗೆ ಆತನ ಇತರ ಉತ್ಪನ್ನವು ಸಾಕಷ್ಟು ಬರುತ್ತಿದ್ದರೆ, ಅಥವಾ ಆತನು ತನ್ನ ಬಿಡುವಿನ ವೇಳೆಯಲ್ಲಿ ನೂಲುವದು ನೇಯುವದಕ್ಕಿಂತ ಅನುಕೂಲವಾದ ಹಾಗೂ ಹೆಚ್ಚು ಪ್ರತಿಫಲಕೊಡುವ ಉದ್ಯೋಗಗಳೇನಾದರೂ ಸಾಧ್ಯವಿದ್ದರೆ ಅದನ್ನು ಮಾಡಬಹುದು. ಇಲ್ಲವಾದಲ್ಲಿ ಮನೆಯಲ್ಲಿ ನೂಲು ತೆಗೆದು ಬಟ್ಟೆ ಮಾಡಿಸಿಕೊಳ್ಳುವದು, ಹೊರಗಿನಿಂದ ಕೊಂಡುಕೊಳ್ಳುವದಕ್ಕಿಂತ ಲಾಭಕರವಾಗಬಹುದು.

ಇವೆ ಮುಂತಾದ ವಿಚಾರಗಳನ್ನು ಆಕೆಗೆ ತಿಳಿಸಿಕೊಡಬೇಕೆಂದು ನಾನು ಯೋಚಿಸುತ್ತಿದ್ದೆ. ಆದರೆ ಹಾಗೆ ಮಾಡುವದು ಅವ್ಯಾಪಾರೇಷು ವ್ಯಾಪಾರವಾಗಬಹುದೆಂದು ಅನುಮಾನಿಸುತ್ತಿದ್ದೆ. ಆದರೂ ಆದ್ದಿ ಇಲ್ಲ. ಆಯುಷ್ಯದಲ್ಲಿ ಇದೊಂದಾದರೂ ಸಾಹಸವನ್ನು ಮಾಡಿಬಿಡಬೇಕೆಂದು ನಿಶ್ಚಯಮಾಡಿ ಕೆಳಗೆನೋಡಿದೆ. ಆಕೆಯ ಬೆಣ್ಣೆ ಗಡಿಗೆಯಲ್ಲಾ ತೆರವಾಗಲಿಕ್ಕೆ ಬಂದಿತ್ತು. ನನಗೊಂದು ಸೇರು ಕೊಡವಾ! ನಾ ನಿಂತ ತಾಸಾತು ನನಗೆ ಮೊದಲ ಅಚ್ಚೇರ ಹಾಕಿ ಎರಡನೆಯವರಿಗೆ ಹಾಕವಾ ನೋಡು" ಎಂದು ಒಬ್ಬರನೊಬ್ಬರು ತಿಕ್ಕಾಡುತ್ತ ಜನರು ಆಕೆಯ ಸುತ್ತಮುತ್ತ ನೆರೆದಿದ್ದರು. ನಾನು ವಿಚಾರಮಗ್ನನಾಗಿ ಆ ಬೆಣ್ಣೆಯಾಕೆಯ ಮುಂದೆ ಅರ್ಧ್ಧತಾಸಿನ ವರೆಗೆ ನಿಂತಿದ್ದೆ. ಆಕೆಯ ಬೆಣ್ಣೆಗೆ ನನ್ನ ಸರ್ಟಿಫಿಕೇಟ ಕೊಟ್ಟಂತಾಗಿತ್ತು. ಜನರು ಯಾವ ಅನುಮಾನವಿಲ್ಲದೆ ಆ ಬೆಣ್ಣೆಯನ್ನು ಕೊಂಡುಕೊಳ್ಳಲು ಧಡಪಡಿಸುತ್ತಿದ್ದರು. ಗ..

(೬ ನೇ ಪುಟಕ್ಕೆ)

ವಿಚಾರದ್ವಂದ್ವ

ಈ ಅಂಕಣದಲ್ಲಿ ಕೆಳಗೆ ಅನಾಭಿಪ್ರಾಯ [illegible] ಪ್ರಕಟಿಸಬೇಕೆಂದಿದ್ದೇವೆ. ಕೇವಲ [illegible] ಬರುವುದು. ಇದರ ಉದ್ದೇಶವಾಗಿರುವ ಮಹತ್ವದ ವಿಷಯಗಳ ಮೇಲೆ [illegible] ಅಭಿಪ್ರಾಯವನ್ನು [illegible] ಇಲ್ಲಿ ಬರುವ ವಿಷಯಗಳ ಬಗ್ಗೆ ಅನುಕೂಲ ಮತ್ತು ಪ್ರತಿಕೂಲಾಭಿಪ್ರಾಯ [illegible] ಬರೆದು ಕಳಿಸಿದರೆ ಸ್ವಾಗತಿಸ [illegible]. —ಸಂ.

*

ಬ್ರಹ್ಮದೇಶ ಮತ್ತು ಭಾರತ

ಕೆಲ ವಾರಗಳ ಹಿಂದೆ ಭಾರತವೇ ಮೊದಲಾದ ರಾಷ್ಟ್ರಗಳ ಸಹಕಾರ ಹಸ್ತವನ್ನು ಧೃಷ್ಟತೆಯಿಂದ ತಳ್ಳಿಬಿಟ್ಟ ಬ್ರಹ್ಮೀ ಮುಖ್ಯಮಂತ್ರಿ ಥಾಕಿನ್‌ನೂ ಅವರು ಕಳೆದ ವಾರ ಭಾರತ ಪಾಕಿಸ್ತಾನಗಳಿಗೆ ಭೆಟ್ಟಿಕೊಟ್ಟು ಸಹಾಯ ಯಾಚನೆ ಮಾಡಿದ ಸಂಗತಿಯನ್ನು ನಾವು ಶಾಂತವಾಗಿ ವಿಚಾರ ಮಾಡಬೇಕಾಗಿದೆ. ಬ್ರಹ್ಮೀ ಸರಕಾರ ನಮ್ಮಿಂದ ಅಪೇಕ್ಷಿಸುವ ಸಹಾಯವೇನೆಂದು ಇನ್ನೂ ಸ್ಪಷ್ಟವಾಗಿಲ್ಲ. ಧನಸಹಾಯವನ್ನಂತೂ ಅದು ಅನಂವದಿಂದ ಬಿರಮಾಡಿಕೊಳ್ಳಬಹುದು. ಆದರೆ ನಿರೀಕ್ಷಿಸಿದಂತೆ ಕೆರೆನ್ನರ ಶರಣಾಗತಿ ಫಲಿಸದಿದ್ದುದರಿಂದ ಈ ದಂಗೆಯನ್ನು ಹತ್ತಿಕ್ಕಲು ನಮ್ಮಿಂದ ಶಸ್ತ್ರಾಸ್ತ್ರ ಸಹಾಯವನ್ನೂ ಅವರು ಅಪೇಕ್ಷಿಸುವಂತೆ ಕಾಣುತ್ತದೆ. ಈಬಗ್ಗೆ ಪತ್ರಿಕೋದ್ಯೋಗಿಗಳು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡಲು ಥಾಕಿನ್‌ನು ಅವರು ಹಿಂದೆ ಮುಂದೆ ನೋಡಿದ್ದರಿಂದಲೇ ಅಂಥದೇನೋ ಅಪೇಕ್ಷೆಯನ್ನು ಅವರು ಭಾರತ ಸರಕಾರದ ಮುಂದಿರಿಸಿದ್ದಾರೆಂದು ನಾವು ಊಹಿಸಬಹುದಾಗಿದೆ. ಏಕೆಂದರೆ ಮಧ್ಯಸ್ಥಿಕೆ ವಹಿಸಲು ನಮ್ಮನ್ನು ಕೇಳಿಕೊಳ್ಳುವ ಹಂಬಲ ಅವರಿಗೆ ಇದ್ದಂತೆ ಕಾಣುವದಿಲ್ಲ. ಆದರೆ ಅಂತರ್‌ರಾಷ್ಟ್ರೀಯ ನ್ಯಾಯದ ದೃಷ್ಟಿಯಿಂದ ನಾವು ಮಧ್ಯಸ್ಥಿಕೆಯನ್ನಲ್ಲದೆ ಶಸ್ತ್ರಾಸ್ತ್ರ ಸಹಾಯ ಪೂರೈಸುವದು ತಪ್ಪಾಗಲಿಕ್ಕಿಲ್ಲವೆ? ಬ್ರಹ್ಮದೇಶದಲ್ಲಿ ನಡೆಯುತ್ತಿರುವದು ಯಾದವೀ ಕಲಹ. ಅದರಲ್ಲಿ ಯಾವುದೊಂದು ಪಕ್ಷಕ್ಕೆ ಸಹಾಯ ನೀಡುವದು ನಮಗೆ ಯೋಗ್ಯವಲ್ಲ. ನಮಗೆ ದೊರಕುವ ಎಲ್ಲ ಆಧಾರಗಳಿಂದ ಸರಕಾರಿ ಸೈನ್ಯಗಳಷ್ಟೆ ಕೆರೆನ್ ಮತ್ತು ಇತರ ಬಂಡುಗಾರರ ಸೈನ್ಯಗಳೂ ಇವೆ. ಇಂಥ ಸ್ಥಿತಿಯಲ್ಲಿ ನಾವು ಶಸ್ತ್ರಾಸ್ತ್ರಗಳಿಂದ ಸರಕಾರಕ್ಕೆ ಸಹಾಯ ನೀಡಿದರೆ ಬ್ರಹ್ಮೀ ಯುದ್ಧದ ಒಂದು ಪಕ್ಷದ ಭಾಗೀದಾರಾಗಿ ನಾವು ಹೋಗಿಯಾಗಬೇಕು. ಏಕೋಕ್ತಿ ಪಕ್ಷವೇ ಜಯಹೊಂದಿದರೆ ಅದು ಖಂಡಿತವಾಗಿಯೂ ನಮ್ಮ ಕೃತಿಗೆ ಪ್ರತೀಕಾರ ಮಾಡಲು ಹೊಂಚುಹಾಕದಿರದು. ಗ್ರೀಸ್ ಮತ್ತು ಇರಾಣಗಳಲ್ಲಿ ಅಂಗ್ಲೋ—ಅಮೇರಿಕನ್ನರು ವಹಿಸಿದ ಸಾಮ್ರಾಜ್ಯವಾದಿ ನೀತಿಯನ್ನೇ ನಾವೂ ಅನುಸರಿಸಿದ ಅಪವಾದ ನಮಗೆ ಬಂದೀತು. ನಮಗೆ ಗೃಹರಂಗದಲ್ಲೇ ಬೇಕಾದಷ್ಟು ಕೆಲಸ ಬಿದ್ದಿರುವಾಗ ಹೊರ ಜಗಳಗಳಲ್ಲಿ ಕೈಹಾಕೋಣ ಬೇಡ. ಈ ವಿಷಯದಲ್ಲಿ ನಾವು ಯಾವ ನಿರ್ಣಯವನ್ನಾದರೂ ಮಾಡುವ ಮೊದಲು ಬ್ರಹ್ಮದೇಶದಲ್ಲಿರುವ ಲಕ್ಷಾಂತರ ಹಿಂದೀಯರ ಮೇಲೆ ಅದರ ಪರಿಣಾಮ ಹೇಗಾದೀತೆಂದೂ ವಿಚಾರಿಸಬೇಕು. ಅವರು ಈಗಾಗಲೆ ಬ್ರಹ್ಮೀಯರ ದ್ವೇಷಕ್ಕೂ ಅಸೂಯೆಗೂ ಪಾತ್ರರಾಗಿದ್ದಾರೆ. ಈ ಸ್ಥಿತಿಯಲ್ಲಿ ಸಂಪೂರ್ಣ ತಾಟಸ್ಥ್ಯವೇ ನಮ್ಮ ಹಿತಕ್ಕೆ ಸಾಧಕವೆಂದೆನಿಸುವದಿಲ್ಲವೆ?

—ಶ್ರೀನಿವಾಸಾಚಾರ್ಯ

ಭಾಷಾನ್ವಯ ಪ್ರಾಂತಗಳು

ತ್ರಿಮೂರ್ತಿಗಳ ವರದಿಯನ್ನು ನೋಡಿದರೆ ನಮ್ಮೀ ಮುಂದಾಳುಗಳು ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ಆಳವಾಗಿ ಆಲೋಚಿಸದೆ ಏನಾದರೊಂದು ಬರೆದಂತೆ ತೋರುತ್ತದೆ. ಭಾಷಾನ್ವಯ ಪ್ರಾಂತರಚನೆ ಘಾತಕವೆಂದೇ ಅವರಿಗೆ ಅನಿಸಿದ್ದರೆ ಹಾಗೆ ಬಾಯ್ಬಿಟ್ಟು ಹೇಳಲು ಅಡ್ಡಿಯೇನಿತ್ತು? ಬದಲಿಗೆ ಅವರು ಜನಮತದ ಒತ್ತಡ ಹೆಚ್ಚಾದರೆ ಪ್ರಾಂತಗಳ ಪುನರ್ಘಟನೆ ಮಾಡಲೇಬೇಕಾಗುವದೆಂದು ಹೇಳಿ ಚಳವಳಿಯ ಪಿಶಾಚಿಯನ್ನು ಎಚ್ಚರವಾಗಿಯೆ ಇಟ್ಟಿದ್ದಾರೆ. ಆದರೆ ಅದರಲ್ಲೆಲ್ಲ ಅತ್ಯಂತ ಕಿಡಿಗೇಡಿತನದ ಮಾತೆಂದರೆ ಅಂಧ್ರ ಪ್ರಾಂತರಚನೆಗೆ ಅವರು ಪ್ರಾಶಸ್ತ್ಯ ಕೊಟ್ಟದ್ದು. ಅಂಧ್ರದ ನಿರ್ಮಾಣ ಎಷ್ಟೇ ಸರಳವಾಗಿದ್ದರೂ ಅದರ ಬೇಡಿಕೆ ಸರ್ವಥಾ ಅವಿರೋಧವಾಗಿದೆಯೆಂದು ಹೇಳಬಾರದು. ರಾಯಲಸೀಮಾ ಜಿಲ್ಹೆಗಳು ಕರಾವಳಿ ಜಿಲ್ಹೆಗಳೊಡನೆ ಸೇರಲು ಸಾಶಂಕವಾಗಿವೆ. ಅದಲ್ಲದೆ ಹೋದರೂ ಅಂಧ್ರದ ರಚನೆಯಾಗುವಾಗ ಮುಂಬಯಿ ಪ್ರಾಂತ ಮತ್ತು ಶಿಷ್ಟ ಮದ್ರಾಸ್ ಪ್ರಾಂತದ ನಡುವೆ ಸಿಕ್ಕಿಕೊಳ್ಳುವ ಬಳ್ಳಾರಿ, ಅನಂತಪುರಗಳ ಕನ್ನಡ ಭಾಗಗಳ ಗತಿಯೇನು? ದಕ್ಷಿಣ ಕನ್ನಡದ ಮತ್ತು ನೀಲಗಿರಿಯ ಅವಸ್ಥೆಯೇನು? ಈ ವರೆಗೆ ಅಂಧ್ರ ತಮಿಳುನಾಡುಗಳ ನಡುವೆ ಕರ್ನಾಟಕ ಮತ್ತು ಕೇರಳ ಸದಸ್ಯರು ಸಮತೂಕವನ್ನುಂಟುಮಾಡಿ ಸ್ವಲ್ಪ ಮಟ್ಟಿಗಾದರೂ ಕನ್ನಡ ಪ್ರದೇಶಗಳ ಪರಿಯನ್ನು ಗಡುಸಾಗಿ ಮಾಡುತ್ತಿದ್ದರು. ಅಂಧ್ರವು ಪ್ರತ್ಯೇಕವಾಗಿಬಿಟ್ಟರೆ ತಮಿಳರಿಗೆ ನಿರ್ಣಾಯಕ ಬಹುಸಂಖ್ಯೆಯ ಬಲ ದೊರೆಯುವದರಿಂದ ಅವರು ಈ ಬಡಪಾಯಿ ಜಿಲ್ಹೆಗಳನ್ನು ಲಕ್ಷಿಸುವರೆ? ಅದ್ದರಿಂದ ಅಂಧ್ರ ಪ್ರಾಂತದ ಸಂಗಡಲೆ ಈ ಜಿಲ್ಹೆಗಳ ಬಗ್ಗೆ ಅವಶ್ಯಕ ನಿರ್ಣಯವನ್ನು ಕೈಕೊಳ್ಳಲೇಬೇಕೆಂದು ನಾವು ಈಗಿಂದಲೇ ಒತ್ತಾಯಗೊಳಿಸಬೇಕು.

ಕರ್ನಾಟಕ ಕೇರಳ ಪ್ರಾಂತಗಳಾಗಬೇಕಾದರೆ ಕೆಲ ಸಂಸ್ಥಾನಗಳ ವಿಲಯನವನ್ನು ತ್ರಿಮೂರ್ತಿಗಳು ಉಪಾಧಿಶ್ಯೇನ ವಿಧಿಸಿದ್ದಾರೆ. ಕರ್ನಾಟಕದ ಮಟ್ಟಿಗೆ ಮೈಸೂರಿನ ಸಮಸ್ಯೆಯೊಂದೇ ಉಳಿದಿದೆ. ನಮ್ಮ ಭಾಗ್ಯವಿಧಾತರು ಮನಸುಮಾಡಿದರೆ ಇದನ್ನೂ ಬಿಡಿಸುವದು ದೊಡ್ಡದಲ್ಲ. ಆದರೆ ಅವರು ಭಾಷಾನ್ವಯ ಪ್ರಾಂತರಚನೆಗೆ ಅನುಕೂಲ ಸ್ಥಿತಿಯೊದಗದಂತೆ ತಡೆಯಲು ಕೈಲಾದುದನ್ನೆಲ್ಲ ಮಾಡುವಂತೆ ತೋರುತ್ತದೆ. ಬೆಂಗಳೂರಿನ "ಜನವಾಣಿ"ಯ ವಿಶೇಷ ಪ್ರತಿನಿಧಿಯ ವರದಿಯಲ್ಲಿ ಸತ್ಯಾಂಶವಿದ್ದರೆ, ಇನ್ನು ಹತ್ತು ವರ್ಷಕಾಲ ಮೈಸೂರಿನ ವಿಲಯನದ ಪ್ರಶ್ನೆಯೆತ್ತದಿರಲು ಸಂಸ್ಥಾನ ಮಂತ್ರಿಖಾತೆ "ತೀರ್ಮಾನಿಸಿದೆ". ಇದು ನಿಜವಿದ್ದರೆ ಮೈಸೂರಿನ ಪ್ರಜೆಗಳಲ್ಲಿ ಬೆಕ್ಕಿನ–ಬಿಡಾರ–ಬೇರೆಯೆನ್ನುವ ಪ್ರವೃತ್ತಿಯುಳ್ಳ ವರ್ಗಕ್ಕೆ ಇದರಿಂದ ಬಲಬಂದಂತಾಗಿದೆ. ಮೇಲಿನ ಹೇಳಿಕೆ ಕೊಟ್ಟ ಶ್ರೀ ವಿ. ಪಿ. ಮೆನನ್ನರು ಮುಂದೆ ಸಾಗಿ ಮೈಸೂರು ವಿಲಯನದಿಂದ ಕೂಡಲೆ ತೀಕ್ಷ್ಣವಾದ ಭಾಷಾನ್ವಯ ವಿವಾದಗಳೇಳುವದು ಖಂಡಿತವೆಂದು ಹೇಳಿದರು. ದೇವರ ದಯೆಯಿಂದ ಮೈಸೂರಿನ ಮೇಲೆ ಈ ವರೆಗೆ ಕರ್ನಾಟಕೇತರರ ಯಾವ ಗಂಭೀರವಾದ ಬೇಡಿಕೆಯೂ ಬಂದಿರಲಿಲ್ಲ. ಈಗ ಅದಕ್ಕೆ ಶ್ರೀ. ಮೆನನ್ನರು ಚಾಲನೆ ಕೊಟ್ಟುಬಿಟ್ಟದ್ದಾರೆ. ಅತ್ತ ಸರದಾರರು ಮೈಸೂರಿಗೆ ಬಂದಾಗ ಮೈಸೂರಲ್ಲಿ ಇತರ ಕರ್ನಾಟಕ ಭಾಗಗಳ ಸಮಾವೇಶ ಮಾಡಬೇಕೆಂಬ ಒಕ್ಕೂಟ ಕನ್ನಡಿಗರ ಅದೂರದರ್ಶಿತ್ವವನ್ನು ತೆಗಳಿ ಬಡೋದೆಯಂತೆ ಮೈಸೂರನ್ನೂ ವಿಲೀನಗೊಳಿಸಬೇಕೆಂಬ ವಿಚಾರಧಾರೆಗೆ ಚಾಲನೆ ಕೊಟ್ಟು ಹೋದರೆಂದು ತಿಳಿಯುತ್ತದೆ. ಕಲಬುರ್ಗಿ ಸಮ್ಮೇಲನದ ನಿರ್ಣಯಕ್ಕೆ ಅದೇ ಕಾರಣವಾಯಿತೆಂದು ಹೇಳಬಹುದು. ಮುಂದಾಳುಗಳ ಮನೋಗತವೇನೆಂದು ಬೆರಗಾಗಬೇಕಾಗಿದೆ.

– ನ್ಯಾಯವಾದಿ

ಬೆಣ್ಣೆಯ ಮೀಮಾಂಸೆ

(೫ ನೇ ಪುಟದಿಂದ)

ಧೈರ್ಯ ಮಾಡಿಕೊಂಡು ನಾನು ಆಕೆಗೆ ನನ್ನ ವಿಚಾರಗಳನ್ನು ಹೇಳಬೇಕೆನ್ನುವದರಲ್ಲಿ ಆಕೆ ಕಡೆಯುವನೊಬ್ಬನಿಗೆ ಗಡಿಗೆಯನ್ನು ಗೀರಿ ಬಳಿದು ಹಾಕಿ, ಉಡಿಯಲ್ಲಿಯ ಹಣವನ್ನು ಎಣಿಸುತ್ತಿದ್ದಳು. ಮುಖದ ಮೇಲೆ ಗೆಲವಿನ ಕಳೆ ಸೂಸುತ್ತಿತ್ತು. ನನ್ನಿಂದ ಆಕೆಯ ಹೋರಾಟವು ಸುಲಭವಾಗಿದ್ದರೂ ನನ್ನ ಕಡೆಗೆ ಎಳ್ಳಷ್ಟೂ ಆಕೆಗೆ ಲಕ್ಷವಿರಲಿಲ್ಲ. ಬದಿಗೆ ಕುಳಿತವರ ಜೊತೆಗೆ ಆಕೆ ತನ್ನ ಸಂತೆಯ ವಿಚಾರ ನಡೆಸಹತ್ತಿದ್ದಳು. ಇಂಥವಳಿಗೆ ತತ್ವೋಪದೇಶ ಮಾಡುವದೇ ಮೂರ್ಖತನವಾಗುವ ಸಂಭವವಿತ್ತು. ಅದಕ್ಕಾಗಿ ನನ್ನ ವಿಚಾರವನ್ನು ಹಿಂತೆಗೆದುಕೊಳ್ಳಬೇಕಾಯಿತು.

ಅಷ್ಟರಲ್ಲಿ, ಬೆಣ್ಣೆ ತರುವ ಮುಂದೆ ಮನೆಯೊಳಗೆ ಸಿಕ್ಕ ವಾರ್ನಿಂಗಿನ ನೆನಪಾಗಿ ನನ್ನ ವಿಚಾರಗಳೆಲ್ಲ ಬೆಣ್ಣೆಯಂತೆಯೇ ಕರಗಿ ಹೋದವು. ಕೂಡಲೆ ಒಂದು ಕಡೆಗೆ ಬೆಣ್ಣೆ ಕೊಂಡುಕೊಂಡು ಮನೆಗೆ ಹೊರಟೆ. ದಾರಿಯಲ್ಲಿ ನಾನು ಪುನಃ ವಿಚಾರ ಮಾಡಲಾಗಿ ಬೆಣ್ಣೆ ಬಾಜಾರದಲ್ಲಿ ಇಷ್ಟೊತ್ತಿನ ವರೆಗೆ ಇಂಥ ಅವ್ಯವಹಾರಿಕ ವಿಚಾರಗಳಲ್ಲಿ ವ್ಯರ್ಥ ವೇಳೆ ಕಳೆದದ್ದೇ ಹುಚ್ಚುತನವಾಯಿತೆಂದು ಅನಿಸಿತು. ಬೆಣ್ಣೆಯವಳೇ ನನ್ನ ಹುಚ್ಚುತನದ ಲಾಭ ತಕ್ಕೊಂಡು ತನ್ನ ಬೆಣ್ಣೆಯನ್ನೆಲ್ಲ ತರೆಯಿಲ್ಲದೆ ಭರ ಭರನೆ ಮಾರಿ ಜಾಣಳಾದಳೆಂದನಿಸಿತು. ಆದರೆ ಇತ್ತಿತ್ತಲಾಗಿ ಇಂಥ ಹುಚ್ಚು ವಿಚಾರಗಳ ಭಾರವು ನನ್ನ ತಲೆಗೆ ಅಸಹ್ಯವಾಗುತ್ತಿದ್ದುದರಿಂದ ಇದೊಂದನ್ನು ಇಲ್ಲಿ ಇಳಿಸಿ, ಅಥವಾ ಇದನ್ನು ಓದುವವರ ಮೇಲೆ ಹೊರಿಸಿ, ನನ್ನ ಭಾರವನ್ನು ಕಡಿಮೆ ಮಾಡಿಕೊಳ್ಳಲು ಈ ಮೂಲಕ ಯತ್ನಿಸುತ್ತಿದ್ದೇನೆ. ವಾಚಕರು ಸಹಕರಿಸಬೇಕು.

ಪಾಕಿಸ್ತಾನಿ ಗತ್ತು !

ಪಾಕಿಸ್ತಾನ ಸೈನ್ಯದ ಬ್ರಿಗೇಡಿಯರನೊಬ್ಬನು ಕಾಶ್ಮೀರ ಸಮಿತಿಗೆ ದೂರು ಕೊಟ್ಟನು: ಕಾಶ್ಮೀರ ಮುಸ್ಲಿಮ ಪರಿಷತ್ತಿನ ಕಾರ್ಯಕರ್ತನೊಬ್ಬನನ್ನು ಹಿಂದೀ ಸೈನಿಕರು ಚಿತ್ರಹಿಂಸೆ ಮಾಡಿ ಕೊನೆಗೆ ಗುಂಡಿಕ್ಕಿ ಕೊಂದಿದ್ದಾರೆಂದು ಅವನು ಕಣ್ಣಾರೆ ಕಂಡಂತೆ ಬಣ್ಣಿಸಿದ್ದು ನೋಡಿ ಸಮಿತಿಯವರು ಹಿಂದೀ ಸೇನಾಧಿಕಾರಿಯೊಬ್ಬನ ಸಂಗಡ ಸ್ಥಳ ಪರೀಕ್ಷೆಗೆ ಹೋದರು. ಅಲ್ಲೊಂದು ಹೊಸ ಗೋರಿಯಿತ್ತು. ಅದನ್ನು ಅಗೆದಾಗ ಮಾತ್ರ ಅಲ್ಲಿ ಕಂಡದ್ದು ಒಂದು ನಾಯಿಯ ಹೆಣ !

ರೂಪರಂಗ

ಕಲೆ ಮತ್ತು ಶೀಲ

"ಗಣಿಕಾಗಣಕೌ ಸಮಾನ ಧರ್ಮೌ
ನಿಜ ಪಂಚಾಂಗ ನಿದರ್ಶಕಾವುಭೌ
ಜನಮಾನಸಮೋಹಕಾರಿಣೌ
ವಿಧಿನಾ ವಿತ್ತಹರೌ ವಿನಿರ್ಮಿತೌ"

ಕಲೆಯು ಹೆಸರು ಕೆಡಲು ಪ್ರಾರಂಭವಾದುದು ಇಂದಲ್ಲ. ಸುಮಾರು ಕ್ರಿಸ್ತಪೂರ್ವ ೭ ನೆಯ ಶತಕಕ್ಕಿಂತ ಹಿಂದಿದ್ದ ವ್ಯಾಕರಣದ್ರಷ್ಟಾರ ಪಾಣಿನಿಯ ಕಾಲದಿಂದಲೇ. "ಕುಶೀಲವಾ ನಟಾಃ" ನಟವಿಟಗಾಯಕಾದಿಗಳು ಕುಶೀಲ ವಂತರೆಂದು ಹೆಸರು ಪಡೆದಿದ್ದರು. ನರ್ತನ ವೆಂದರೆ ಪಂಚಾಂಗಪ್ರದರ್ಶನ, ಗಾಯನ ವೆಂದರೆ ಭ್ರೂವಲ್ಲಿತಾಂಡವಕಲಾಮಧುರಾನನದ ಸ್ವರವನ್ನು ಪ್ರದರ್ಶಿಸುವುದು; ಚಿತ್ರವೆಂದರೆ "ನಿರಾಭರಣ ಸುಂದರಿಯ" ಚಿತ್ರ.

ಪ್ರಜಾಸತ್ತೆಯ ಅಪಹಾಸ್ಯ

"ಮಕ್ಕಳುಮರಿಗಳಿಗೂ ನಾವು ಸ್ವಾತಂತ್ರ್ಯ ಕೊಡುತ್ತೇವೆ" ಎಂದು ಮೊನ್ನೆ ಅಮೇರಿಕದ ಹೆಂಗಸೊಬ್ಬಳು ಹೇಳಿದಳು. ಅದು ನಿಜ ವಾದ ಪ್ರಜಾಸತ್ತೆಯಂತೆ! ಅದರಲ್ಲಿ ಅಮ್ಮನ ಮಾತಿಗಲ್ಲದೆ ಅಪ್ಪನಮಾತಿಗೆ ಬೆಲೆಯಿಲ್ಲವಂತೆ! ಇದೆಲ್ಲ - "ಯತ್ರನಾರ್ಯಸ್ತು ಪೂಜ್ಯಂತೇ" ಎಂಬ ಮನುವಾಕ್ಯಕ್ಕೆ ವಿಕಟ ವ್ಯಾಖ್ಯೆ ಮಾಡುವ ಕಲಾಪ್ರಿಯ ನಾಗರಿಕತೆಯ ಫಲವೇ ಅಲ್ಲವೆ? ಸ್ವಾತಂತ್ರ್ಯ, ಪ್ರೇಮ, ಸೌಂದರ್ಯ, ನಾಗರಿಕತೆ ಎಂಬ ಪದಗಳಿಗಿಂದು ಸ್ವಾಚ್ಛಂದ್ಯ, ಕಾಮ, ಚರ್ಮಕಾಪಟ್ಯ, ಪ್ರಚ್ಛನ್ನ ಅನಾಗರಿಕತೆ ಎಂಬ ಅರ್ಥಉಂಟಾಗಲು ಕವಿಗಳೂ ಚಲಚಿತ್ರಕಾರರೂ ಪತ್ರಿಕಾಕರ್ತರೂ ವಿಮರ್ಶಕರೂ ಪರಂಪರಾಪ್ರಿಯರೂ ನಾವೀನ್ಯವ್ಯಾಧರೂ ಬಹುಮಟ್ಟಿಗೆ ಕಾರಣರಾಗಿದ್ದಾರೆ.

೬ ತಿಂಗಳಿಂದಲೇ ಮಕ್ಕಳು ಮಾನವನ ನಡೆನುಡಿಗಳನ್ನು ಸೂಕ್ಷ್ಮದೃಷ್ಟಿಯಿಂದಲೇ ಅವಲೋಕಿಸಿ ಕಲಿಯಲು ಪ್ರಾರಂಭಿಸುವುದು ಮಾನಸ ಶಾಸ್ತ್ರಜ್ಞರಿಗೆ ತಿಳಿಯದ ವಿಷಯವಲ್ಲ. ಅದರ ಫಲವಾಗಿಯೇ Unmarried Mothers ಅವಿವಾಹಿತ ತಾಯಂದಿರು Child Mothers ಮಗು ತಾಯಂದಿರು ಅಥವಾ 'ಕುಂತೀದೇವಿಯರು' ಎಂಬ ಮಹಿಳೆಯರ ವರ್ಗಗಳು ನಾಗರಿಕತೆಯಲ್ಲಿ ಕಂಡುಬರುವದು ಎಂಬುದನ್ನು ಸೂಕ್ಷ್ಮಜ್ಞರಿಗೆ ವಿವರಿಸಿಹೇಳಬೇಕೆ? ಪೆರುದೇಶದ ಲೀನಾ ಮೆಡೀನಾ ಎಂಬ ನಾಲ್ಕು ವರ್ಷ ವಯಸ್ಸಿನ ಹೆಣ್ಣು ೭ ಪೌಂಡು ತೂಕದ ಒಂದು ಮಗುವನ್ನು ಹಡೆದ ಸುದ್ದಿ ಅಮೇರಿಕದ "ಟೈಂ" ಪತ್ರಿಕೆಯಲ್ಲೀಗ ಪ್ರಸಿದ್ಧವಾಗಿದೆ. ಸಂಯುಕ್ತ ಸಂಸ್ಥಾನದಲ್ಲಿ ೧೦ ವರ್ಷ ವಯಸ್ಸಿನ ತಾಯಂದಿರಿರುವರೆಂದು ಅದೇ ಪತ್ರಿಕೆಯಲ್ಲಿ ಅಮೇರಿಕದ ಮೆಡಿಕಲ್ ಅಸೋಸಿಯೇಶನ್ನಿನವರ ಹೇಳಿಕೆಯೊಂದು ಪ್ರಕಟವಾಗಿದೆ.

ಕಲೆಯೆನಿಸಿದ ಕೌಟಿಲ್ಯ

ಕಲಕತ್ತದ ಡೆಪ್ಯುಟಿ ಪೋಲೀಸ್ ಕಮಿಶನರರಾದ ಪಿ. ಕೆ. ಸೇನರು ಖೂನಿ ಖಟ್ಲೆಗಳಿಗೆ ಹೇಗೆ ಅಲ್ಲಿ ಹೆಚ್ಚಾಗಿ ಹೆಂಗಸರು ಕಾರಣರಾಗುತ್ತಾರೆಂದು 'ಅಮೃತ ಬಜಾರ' ಪತ್ರಿಕೆಯಲ್ಲಿ ಬರೆಯುತ್ತ, "ಏನಾದರೂ ತೊಂದರೆ ಸಂಭವಿಸಿತೆಂದರ ಅದರ ಬುಡದಲ್ಲಿ ಒಬ್ಬ ಹೆಂಗಸಿದ್ದಾಳೆ ನೋಡಿರಿ" ಎಂಬ ಫ್ರೆಂಚ್ ಗಾದೆಯನ್ನು ಉದ್ಧರಿಸಿ, ' She is still, easily the most potent factor in the breaking of many peaceful homes today ಇಂದಿಗೂ ಹೆಂಗಸು ಅನೇಕ ಶಾಂತ ಕುಟುಂಬಗಳನ್ನು ಮುರಿಯುವುದರಲ್ಲಿ ಬಹಳ ಮುಖ್ಯ ಕಾರಣಳಾಗುತ್ತಾಳೆ' ಎಂದು ತಾವು ಎದುರಿಸಿದ ಅನೇಕ ಖೂನಿ ಖಟ್ಲೆಗಳ ಅನುಭವದ ಆಧಾರದ ಮೇಲೆ ಹೇಳಿದ್ದಾರೆ. ಸ್ತ್ರೀಯ ಕೌಟಿಲ್ಯಕ್ಕೆ ಆಧಾರವಾಗಿ ಅವರು ಕೌಟಿಲ್ಯನ ಅರ್ಥಶಾಸ್ತ್ರವನ್ನು ಉದಾಹರಿಸಿದ್ದಾರೆ. ಅದರಲ್ಲಿ ರಾಜಕುಮಾರನನ್ನು ಒಬ್ಬಳು ಪ್ರೀತಿಸಿದಂತೆ ಮಾಡಿ ಆಲಿಂಗಿಸಿ ತನ್ನ ವಜ್ರದ ಬಳೆಗಳ ಹರಿತವಾದ ಅಲಗಿನಿಂದ ನಿಮಿಷಾರ್ಧದಲ್ಲಿ ಕೊಂದು ಮುಗಿಸಿದ ಉದಾಹರಣೆಯನ್ನು ಕೊಡಲಾಗಿದೆ. ಹೆಂಗಸಿನ ದಯೆಗಿಂತ ಕ್ರೌರ್ಯ ನಿಸರ್ಗ ಸದೃಶ ಎಂದು ಭಯಂಕರ ಗುಪ್ತಚಾರಿಣಿಯರೂ ಸ್ವೈರಚಾರಿಣಿಯರೂ ಆದ ಕ್ಲೈತೆಮ್ನೆಸ್ಟ್ರಾ, ಮೇಡಂ ಡಿ ಬ್ಯಾರಿ ಮತ್ತು ಮಾತಾಹರಿಗಳಂತಹ ಹೆಂಗಸರನ್ನು ಕ್ರಿ. ಪೂ. ೫೦೦೦ ದಲ್ಲಿ ಕಂಡು-ತೆ ಕ್ರಿ. ಶ. ೧೯೪೯ ರಲ್ಲೂ ಕಾಣಬಹುದು ಎಂದು ಅವರು ಉದ್ಧರಿಸಿದ್ದಾರೆ.

ಸ್ವಾಭಾವಿಕ ಭಾವನೆಗಳಿಗೆ ತಡೆಯುಂಟಾಗಿ ಅಪರಾಧಿ ಬುದ್ಧಿಯನ್ನು ತಳೆದ ಒಬ್ಬನು ಹೆಂಗಸಿನ ಗೆಳೆತನಕ್ಕೆ ಬಯಸಿದಾಗ ವಿಕೃತ ಕಾಮುಕ ದೆಸೆಯಿಂದ ಅವಳಲ್ಲಿ ಮುಗ್ಧನಾಗುವನು; ಆ ಸಂಧಿಯನ್ನು ದುರುಪಯೋಗ ಪಡಿಸಿಕೊಳ್ಳದ ಹೆಂಗಸು ದುರ್ಲಭ; ಅದ್ದರಿಂದ ಅವಳು ಹಣ ಕೇಳಲು ಪ್ರಾರಂಭಿಸುವುದೇ ಅವನ ಕಳ್ಳತನ, ಕೊಲೆ, ಸುಲಿಗೆಗೆ ಕಾರಣವಾಗುವುದು ಕಡೆಗೂ ಅವಳು ತೃಪ್ತಳಾಗದಾಗ ಒಮ್ಮೆ ಅವಳೇ ಅವನ ಕ್ರೋಧಕ್ಕೆ ಬಲಿಯಾಗಿ ಕೊಲೆಹೊಂದಲೂ ಬಹುದು.



ದೃಷ್ಟಿಯಿಂದಲೆ ಪಾಪ ಸೃಷ್ಟಿ ಮಾಡುವ ನಾರಿ ಕಷ್ಟದಿಂದಷ್ಟೊ ಕುಲಸತಿಯರಾರ್ಜಿಸಿದ ಶ್ರೇಷ್ಠತೆಯ ಕಳೆದು ಬಿಸುಟಾಳು!

ಗೋಮುಖವ್ಯಾಘ್ರತ್ವ

ಅದರೆ ಹೆಚ್ಚಾಗಿ ಸಿಕ್ಕಿಬೀಳುವುದುಗಂಡಸೇ. ' Women never entirey shed their cloak of virtue because it gives the luxuries of vice, more charm and poignancy. She always creates an element of mystery which make her attractions all the more tantalising and irresistible.— ಹೆಂಗಸರೆಂದೂ ಸಂಪೂರ್ಣವಾಗಿ ತಮ್ಮ ಒಳ್ಳೆಯತನದ ಹೊದಿಕೆಯನ್ನು ತೆಗೆದೊಗೆಯುವದಿಲ್ಲ; ಕೆಟ್ಟತನದ ವಿಲಾಸಸುಖ, ಹೆಚ್ಚು ಆಕರ್ಷಣ ಮತ್ತು ಮರುಷಮರ್ಮಭೇದಕತೆಗಳನ್ನು ಅದು ಅವರಿಗೆ ಕೊಡುತ್ತದೆ; ಏನೋ ಒಂದು ಆಶ್ಚರ್ಯ ತನ್ನಲ್ಲಿದೆ ಎಂಬ ಭಾವನೆ ಮೂಡುವಂತೆ ನಟಿಸಿ ಮಂದಮತಿಗಳಾದ ಗಂಡಸರನ್ನು ವಶಪಡಿಸಿಕೊಳ್ಳುವರು' ಈ ಅಂಶವನ್ನು ಉದಾಹರಿಸಲು ಕಾರಣವೇನೆಂದರೆ, ಹೆಂಗಸಿಗೆ ಗಂಡಸು ಉಡಿಗೆ ತೊಡಿಗೆ, ಆಚಾರವಿಚಾರಗಳಲ್ಲಿ ತನಗಿರುವ ಸರಳತೆಯನ್ನು ಕಲಿಸದೆ ಅವಳದೇ ಬೇರೆಯ ವಿಧ, ಹಾಗಿದ್ದರೇ ಚೆಂದ ಎಂದು ಅವಳನ್ನು ದೂರವಿಟ್ಟದ್ದರಿಂದ ಅವಳನ್ನು, ಅದಕ್ಕಿಂತ ಹೆಚ್ಚಾಗಿ ತನ್ನನ್ನು ಅನೇಕವೇಳೆ ಹೇಗೆ ವಿನಾಶಕ್ಕೀಡುಮಾಡಿದ್ದಾನೆ ಎಂಬುದನ್ನು ತಿಳಿಸುವುದೇ ನೃತ್ಯ, ನಾಟಕ, ಸಾಹಿತ್ಯ, ಶಿಲ್ಪಾದಿಗಳಲ್ಲಿ ನಿತ್ಯ ಜೀವನದಲ್ಲಿ ಮಾಡಿರುವ ಭೇದಕ್ಕಿಂತಲೂ ಹೆಚ್ಚು ಭಿನ್ನತೆಯನ್ನು ಒಡಮೂಡಿಸಿ, ಚೆಂದದ ಹೆಸರಿನಲ್ಲಿ ಗಂಡಸು ತನ್ನ ಅಶ್ಲೀಲ ಭಾವನೆಗೆ ಪ್ರೋತ್ಸಾಹ ಕೊಡುವ ಮಾನಸಶಾಸ್ತ್ರೀಯ ಚುಂಬಕಗಳನ್ನು ಸ್ತ್ರೀಯಲ್ಲಿ ಅಳವಡಿಸಿ ಅದಕ್ಕೇ ತಾನು ಬಲಿಯಾಗಿರುವದು ಸಾವಿರಾರು ವರ್ಷಗಳಿಂದ ನಡೆದುಬಂದಿದೆ. ದಿವಂಗತ ರವೀಂದ್ರನಾಥ ಠಾಕೂರರೊಮ್ಮೆ 'ಹೆಂಗಸೇ, ನೀನು ಅರ್ಧ ನಿಜ, ಅರ್ಧ ಗಂಡಸಿನ ಕಲ್ಪನೆ' ಎಂದುದಾವರೂ ಇದೇ ಮಾತಿಗೆ ಪುಷ್ಟಿಕೊಡುತ್ತದೆ. ಹುಟ್ಟಿದಾಗಿನಿಂದ 'ಮರೆಮಾಡುವದನ್ನು ಹೆಣ್ಣುಮಕ್ಕಳಿಗೆ ಅವರ ಹಿರಿಯಳ್ಳಗಳೇ ಕಲಿಸುತ್ತಾರೆ. ಇದರಿಂದ ಅವರ ಅಕ್ಕೋನ್ನತಿಗೆ ಅದಮ್ಯವಾದ ವಿಘ್ನವುಂಟಾಗುತ್ತದೆ. 'ವಿಶ್ವಾಸಯುಕ್ತ ಜ ಪರುನ ತು ವಿಶ್ವಸಂತಿ' ಎಂಬ ಗುಣ ಅವರಿಗೆ ಬರುತ್ತದೆ.

ಸುಧಾರಕರ ಮುಗ್ಧತೆ

ಗಂಡಸನ್ನು ಮೆಚ್ಚಿಸುವ ಅಥವಾ ವಂಚಿಸುವ ಬುದ್ಧಿಯೊಂದೇ ಸುಂದರಿಯೊಬ್ಬಳೆಂಬ ವಳ ಇತಿಕರ್ತವ್ಯವೆನಿಸಿದ್ದಕ್ಕೆ ಇತಿಹಾಸ ಅನೇಕ ನಿದರ್ಶನಗಳನ್ನು ಕೊಡುತ್ತದೆ. ಅದರೆ ಇಷ್ಟು ಸಾವಿರ ವರ್ಷಗಳಾದರೂ ಹೆಂಗಸಾಗಲಿ ಗಂಡಸಾಗಲಿ ಹೆಂಗಸಿಗಿರುವ ಈ ಸ್ವಭಾವ ವಿಭಾಜಕ ವಕ್ರತೆಯನ್ನು ನಿವಾರಿಸಲು ನಿತ್ಯ ಜೀವನದಲ್ಲಾಗಲಿ, ಕಲೆಗಳಲ್ಲಾಗಲಿ ಪ್ರಯತ್ನಿಸಿದ್ದಕ್ಕೆ ಒಂದೂ ದೃಷ್ಟಾಂತವಿಲ್ಲ. ಸ್ತ್ರೀ ಸ್ವಾತಂತ್ರ್ಯವಾದಿಗಳಾದ ಮುಗ್ಧವೀರರೂ ಸಮಾನತೆಯು ಬೇಕೆಂಬ ಭಲಡಂಕವುಳ್ಳಯರೂ ಮೇಲಿನ ಸೂಕ್ಷ್ಮವಾದ ಮಾನಸಶಾಸ್ತ್ರೀಯ ಅಂಶವನ್ನು ಅವಲೋಕಿಸಿ ಸಾಹಿತ್ಯ ಮತ್ತು ಇತರ ಕಲೆಗಳಲ್ಲಿ ಪ್ರಾರಂಭಿಸಿ ನಿತ್ಯ ಜೀವನಕ್ಕೆ ಕ್ರಮೇಣ ತಂದು ಮುಟ್ಟಿಸಿ, ಸ್ತ್ರೀಪುರುಷರ ಜೀವನ ಕಾರ್ಯಗಳಲ್ಲಿಯ (ಸಂತತ್ಯುತ್ಪಾದನ ಕರ್ತೃದೈಹಿಕ ಬಗೆಯೊಂದನ್ನು ಹೊರತು ಮಾಡಿ) ವ್ಯವಹಾರಭೇದವನ್ನು, ತಾರತಮ್ಯವನ್ನು ಇಲ್ಲದಂತೆ ಮಾಡುವದು ಅದರ್ಶ ನಾಗರಿಕ ಜೀವನಕ್ಕೆ ತಳಹದಿಯಾದೀತು. ಇಲ್ಲದಿದ್ದರೆ ಈ ಸ್ತ್ರೀಪುರುಷ ಸಮಸ್ಯೆ ಎಂದೆಂದೂ ಅಳಿಯದು. ಕಲೆಗಾರರು ಮೊದಲು ಇತ್ತ ಗಮನಕೊಡಬೇಕು. ಇಲ್ಲದಲ್ಲಿ ಈ ಕುಶೀಲವಂತಿಕೆ ಅವರಿಂದ ದೂರವಾಗದು. ಹೆಂಗಸರು ತಮ್ಮ ದೃಷ್ಟಿಯನ್ನು ಮಾರ್ಪಡಿಸಿಕೊಳ್ಳಲು ಅಗತ್ಯವಾದ ಸರಳತೆಯನ್ನು ಜೀವನದಲ್ಲಿ ಅಳವಡಿಸಿಕೊಡುವ ಶಿಕ್ಷಣ ಪಡೆಯಬೇಕು; ತಮ್ಮ ಶೃಂಗಾರದೃಷ್ಟಿಯನ್ನು ಬದಲಾಯಿಸಿಕೊಳ್ಳಬೇಕು.

ರಶಿಯದ ವಿದ್ಯಾಭ್ಯಾಸ ಕ್ರಮ

ಕಲಾವಿದರಲ್ಲಿ, ಕಲೆಯಲ್ಲಿ ಬೆರೆಯುವ ಕುಶೀಲ ಕುತ್ಸಿತತೆಗಳನ್ನು ನಿವಾರಿಸಬೇಕಾದರೆ ರಶಿಯದ ವಿದ್ಯಾಭ್ಯಾಸಪದ್ಧತಿಯನ್ನು ಅನುಸರಿಸಬೇಕು. ಅಲ್ಲಿ ಹೆಂಗಸರಿಗೆ ಗಂಡಸರ ಉದ್ಯೋಗಗಳಲ್ಲಿ ... ವಿದ್ಯೆಯನ್ನು ... ಕಲಿಸ ಲಾಗುತ್ತದೆ. ಅಲ್ಲಿಯ ... ನಟ (ಅಥವಾ ನಟಿ) ... ಕೇವಲ ... ಪಾತ್ರವನ್ನು ... ಭಾವಗಳನ್ನು ... ಕೊಡುವುದನ್ನು ಕೇವಲ ... ಎಂದು ಬರೆಯುತ್ತಾನೆ ... ಸ್ಥೆಯೋಣ. ... ಗಳನ್ನು ನಟಿಸುವುದನ್ನೂ ಕಲಿಸಲಾಗುವುದು. ಏಕೆಂದರೆ, ಮಾನವ ವಿದ್ಯೆ, ಕಲೆ, ವಿಜ್ಞಾನವನ್ನು ಕಲಿತವ(ಳ)ನಲ್ಲಿ ... ಎಂಬುದು ಅವರಿಗೆ ... ತವಾಗಿದೆ. ಸಮಾಜಜೀವನಕ್ಕೆ ... ಬರುವ ಯಾವ ಕಾರ್ಯ ಅಥವಾ ವಿಚಾರವೂ ಸಾಮಾಜಿಕರೆದುರು ಕಲೆಯ ... ಬರಕೂಡದು.

—ಸದಾನಂದ ...

ವಿಶೇಷ ಲೇಖ

ಹೈದರಾಬಾದ— ಪುರಾತನ ಮತ್ತು ನೂತ

ಅದರಲ್ಲಿ ಕಾಣಬರುವ ವ್ಯಕ್ತಿಗಳು ಮತ್ತು ಪಾತ್ರಗಳು

— ಪ್ರಸಿದ್ಧ ಪತ್ರಿಕಾ ವ್ಯವಸಾಯಿ ಇಲಾ ಸೇನ್ ಅವರ ಅಭಿಪ್ರಾಯಗಳು —

ರಸ್ತೆಯ ತುದಿಯಿಂದ ತುದಿವರೆಗೆ ಪೋಲೀ ಸೀಟಿ ಕೂಗಿತು. ಜನರು ಸಂದಿಗೊಂದಿ ಲ್ಲಿ ನುಗ್ಗಿಕೊಂಡರು. ಉಳಿದವರನ್ನು ಗೆ ತಳ್ಳಲಾಯಿತು. ರಸ್ತೆ ನಿರ್ಜನ ಯಿತು.


ಾರ ಮೀನಾರದ ಜನಸಂದಣಿಯ ಭಾಗ ಬ್ಧವಾಗಿತ್ತು. ಜಯಕಾರಗಳಿಲ್ಲ, ಅಭಿ ದನೆಯ ಧ್ವನಿಯಿಲ್ಲ; ಬರಿ ತ್ರಾಸದಾಯಕ ೌನ. ನಿಜಾಮರು ಸಂಜೆಯ ನಮಾಜಿಗಾಗಿ ೂರಟಿದ್ದರು. ಆ ಸಮಯದಲ್ಲಿ ಅವರು ಗ್ಲೆಂಡಿನ ಆರನೆ ಜಾರ್ಜ ಅರಸನಿಗಿಂತಲೂ ಗಿಲಾದ ಪ್ರತಿಷ್ಠೆಯನ್ನು ಅನುಭವಿಸುತಿ ರು. ಲಂಡನ್ನಿನ ರಸ್ತೆಗಳಲ್ಲಿ ಜಾರ್ಜ ಅರ ಘಟನಾಧೀನ ರಾಜನಿಗೆ ಒಪ್ಪುವಂತೆ ರಿಗೂ ಯಾವ ಆತಂಕವನ್ನೂ ಮಾಡದೆ ಡಂಬರವಾಗಿ ಓಡಾಡುವದನ್ನು ನಾನು ೋಡಿದ್ದೇನೆ. ಆದರೆ ಹೈದರಾಬಾದಿಗೆ ಇಂದು ಜಾತಂತ್ರ ಬಂದಷ್ಟು ದಡ್ಡ ಹುಡುಗನಿಗೆ ುದ್ಧಿಬಂದಂತೆ–ಅದು ತನ್ನ ಸಹಜವಾದ ಾನಸಿಕ, ಭೌತಿಕ ಸಂವೇದನೆಗಳನ್ನು ಗತ ತಂದಿದೆ. ಹಿಂದಿನ ಮುಂದಾಳುಗಳು ್ಲಕ್ಷಿತರಾಗಿಬಿಟ್ಟಿದ್ದಾರೆ. ಅವರಿಗಾಗಿರುವ ು ಅಷ್ಟಿಷ್ಟಲ್ಲ. ಅವರಿಗೆ ಬಗೆಯೇ ಹರಿಯ ಾಗಿದೆ.

ಆಧುನಿಕ ಜಗತ್ತಿನಲ್ಲಿ ಹೈದರಾಬಾದೊಂದು ಕೃದ್ಧಚಿಂತಾಮಣಿ." ಅಲ್ಲಿ ಬೌದ್ಧಿಕ ಪಲಾ ನವಾದ ತಾನೇ ತಾನಾಗಿದೆ. ಸೌಜನ್ಯ ಬುದು ಅಲ್ಲಿ ಒಂದು ಡಂಬಾಚಾರ ಮಾತ್ರ , ಅದೊಂದು ಕಲೆಯೇ ಆಗಿಬಿಟ್ಟಿದೆ. ವೇ ತಿಂಗಳ ಕೆಳಗೆ ಅಲ್ಲಿ ಹಿಂಸಾಚಾರ ಂದ ಜನರು ಕೊರಗಿ ಸೊರಗಿ ಹೋಗಿ ು. ಅದು ಜಹಗೀರದಾರಿ ಪದ್ಧತಿಯ ದು ಅವಶೇಷ. ಜಗತ್ತಿನಲ್ಲಿ ಬೇರೆಲ್ಲ ಕಡೆ ೋ ಸತ್ತಿದ್ದರೂ ಇಲ್ಲಿ ಆ ಪದ್ಧತಿ ಇನ್ನೂ ಂತವಾಗಿದ್ದು ಪೆಂಡಾರಿಗಳಿಗೂ ವಿದೇಶಿ ಕರಿಗೂ ವಿಲಕ್ಷಣ ದುಸ್ಸಾಹಸಿಗಳಿಗೂ ಕುಮಾರ ಕುಮಾರಿ ಸರದಾರರೊಡನೆ ಟಿ ನಡೆಸುವ ವಿಲಕ್ಷಣ ತರದ ವಿದೇಶೀ ರಿಗೂ ಆಶ್ರಯಸ್ಥಾನವಾಗಿಬಿಟ್ಟಿದೆ. ಸರದಾರರು ನವಾಬರಿಗೆ ಮುಜರೆ ಮಾಡಲು ನ್ನೇ ಮೂಸುತಿದ್ದರೆ ಬಡ ಜನರು ಜೀತದಾಳಿನ ಸ್ಥಿತಿಯಿಂದ ಪೂರ್ತಿ ೆ ಬಂದಿಲ್ಲ, ಅವರಲ್ಲನೇಕರು ತಮ್ಮ ಸ್ವಾತಂತ್ರ್ಯವನ್ನು ಕುರಿತು ಚಿಂತಿಸಲು ಕೂಡ ಸಮರ್ಥರಾಗಿದ್ದಾರೆ.

ವ್ಯಾಸಗಳ ಆಗರ

ದರೆ ಇಲ್ಲಿ ಮಹಾ ವಿದ್ವತ್ತೆ ಪಾಂಡಿತ್ಯ ು ಕಾಣಬಹುದು. ಇಲ್ಲಿ ಕಲಾಬೋಧದ ತ ಪರಿಶುದ್ಧ ರೂಪವೂ ಕಾಣಬರುತ್ತದೆ. ಸಿಕ ಶಿಖಾಮಣಿಗಳೂ ಪ್ರಸಿದ್ಧ ಕಲಾ ಾರಗಳೂ ರಾಜಕುಲದವರ ದಯಾ ್ಮ ಕ್ರೋಧಾಗ್ರಹಗಳ ವಾತಾವರಣದಲ್ಲಿ ತಿದ್ದವು. ಇಲ್ಲಿ ಸಾಹಸಿಗಳು ಕುತಂತ್ರ ಹಿಡಿದು ಶ್ರೀಮಂತರನ್ನು ಸುಲಿದು ರಿಗೆ ಯಾವ ಸೌಖ್ಯವನ್ನೂ ಒದಗಿಸದೆ ದರು. ವಿದೇಶೀಯರಿಗೆ ಹೈದರಾಬಾದಿ ಸಾಹಸಕ್ಕೂ ಶೋಷಣಕ್ಕೂ ಅನರ್ಘ ದೊರಕಿತು. ಪುರಾತನ ಕಾಲದ ಕ್ರೌರ್ಯ, ್ವೇಷಗಳ ಸಂಗಡ ಅಧುನಿಕ ಕಾಲದ ್, ಅಧೋಗತಿಗಳನ್ನು ಬೆರಸಿದ ಒಂದು ಿ ಮಿಶ್ರಣ ಅಲ್ಲಿನ ಜೀವನವನ್ನಾವರಿ ನೆಲದ ಮಕ್ಕಳು ಮಾತ್ರ ನಿರ್ಲಕ್ಷ್ಯ ಕಿಗಾಗಿ ಹಿನ್ನೆಲೆಗೆ ತಳ್ಳಲ್ಪಟ್ಟಿದ್ದರು. ರಾಬಾದು ತನ್ನದೇ ಒಂದು ಜಗತ್ತಾ . ಸಾಮ್ರಾಜ್ಯದ ಸೈನ್ಯಗಳು ಬೇಲಿಯಂತೆ ತ್ತಿಸುತ್ತ ಹೊರಗಿನ ಜಾಗ್ರತ್ ಜಗತ್ತಿನ ತಾಗದಂತೆ ನೋಡಿಕೊಳ್ಳುತ್ತಿದ್ದವು.

ಗಸ್ಟ ೧೫, ೧೯೪೭ ನೆ ದಿನ ಬಾಹ್ಯ ಜಗತ್ತಿ ನೆ ಒಬ್ಬೊಂದೊಮ್ಮೆ ಹೈದರಾಬಾದು ಬಿದ್ದಾಗ ಕಾಲವೇ ನಿಂತುಹೋದಂತೆ ಭಾಸವಾಯಿತು. ಮರುವರ್ಷ ಭಾರತೀಯ ಸೈನ್ಯಗಳು ಸಂಸ್ಥಾನವನ್ನು ಪ್ರವೇಶಿಸಿದಾಗ ಮೊದಲೆಂದೂ ಇಲ್ಲದಷ್ಟು ವಿಪರ್ಯಾಸಗಳು ಅದ ರೊಡನೆ ಬಂದವು. ಇನ್ನು ಮುಂದೆ ಜನರ ಸುಖ ದುಃಖಗಳನ್ನು ಮೆಟ್ಟಿ ರಂಭೆಯಂತೆ ಸಂಸ್ಥಾನ ದಲ್ಲಿ ಸುಲಿಗೆ ನಡೆಸಲು ಯಾರಿಗೂ ಅವ ಕಾಶವಿದ್ದಿಲ್ಲ. ವಿದೇಶಿ ಶೋಷಣೆಯೂ ಪೆಂಡಾರಿ ಗಿರಿಯೂ ನಿಲ್ಲಬೇಕಾಗಿದ್ದಿತು. ಈ ವರೆಗೆ ಅಳು ತಿದ್ದು ಪಲಾಯನವಾದದಿಂದ ಸಂತುಷ್ಟರಾಗಿ ದ್ದವರಿಗೆ ಜೀವನದಲ್ಲಿ ಮೊದಲಬಾರಿ ಅಸಾಧ್ಯ ಭೀತಿಯುಂಟಾಯಿತು. ತಾವು ಈ ವರೆಗೆ ವಾಸಿ ಸುತಿದ್ದ ಕಟ್ಟಡದ ಬುಡವೇ ಗಟ್ಟಿಯಿದ್ದಿಲ್ಲ. ಅದು ಇಸ್ಪೀಟಿನ ಮನೆಯಂತೆ ಪಟಪಟನೆ ಉರುಳಿಬಿದ್ದಿತ್ತು. ಮಕ್ಕಳಂತೆ ಅಜ್ಞಾತದ ವಿಷಯದಲ್ಲಿ ಅವರು ಭಯಭ್ರಾಂತರಾದರು. ಯುದ್ಧದ ಬೆದರಿಕೆ ತೋರಿ ಕೊನೆವರೆಗೆ ಕಾಲ ಹರಣ ಮಾಡುವ ಧೈರ್ಯದಿಂದ ಸ್ವಮಹಿಮೆಯ ಉನ್ಮಾದದಲ್ಲಿ ಚಪ್ಪಾಳೆ ತಟ್ಟಿ ಕುಣಿಯುತಿದ್ದ ಅವರಿಗೆ ಆ ಯುದ್ಧ ಹಠಾತ್ತಾಗಿ ಮೃತ್ಯು ತಾಂಡವದೊಂದಿಗೆ ಎದುರಿಗೆ ದಿಗ್ಗೆಂದು ಎದ್ದು ನಿಂತಿತು. ಭಾರತ ಸರಕಾರದ ಟ್ಯಾಂಕುಗಳನ್ನು ಕಂಡು ಅವರ ಮೈಯಲ್ಲಿ ರಕ್ತಸಂಚಾರವೇ ನಿಂತುಹೋಯಿತು. ಎಲ್ ಎಡ್ರೂಜ ಮತ್ತು



ನಿಜಾಂ ಸಾಹೇಬರು

ಕಾಸೀಮ ರಜವಿಯ ಮತ್ತು ಪಾಕಿಸ್ತಾನದ ಜಂಬದ ಮಾತುಗಳನ್ನು ನಂಬಿ ಅವರು ಪೆಚ್ಚ ರಾಗಿದ್ದರು.

ಶರಣಾಗತಿಯ ಸುಖ

ಹೈದರಾಬಾದಿನ ಹಿಂದಿನ ಅಳರಸರು ಒಂದು ಬಗೆಯಲ್ಲಿ ಇಟಾಲಿಯನ್ನರನ್ನು ಹೋಲುತಿದ್ದ ರೆನ್ನಬಹುದು. ಬೌದ್ಧಿಕ ವಿಚಾರಗಳಲ್ಲಿಯೂ ಕಲಾವಿಲಾಸದಲ್ಲಿಯೂ ಅವರ ಮನ ನಟ್ಟಿತ್ತ ಲ್ಲದೆ ಯುದ್ಧದಲ್ಲಲ್ಲ. ಆದರೆ ಇಟಾಲಿಯನ್ನ ರಂತೆ ಅವರೂ ತಮ್ಮ ಕಾಲ್ಪನಿಕ ಶಕ್ತಿಯ ಭರವಸೆಯಲ್ಲಿ ಮೈಮರೆತು ಎದುರಾಳಿಯ ಶಕ್ತಿಯನ್ನು ಕಡೆಗಣಿಸಿದ್ದರು. ಎರಡನೆ ಯವರಲ್ಲಿಯೂ ಜಗಳಕ್ಕೆ ಹಚ್ಚಿ ತಾವು ಕಡೆಗೂ ಗೆದ್ದವರ ಪಕ್ಷದಲ್ಲಿ ಉಳಿಯಬಹು ದೆಂಬ ಅವರ ಭ್ರಮೆ ನಿರಸ್ತವಾದೊಡನೆ ಶಸ್ತ್ರಾ ಸ್ತ್ರಗಳನ್ನು ಕಳೆದೊಗೆದು ಭಾರತ ಸೈನ್ಯದೊ ಡನೆ ಸಹಕರಿಸಲು ಸಂತೋಷದಿಂದ ಸಿದ್ಧರಾ ದರು. ವೈಯಕ್ತಿಕ ಸುರಕ್ಷಿತತೆಯ ಪ್ರಶ್ನೆ ಬಂದಾಗ ಅವರು ರಜವಿಯನ್ನೂ ನೆನೆಯಲಿಲ್ಲ, ಎಡ್ರೂಜರನ್ನೂ ನೆನೆಯಲಿಲ್ಲ, ನಿಜಾಮಸಾಹೇ ಬರನ್ನು ಕೂಡ ಲಕ್ಷಿಸಲಿಲ್ಲ.

ಈ ಮೊಗಲಾಯಿ ವಾತಾವರಣದ ಚಿಕ್ಕ ದೊಂದು ಅವೃತ್ತಿ ಬೇಕಾದರೆ ಅಲ್ಲಿಯ "ಫಲಕ್ ನುಮಾ" ಅಥವಾ "ಸ್ವರ್ಗಸೀಮಾ" ಅರ ಮನೆಯನ್ನು ನೋಡಬೇಕು. ಅದರ ಅನೈಸ ರ್ಗಿಕ ವಾಸ್ತುಶಿಲ್ಪವೇ ಒಂದು ನಾಟ್ಯಶಾಲೆ ಯಂತೆ ಕಾಣಿಸುತ್ತದೆ. ಮೊಗಲಾಯಿ ಟೊಪ್ಪಿಗೆ ಗಳನ್ನು ಹೊತ್ತ ಅಲ್ಲಿನ ಅಧಿಕಾರಿಗಳು, ಕೈಯಲ್ಲಿ ಬರ್ಚಿ ಹಿಡಿದು ನಿಶ್ಚಲರಾಗಿ ನಿಂತ ಆ ಕಾವಲುಗಾರರು, ಎಲ್ಲರೂ ಯಾವುದೋ ನಾಟಕದಲ್ಲಿ ನಾಯಕನನ್ನೊ ಪ್ರತಿನಾಯಕ ನನ್ನೋ ಎದುರು ನೋಡುವ ಗೌಣಪಾತ್ರ ಗಳಂತೆ ಕಾಣುತ್ತವೆ. ಆ ಅರಮನೆಯಲ್ಲಿ ಸದ್ಯದ ನಿಜಾಮರ ತಂದೆ ವಾಸಿಸುತಿದ್ದರು. ಆದರೆ ಒಬ್ಬ ಅರಸ ಸತ್ತಲ್ಲಿ ಇನ್ನೊಬ್ಬ ಅರಸ ವಾಸಿಸಕೂಡದಾದ್ದರಿಂದ ಅದೀಗ ಅತಿಥಿಗೃಹ ವಾಗಿದೆ. ಅಲ್ಲಿ ೧೯೧೦ ರಿಂದೀಚೆಗೆ ಕರ್ಜನ್, ಪ್ರಿನ್ಸ್ ಅಫ್ ವೇಲ್ಸ ಮತ್ತು ಈಚೆಗೆ ಲಿನ್ ಲಿಥ್‌ಗೋ ಅವರು ಆತಿಥ್ಯಪಡೆದಿದ್ದಾರೆ. ೭೦ ವರ್ಷಗಳ ಹಿಂದೆ ಕಟ್ಟಲ್ಪಟ್ಟ ಈ ಅರಮನೆ ಯಲ್ಲಿ ಕೇವಲ ಶ್ರೀಮಂತಿಕೆಯ ಪ್ರದರ್ಶನ ವಲ್ಲದೆ ಒಂದು ವ್ಯವಸ್ಥೆ, ಕ್ರಮ, ಸೌಂದರ್ಯ ವಿವೇಕ ಯಾವುದೂ ಕಾಣಲಾರದು ಅಲ್ಲಿಯ ಉದ್ಯಾನ ಸುಂದರವಾಗಿದೆ, ಅದರ ಹಿಂದಿರುವ ಜನಾನಾಖಾನೆ ಅತ್ಯಂತ ಸಮಸ್ಯಾತ್ಮಕವಾಗಿದೆ.

ಗತಕಾಲ

ಹೈದರಾಬಾದ ನಗರದ ಒಂದು ದಿನ್ನೆಯ ಮೇಲೆ ಈ "ಸ್ವರ್ಗಸೀಮೆ"ಯಿದೆ. ಅಲ್ಲಿನ ಅಧಿಕಾರಿಗಳು ವಿದೂಷಕ ಉಡಿಗೆ ತೊಡಿಗೆ ಗಳನ್ನು ಧರಿಸಿ ಈಗಲೂ ಇನ್ನೆಂದೂ ಬರಲಾ ರದ ವೈಸರಾಯರುಗಳ ಆತಿಥ್ಯಕ್ಕೆ ಸಿದ್ಧರಾ



ಜನರಲ್ ಚೌಧರಿ

ಗಿಯೆ ಇರುತ್ತಾರೆ. ಅದು ಗತಕಾಲದ ಹೆಗ್ಗು ರುತಾಗಿ ನಿಂತಿದೆ. ಒದಗಿದ ಪರಿವರ್ತನೆಯ ಅಭಿಜ್ಞಾನ ಈ ಜನರಿಗಾಗಲಿ ಅವರ ಅಧಿಪತಿ ಗಾಗಲಿ ಆಗಿಲ್ಲ. ಅವರು ಇನ್ನೂ ಆಸೆಯಿಂದ ದಾರಿ ನೋಡುತಿದ್ದಾರೆ. ಕಾಲ ಬದಲಾಗಿದೆ ಯೆಂದು ಅವರು ನಂಬಲಾರದವರಾಗಿದ್ದಾರೆ.

ಈ ದಿನ್ನೆಯ ಮೇಲಿನ ಅಸ್ವಾಭಾವಿಕ ಫಲಕ್ ನುಮಾದ ಹಿನ್ನೆಲೆಯ ಮುಂದೆ ಅತ್ಯಂತ ತೀವ್ರಗತಿಯಿಂದ ಪರಿವರ್ತನ ನಾಟಕವೊಂದು ಅಭಿನೀತವಾಗುತ್ತಿದೆ. ನಾಯಕಪಟ್ಟದಿಂದ ಚ್ಯುತರಾಗಿದ್ದರೂ ನಿಜಾಮರು ಇನ್ನೂ ತೀರ ಗೌಣಪಾತ್ರವೇನೂ ಆಗಿಲ್ಲ. ತಮ್ಮ ದರಬಾರಿನ ಪ್ರಾಚೀನ ವಾತಾವರಣದಲ್ಲೇ ಉಳಿದಿರುವ ಅವರು ಒಂದಲ್ಲಒಂದು ಬಗೆಯಿಂದ ಬಗಲಿಗೆ ಹಾಕಿಕೊಳ್ಳಬಾರದ ಜನರೇ ಇಲ್ಲವೆಂದು ನಂಬಿ ಕೊಂಡಿದ್ದಾರೆ. ಆದರೆ ಜಿಪುಣರಾದ ಅವರು ತಕ್ಕ ಬೆಲೆ ಕೊಡಲೂ ಸಿದ್ಧರಿಲ್ಲ. ಅವರ ವೇಷ ಭೂಷಣಗಳು ಯಾವಾಗಲೂ ಅತಿಸರಳ— ತೀರ ಕೃಪಣತನದ್ದೆಂದೂ ಹೇಳಬಹುದು. ಸಮಾರಂಭ ಕಾಲದಲ್ಲಿ ಹೊರತು ಅವರು ರತ್ನಾ ಭರಣಗಳನ್ನು ಧರಿಸದಿದ್ದರೂ ಅಸಂಖ್ಯ ರತ್ನಾ ಭರಣಗಳನ್ನು ಕೂಡಿಹಾಕಿರುವದು ಪ್ರಸಿದ್ಧ ವಾಗಿದೆ. ಅವರ ಸಂಪತ್ತನ್ನು ಅಳೆದವರೇ ಇಲ್ಲ. ಆದರೆ ಈಗ ಭಾರತ ಸರಕಾರ ಅದರಲ್ಲಿ ಪ್ರವೃತ್ತವಾಗಿದೆ.

ಅವರ ನಿಕಸತ್ತೆ ಕಳೆದುಹೋಗಿ ಇಂದು ಪ್ರಜಾತಂತ್ರ ಸ್ಥಾಪಿತವಾಗಿದೆ. ಅದರಲ್ಲಿ ಅವರಿಗೆ ಉಸಿರೆತ್ತುವ ಅವಶ್ಯಕತೆ ಕೂಡ ಬೀಳದು. ಅವರ ಅನೇಕಾನೇಕ ರಾಣಿ ಯರೂ ತಿಂಗಳಿಗೆ ೨೦೦ ರೂಪಾಯಿ ಉತ್ಪನ್ನ ಕೂಡ ಇರದ ೧೨೬ ಶಾಹಜಾದರೂ ಮೆಲ್ಲ ಮೆಲ್ಲಗೆ ಹೊಸ ಅವರಣಕ್ಕೆ ಹೊಂದಿಕೊಳ್ಳ ಬೇಕಾಗಿದೆ. ಅವರ ಹಿತ ಸಂಬಂಧಗಳ ರಕ್ಷ ಣೆಗಾಗಿ ಕೂಲಿಕಾರ ಸಂಘದಂತೆ ಒಂದು ಶಾಹ ಬಜಾದಾ ಸಂಘವೇ ಇದೆ. ಅವರಿಗೆ ಪ್ರಾಮಾ ಣಿಕವಾದ ದುಡಿತವೆಂದರೇನೆಂದು ತೋರಿಸಿ ಕೊಟ್ಟರೆ ತುಂಬ ಹಿತವಾದೀತು! ಅದರೆ ಅವ ರಲ್ಲಿ ಅನೇಕರು ನಿರಕ್ಷರಿಗಳು!

ಅರಬ ಪೇಡಾರಿ

ನಾಟಕದಲ್ಲಿ ಎರಡನೆ ಪಾತ್ರವೆಂದರೆ ಹೈದ ರಾಬಾದ ಸೈನ್ಯದ ಸೇನಾಪತಿಗಳಾದ ಸಯ್ಯದ ಎಲ್ ಎಡ್ರೂಜರು ಸೋತ ಸೇನಾಪತಿಯ ಅಭಿಮಾನ–ಅವಮಾನ ಗಳು ಅವರನ್ನು ಮುಟ್ಟಿಲ್ಲ. ಹೈದರಾಬಾದಿ ನಲ್ಲಿ ತಮಗೆ ಭವಿಷ್ಯವೇ ಉಳಿದಿಲ್ಲವೆಂದು ಅವರು ಅರಿತಿದ್ದಾರೆ. ಆದರೆ ತಮ್ಮಂಥ ಸಾಹ ಸಿಗಳಿಗೆ ಈ ಕಚ್ಚಾಡುವ ಜಗತ್ತಿನಲ್ಲಿ ದೇಶೋ ವಿಶಾಲಃ ಪ್ರಥವೋಸ್ಯನಂತಾಃ ಎಂದು ಅವರಿಗೆ ಗೊತ್ತು. ಅವರು ಅರಬ ವಂಶದವರು. ಸುಂದರ, ನಿಶ್ಚಿಂತ. ಯಾವ ಅರಬನೂ ನಾಳೆ ಗಾಗಿ ಚಿಂತಿಸುವದಿಲ್ಲ. ಇಂದು ಬಂದದ್ದೇ ಅವ



ಎಲ್. ಎಡ್ರೋಜ

ನಿಗೆ ಸಾಕು, ಎಂದು ಅವರು ಹೇಳುವದು ವಕ್ರೋಕ್ತಿಯಲ್ಲ, ಅರಬಸ್ತಾನಕ್ಕೆ ಹೋಗಿ ಸೈನ್ಯಾಧಿಕಾರಿಯಾಗಬೇಕೆಂದು ಅವರು ಅಪೇ ಕ್ಷಿಸುತ್ತಾರೆ. ಹಿಂದೀ ಸೇನಾಪತಿ ಅವರನ್ನು ಗೌರವದಿಂದ ನಡೆಸಿಕೊಳ್ಳುತ್ತಾನೆ. ಹೈದರಾ ಬಾದಿನಲ್ಲಿ ಸೋತು ತೇಜೋವಧೆ ಹೊಂದಿ ದ್ದರೂ ಅವರು ಬಲು ಆಕರ್ಷಕ ವ್ಯಕ್ತಿ. ಹೈದ ರಾಬಾದಿಗೆ ಹತ್ತಿದ ಹುಳುಕು ಅವರ ಸ್ವಭಾ ವಕ್ಕೂ ಅಂಟಿಕೊಂಡಿದ್ದರೂ ಅವರು ಹಿಂದು ಳಿದ ಮಧ್ಯಪೂರ್ವದ ರಾಷ್ಟ್ರಗಳಲ್ಲಿ ಇಂದಾ ದರೂ ಜನಪ್ರಿಯರಾಗಬಲ್ಲರು. ಅವರು ಮಧ್ಯ ಯುಗದ ಸಾಹಸಿಗಳಂತೆ ದಯಾ ದಾಕ್ಷಿಣ್ಯ ಶೂನ್ಯರಾಗಿದ್ದಾರೆ. ಬ್ರಿಟಿಶರಿಂದಲೇ ತಮ್ಮ ಸ್ಥಾನ ಗೌರವವನ್ನು ಪಡೆದ ಅವರು ಎಷ್ಟೋ ಪಾಶ್ಚಾತ್ಯ ಅಭ್ಯಾಸಗಳನ್ನು ಮೈಗೂಡಿಸಿ ಕೊಂಡಿದ್ದಾರೆ. ಅವರ ಅಂಗಭಂಗಿಗಳು ಕೂಡ ಬ್ರಿಟಿಶರಿಂದ ಎರವು ತೆಗೆದುಕೊಂಡವುಗಳು. ಇಂಗ್ಲೀಷರೊಡನೆ ತಮಗಿರುವ ಗೆಳೆತನದ ಬಲ ದಿಂದ ಹೈದರಾಬಾದಿಗೆ ಶಸ್ತ್ರಾಸ್ತ್ರಸಾಮಗ್ರಿ ತರಿ ಸಿಕೊಳ್ಳಬಹುದೆಂದು ಅವರು ಬಗೆದಿದ್ದರು. ಆದರೆ ಸಿಡ್ನೆ ಕಾಟನ್ನನಂಥವರನ್ನು ಬಿಟ್ಟರೆ ಅಲ್ಲಿಯೂ ಅವರ ಮನೋರಥ ಕೈಗೂಡದೇ ಹೋಯಿತು.

ಧರ್ಮಾಂಧ ರಜವಿ

ಹೈದರಾಬಾದಿನಲ್ಲಿ ಸೈನ್ಯಶಕ್ತಿ ಎಲ್ ಎಡ್ರೂ ಜರ ಕೈಯಲ್ಲಿದ್ದಿದ್ದರೆ ಕಾಸೀಮ ರಜವಿಯೋ ಅಲ್ಲಿಯ ಧರ್ಮಾಂಧ ರಾಜಕೀಯ ಅಧಿ ನಾಯಕನಾಗಿದ್ದ. ಅವರಿಬ್ಬರ ಕ್ರೂರಬುದ್ಧಿ ತುಲ್ಯವಾಗಿದ್ದರೂ ರಜವಿ ಮಾತ್ರ ಶೂ ಆದರೆ ಅವನು ತನ್ನ ಗಳಿಂದಲೂ ಪ್ರ ಬಾದಿನ ಮೇಲೆ ವರ್ಚಸ್ಸನ್ನು ಸ್ಥಾ ಯಾಯಿಗಳು ಅ ಭಾರತದ ಸೈನ್ಯಕ್ಕೆ ದ್ದಾರೆ. ಅವನೀಗ ನೋಡುತಿದ್ದಾನೆ. ಆಕಾಶಬಾಣದಂತೆ ಕಣ್ಮರೆಯಾದರೂ ಯದ ಆಸೆಯ ಇ ಧತೆ ಮಾಯವಾ ತನ್ನ ದಿನಗಳನ್ನೆ ಬಳಲುತ್ತ ಸೆರೆಮ

ಹೈದರಾಬಾದ ಮುಗಿದೇ ಹೋದಿ ರಾಜನಾಗುವ ನಿಜಾ ತನಗೊಂದು ಸ್ಥಾಪಿಸಿಕೊಳ್ಳಬೇ ಅವನು ಹೈದರಾ ದಿಂದ ಹಳ್ಳಿಹಳ್ಳಿಗ



ಅವನ ವ್ಯಕ್ತಿತ್ವ ಆದರೂ ಧರ್ಮಾ ಅವನ ಶಕ್ತಿ ಪ್ರಚ ರಜವಿಗೂ ಎಡ್ರೂ ಗಿತ್ತು. ಆದರೆ ಅ ಬೇರೆ. ಎಡ್ರೂಜರಿ ಅರಿವಿದ್ದಿಲ್ಲ. ರಜವಿಗೆ ತಮ್ಮ ಅಳವು ಮೀ ಆದರೆ ರಜವಿಯಿ ಯಿಯಿಂದುಂಟು ಲಿದೆಯೆಂದು ಭೀ ಸೋತರೂ ಪಶ್ಚಾ ಭವಿಷ್ಯದೊಡನೆ ರಾಗಿದ್ದಾರೆ.

ಗವರ್ನರರ ಕಾರ್

ಈ ಪಾತ್ರಗಳು ಮೇಜರ ಜನರ ದಲ್ಲಿ ಸುತ್ತುತ್ತಿ ತಂತ್ರವಾ ಕಾರ್ಯ ವಿವೇಕ ಮ ಹೆಜ್ಜೆಹೆಜ್ಜೆಗೂ ಮ ಗುಳಿಗುಂಪುಗಳಿವೆ. ಕರ್ತವ್ಯಚ್ಯುತಿಯ ಧೋರಣ ಮತ್ತು ಈ ಕಾರ್ಯದಲ್ಲಿ ಗೆದ ತಂತ್ರಜ್ಞತೆಯೊಂದ

(೧೦ ನೇ

ನವಿಲು ತೀರ್ಥದ ೩ ದೃಶ್ಯಗಳು

ಲೇ:- ಶ್ರೀನಿವಾಸ ನಾಯಕ

ಮನೋರಂಜನೆಯೆಂಬುಸು ಮನುಷ್ಯನಿಗೆ ಅತ್ಯಗತ್ಯವಾದ ವಸ್ತು. ಆದನ್ನ ಅವನು ನಾನಾ ಮುಖಗಳಿಂದ ದೊರಕಿಸುತ್ತಾನೆ. ಚಿತ್ರ ಬರೆಯುವದು, ಸಂಗೀತ, ನೃತ್ಯ, ಚಲ ಚಿತ್ರ ನೋಡುವದು ಮತ್ತು ಇದರಂತಹ ಅನೇಕ ದಾರಿಗಳಿಂದ ಮನುಷ್ಯನು ಮನೋರಂಜನೆಯನ್ನು ಒದಗಿಸಿಕೊಳ್ಳುವನು. ಮುಳುಗುವ ಸೂರ್ಯ, ಹರಿಯುವ ನದಿ, ಉತ್ತುಂಗವಾಗಿ ನಿಂತ ಪರ್ವತ, ಪಾತಾಳಕ್ಕಿಳಿದ ಕೊಳ್ಳಗಳು, ಇವುಗಳನ್ನ ಕಣ್ಣು ತೃಪ್ತಿಯಾಗುವ ವರೆಗೆ ನೋಡುವದರಿಂದ ನಾವು ಮನರಂಜನೆಯನ್ನು ಹೊಂದಬಹುದು. ಈ ವಿಧಾನದಲ್ಲಿ ಭಾವನಾಜೀವಿಗಷ್ಟೆ. ಎಡೆ ಇರುವದು.

ನವಿಲು ತೀರ್ಥವು ಸವದತ್ತಿಯಿಂದ ನರಗುಂದ ರಸ್ತೆಯಲ್ಲಿ ಸುಮಾರು ಐದಾರು ಮೈಲುಗಳಾಗಬಹುದು. ಮೋಟಾರುಗಳು "ನವಿಲು ತೀರ್ಥ" ಎಂದು ಬರೆದಬೋರ್ಡಿನ ಮುಂದೆ ನಮ್ಮನ್ನ ಬಿಡುತ್ತವೆ. ಮುಂದೆ ಆರ್ಧ ಮೈಲು ನಡೆದು ನಾವು ನಮ್ಮ ಗುರಿಯನ್ನ ಮುಟ್ಟಬಹುದು. ಸೃಷ್ಟಿ ಸೌಂದರ್ಯ ಸವಿಯಲೆಂದು ಹೋದವರು ಸವದತ್ತಿಯಲ್ಲಿ ಒಂದು ದಿನವಾದರೂ ತಂಗಲೇಬೇಕಾಗುವದು. ಅಲ್ಲಿಯ ಜನರ ಔದಾರ್ಯವು ಇಳಿದುಕೊಳ್ಳಲು ಬೇಕಾದಷ್ಟು ಸ್ಥಳವನ್ನ ಒದಗಿಸಿ ಕೊಡುತ್ತದೆ. ಸವದತ್ತಿಯಲ್ಲಿಯೂ ಒಂದು ನೋಡಲೇಬೇಕಾದ ಕೋಟೆ ಇವೆ. ಎಲ್ಲಮ್ಮನ ಗುಡ್ಡದ ಜೊತೆಗೆ ಇರುವ ಗುಡ್ಡದ ಮೇಲಿನ "ಪರಸಗಡ" ಕೋಟೆಯು ಹಾಳಾದ ಮೇಲೆ ಈ ಕೋಟೆಯನ್ನು ಕಟ್ಟಿದರಂತೆ. ಕೋಟೆಯ ನಟ್ಟ ನಡುವೆ ಒಂದು ಗುಡಿಯಿದೆ. ಮತ್ತು ಅಲ್ಲಿ ಈಗ ಇಂಗ್ಲೀಷು ಶಾಲೆಯೊಂದು ನಡೆಯುತ್ತಿದೆ. ಕೋಟೆಯು ಹೊಸದಾಗಿ ಕಟ್ಟಿದ್ದರಿಂದ ದೂರದಿಂದ ಬೆಳ್ಳಗೆ ಭೂಮಿಗಿಳಿದ ಚಂದ್ರನಂತೆ ಕಾಣುವದು.

ಮಲಪ್ರಭಾ ನದಿಯು ಗುಡ್ಡವನ್ನು ನವಿಲಿನ ಗರಿಯಾಕಾರದಂತೆ ಪೊದೆ ಪೊದೆಯಾಗಿ ಕೊರೆದು ಹರಿಯುವದರಿಂದ ಇದಕ್ಕೆ "ನವಿಲು ತೀರ್ಥ"ವೆಂದು ಹೆಸರು ಬಂದಿದೆ. ಈಗ ಸುಮಾರು ಒಂದು ಫರ್ಲಾಂಗಿನಷ್ಟು ಕಂದರದಲ್ಲಿ ನದಿಯು ಹರಿಯುತ್ತದೆ. ನದಿಯ ಪಾತಳಿಗೆ ಮುಟ್ಟಬೇಕಾದರೆ ಕಲ್ಲು ಹಾಸಿಗೆಯಿಂದ ಇಳಿದು ಹೋಗಬೇಕಾಗುವದು. ಕಲ್ಲಿನಲ್ಲಿ ಹರಿಯುವ ನೀರು ತಂಪಾಗಿರುವದರಿಂದ ಬಿಸಿಲಿನಲ್ಲಿ ದಣಿದು ಹೋದ ಪ್ರವಾಸಿಕರಿಗೆ ಸ್ನಾನಕ್ಕೆ ಆಲ್ಹಾದಕರವಾಗಿದೆ. ಒಮ್ಮೆ ಸ್ನಾನಕ್ಕಿಳಿದ ಮೇಲೆ ವೇಳೆಯ ಮಹತ್ವವೇ ನಮಗನಿಸುವದಿಲ್ಲ. ಬಿಸಿಲೇರಿದಂತೆ ಇನ್ನಷ್ಟು ಹೊತ್ತು ನೀರಿನಲ್ಲಿ ಕೂಡಬೇಕೆನಿಸುವದು. ನೀರು ಕಲ್ಲುಗಳಲ್ಲಿ ಭರದಿಂದ ಹರಿಯುವದರಿಂದ ಅಲ್ಲಲ್ಲಿ ಸಣ್ಣ ಸಣ್ಣ ಧಬಧಬೆಗಳಾಗಿ ನೀರಿನಲ್ಲಿ ತೇಲಿಬಿಟ್ಟ ಅರಳೆಯಂತೆ ಶೋಭಿಸುತ್ತವೆ.

ಪರಮಾತ್ಮನ ಸಾಕ್ಷಾತ್ಕಾರ ಪಡೆಯಲು ಭಕ್ತರು ಇಂಥ ಸೃಷ್ಟಿ ಸೌಂದರ್ಯದ ಬೀಡಾದ ತೀರ್ಥಗಳಲ್ಲಿ ಕೂಡುವುದುಂಟು. ಈ ನವಿಲು ತೀರ್ಥವೂ ಅಂಥ ತಪಸ್ವಿಗಳಿಗೆ ಪವಿತ್ರವಾದ ವಾಸಸ್ಥಾನವಾಗಿದ್ದದೂ ಉಂಟು.

ನವಿಲು ತೀರ್ಥದ ಪ್ರವಾಸ ಕೈಕೊಳ್ಳಬೇಕಾದರೆ ಎಂಟು ಅಥವಾ ಹತ್ತು ಗೆಳೆಯರ ಗುಂಪೇ ಉತ್ತಮವೆನಿಸುವದು. ಗುಡ್ಡದ ದಾರಿಯಲ್ಲಿ ನಗೆಯಾಡುತ್ತ ಹೊರಟರೇನೆ ನವಿಲ ತೀರ್ಥದ ಸೃಷ್ಟಿ ಸೌಂದರ್ಯದಲ್ಲಿ ರಸ ನಿಮಿಷಗಳನ್ನು ಅನುಭವಿಸಬಹುದು. ಅವುಗಳನ್ನ ನೋಡಿ ಅನುಭವಿಸಬೇಕು ವಿನಾ ಕೇಳಿ ಅಥವಾ ಓದಿ ಸಾಧ್ಯವಿಲ್ಲ-

ನವಿಲು ತೀರ್ಥದ ೩ ದೃಶ್ಯಗಳು



ನವಿಲು ತೀರ್ಥದಲ್ಲಿ ನೀರಾಟ — ಚಿತ್ರ ಶ್ರೀ ನಾಯಕ





ಮಲಪ್ರಭೆಯ ರೌದ್ರ ದರ್ಶನ - ಚಿತ್ರ ಶ್ರೀ ಸಾವಕಾರ

ಮೂಲೆ ಮೂಲೆಗಳಿಂದ

ಕಳೆದ ಜನವರಿಯಲ್ಲಿ ದಕ್ಷಿಣ ಆಫ್ರಿಕದ **ಮೂಲನಿವಾಸಿಗಳಿಗೂ ಹಿಂದೀಯರಿಗೂ ನಡೆದ ತಿಕ್ಕಾಟದ ಬಗ್ಗೆ** ಸರಕಾರ ನಿಯಮಿಸಿದ ವಿಚಾರಣಾ ಸಮಿತಿಯು ತನ್ನ ವರದಿಯಲ್ಲಿ ಮೂಲ ನಿವಾಸಿಗಳು ಸೇಡು ತೀರಿಸಿಕೊಳ್ಳಲು ಇನ್ನೊಮ್ಮೆ ದಾಳಿ ಮಾಡಬಹುದೆಂದು ಹಿಂದೀಯರಿಗೆ ಎಚ್ಚರಿಸಿದೆ. ಯುರೋಪಿಯನ್ನರು ಮೂಲನಿವಾಸಿಗಳನ್ನು ರೊಚ್ಚಿಗೆಬ್ಬಿಸಿ ಹಿಂದೀಯರ ಮೇಲೆ ಏರಿ ಹೋಗುವಂತೆ ಮಾಡಿದ್ದು ನಿಜವಾದರೂ ಅಂಥ ಯುರೋಪಿಯನ್ನರ ಸಂಖ್ಯೆ ಕಡಿಮೆಯಿದೆಯೆಂದೂ ಅಭಿಪ್ರಾಯಪಡಲಾಗಿದೆ.

ತಾ|| ೧೮ ರ ಮಧ್ಯರಾತ್ರಿಯಲ್ಲಿ **ಐರಿಶ್ ಪ್ರಜಾರಾಜ್ಯ ಉದಯಿಸಿತೆಂದೂ** ೧೯೧೬ ರಲ್ಲಿ ಐರ್ಲೆಂಡನ್ನು ಪ್ರಜಾರಾಜ್ಯವೆಂದು ಘೋಷಿಸಿ ಐರಿಶ್ ಸ್ವಯಂಸೇವಕರು ಬ್ರಿಟಿಶರ ಗುಂಡಿಗೆ ತುತ್ತಾದ ಸ್ಥಳದಲ್ಲಿ ಅಧ್ಯಕ್ಷ ಜಾನ್ ಓಕಲ್ಲಿಯವರು ಸ್ವಹಸ್ತದಿಂದ ರಾಷ್ಟ್ರಧ್ವಜವನ್ನು ಹಾರಿಸಿದರೆಂದೂ ತಿಳಿಯುತ್ತದೆ. ಈ ಹೊಸ ರಾಷ್ಟ್ರಕ್ಕೆ ಭಾರತ ಮುಖ್ಯ ಮಂತ್ರಿ ಪಂ. ನೆಹರು ಶುಭಾಶಯಗಳನ್ನು ಕಳಿಸಿದ್ದಾರೆ.

ಬಲ್ಗೇರಿಯದ ಮುಖ್ಯ ಮಂತ್ರಿ ಡಿಮಿಟ್ರೋ ಅಸ್ವಸ್ಥರಾಗಿದ್ದು ಔಷಧೋಪಚಾರ ಪಡೆಯುತ್ತಿರುವುದರಿಂದ ಅವರಿಗೆ ರಜೆ ಕೊಡಲಾಗಿದೆಯೆಂದು ಸೋಫಿಯಾ ಆಕಾಶವಾಣಿ ಸಾರಿದೆ. ಬಾಲ್ಕನ್ ರಾಷ್ಟ್ರಗಳ ಮಹಾಮಂಡಲವನ್ನು ರಚಿಸಲು ಟಿಟೋ ಮತ್ತು ಡಿಮಿಟ್ರೋವರು ಕೂಡಿ ಹೊರಡಿಸಿದ ಪ್ರಕಟನೆಯಿಂದ ಸೋವಿಯೆಟ್ಟಿಗೆ ಸಿಟ್ಟು ಬಂದು ಡಿಮಿಟ್ರೋವರನ್ನು ಮನೆಗೆ ಕಳಿಸಲು

ಆದು ಈ ಹೊಂಚು ಹಾಕಿದೆ ಎಂ[...] ಲಾಗುತ್ತಿದೆ.

ಅಫಗಾನಿಸ್ತಾನದ ರಾಜಧಾ[ನಿ] **ಕಾಬೂಲಿನಲ್ಲಿ** ಪಾಕಿಸ್ತಾನ ವಿರೋ[ಧಿ] ಪ್ರದರ್ಶನ ಜರೆಯುತ್ತಿದೆ. ಪಾ[...] ಇಸ್ಲಾಮಿನ ಹೆಸರಿನಲ್ಲಿ ಬ್ರಿಟಿಶರ ಕಾ[...] ಧೋರಣೆವಹಿಸಿದೆಯೆಂದು ಆರೋಪಿಸ[...]

ಪಾಕಿಸ್ತಾನ ಸರಕಾರದವರು ಪಾಂ[...] ಯಲ್ಲಿ ಶೀಘ್ರದಲ್ಲೇ ಒಂದು ದಾ[...] ಕಚೇರಿಯನ್ನು ಪ್ರಾರಂಭಿಸಲಿರು[...] ವಿಶ್ವಸನೀಯವಾಗಿ ತಿಳಿದು ಬರುತ್ತದೆ.

ಜಾಗತಿಕ ಆಹಾರ ಮತ್ತು [...] ಸಂಘಟನೆಯವರು ಡಾ. ಪಿ. ಎಸ್. [...] ರನ್ನು ಜಾಗತಿಕ ಅರೋಗ್ಯ ಸಂಘಟನೆ[...] ಕಾರ ಪಡೆಯಲು ಮತ್ತು ಸ್ಥಳೀಯ [...] ಗಳಿಗೆ ಮಲೇರಿಯ ವಿನಾಶದಲ್ಲಿ [...] ಮಾಡಲು ಪಾಕಿಸ್ತಾನ ಹಿಂದುಸ್ತಾ[ನ...] ಕಳಿಸಿದ್ದಾರೆ.

ಭಾರತ ಸರಕಾರದ ಬೇಡಿಕೆಯ [...] ಜಾಗತಿಕ ಅರೋಗ್ಯ ಸಂಘಟನೆ[...] ಯಿಂದ ಡಾ. ಜಾನ್ ಕೆಟ್ಲರರು [...] **ದಿಂದ ಹೊಸದಿಲ್ಲಿಗೆ** ಬಂದು ಮೇಹ[...] ಗಳಿಗೆ ಹೊಸ ಮಾದರಿಯ ಚಿಕಿತ್ಸೆ [...] ಹೇಗೆ ನಡೆಸಬೇಕೆಂಬುದನ್ನು ಕೋ[...] ರಿದ್ದಾರೆ.

ಜರ್ಮನ್ ಸಾಮ್ರಾಜ್ಯವಾದಿತ್ವದಿಂ[ದ...] ಕೊಳ್ಳಲೆಂದು **ಜೆಕೋಸ್ಲೋವ[ಾಕಿಯ] ಮತ್ತು ಹಂಗರಿಗಳು** ೨೦ ವರ್ಷದ [...] ಪರಸ್ಪರ ಸಂರಕ್ಷಣ ಸಂಧಿಯನ್ನು [...] ಕೊಂಡಿವೆ.

ಬ್ರಿಟನ್ ಮತ್ತು ಅಮೇರಿಕಗಳು [...] **ನೇಶಿಯ ಪ್ರಶ್ನೆಯನ್ನು** ಬೇಗನೆ [...] ಸಲು ಒತ್ತಾಯಿಸುತ್ತಿವೆ. ಆದರೆ [...] ಟಿಕ್ ಒಪ್ಪಂದದ ಪ್ರಕಾರ ಅಮೇರಿಕ [...] ಯುರೋಪಿನ ರಾಷ್ಟ್ರಗಳಿಗೆ ಯುದ್ಧ[...] ಯವನ್ನು ನೀಡುವಲ್ಲಿ ಡಚ್ಚರ ಅಸ[...] ಪಡೆವಳಿಕೆ ವಿಘ್ನಕಾರಿಯಾದೀತೆಂದು [...] ಗಿದೆ. ಇಂಡೋನೇಶಿಯ ಪ್ರಶ್ನೆಯನ್ನು [...] ಸಮಾಧಾನಕರವಾಗಿ ಬಗೆಹರಿಸದಿದ್ದ[...] ರಿಗೆ ಅಂಥ ಸಹಾಯವನ್ನು ಕೊ[...] ವೆಂದೂ ಪಶ್ಚಿಮ ಯುರೋಪಿನ [...] ಗಾಗಿ ಕೊಟ್ಟ ಶಸ್ತ್ರಾಸ್ತ್ರಾದಿಗಳನ್ನು [...] ಶಗಳಿಗೆ ಒಯ್ಯಬಾರದೆಂದೂ ಅಮೇರಿ[...] ರಿಗೆ ಎಚ್ಚರಿಸಿದೆ.

ಅಮೇರಿಕದ ವಿದೇಶ ಮಂತ್ರಿ ಅಚಿಸನ್ನರು, ಚೀನೀಯರು ಯು[...] ಬೇಸತ್ತಿರುವುದರಿಂದ ತಾವು ಹೆಚ್ಚು [...] ಮಾಡಿದರೆ ಅದಿನ್ನೂ ಮುಂದುವರಿ[...] ಕಾರಣದಿಂದ ಇನ್ನು ಮುಂದೆ ಚೀ[...] ಕಾರಕ್ಕೆ ಅಮೇರಿಕ ಯಾವ ಸಹಾ[...] ಕಳಿಸುವುದಿಲ್ಲ, ಎಂದರು.

ಚಿಂಕಿಯಾಂಗ್ ವರದಿಯ ಪ್ರಕಾ[ರ] ಯಾಂಗ್ಸ್ಯಾನಿನ ಬಳಿ **ಯಾಂಗಟ್ಸೀ [...] ಸೇತುಶಿರವನ್ನು** ಕಮ್ಯುನಿಸ್ಟರು [...] ಪಡಿಸಿಕೊಂಡಿದ್ದಾರೆಂದು ತಿಳಿಯುತ್ತ[...] ಯಾಂಗ್ ದಲದ ಸೇನಾಪತಿ ಲಿ[...] ಜನರಲ್ ತಾವ್ಹೋ ಹುಂಗ್ ಚಾ[...] ಕಮ್ಯುನಿಸ್ಟರೊಡನೆ ಸಹಕರಿಸಿದ ಆ[...] ಮೇರೆಗೆ ಬಂಧಿಸಲಾಗಿದೆ. ಇವ[...] ಇನ್ನೂ ೧೩೦ ಅಧಿಕಾರಿಗಳನ್ನು ಇದೇ[...] ನೆಯ ಮೇಲೆ ಹಿಡಿಯಲಾಗಿದೆ. [...] ಸಂಧಾನವಾಗುತ್ತಿರುವಾಗಲೇ [...] ವಿಮಾನ ತಮ್ಮ ಪ್ರದೇಶದಲ್ಲಿ ಸೈನಿಕ [...] ಮಾಡಿಕೊಂಡು ಹೋದುದರಿಂದ [...] ರಿನ್ನೂ ಬಗ್ಗದೆ ಕಡೆಯ ಪ್ರತಿಭಟನೆ[...] ನಡೆಸುತಿದ್ದಾರೆಂದು ಕಮ್ಯುನಿಸ್ಟ ರೇ[...] ಸಾರಿದೆ.

ನ್ಯೂಯಾರ್ಕ ಪತ್ರಿಕೆಗಳಲ್ಲಿ ಯು[...] ವಾದರೆ ಬಳಸಿಕೊಳ್ಳಲೆಂದು ಬ್ರಿ[...] **ಅಮೇರಿಕದ ವಿಮಾನ ದಲಕ್ಕೆ [...] ಬಾಂಬಿನ ಠಾಣೆಗಳನ್ನು** ಕಲ್ಪಿಸಿ[...] ಗಿದೆ. ಎಂದು ಸ್ಥೂಲಾಕ್ಷರಗಳಲ್ಲಿ [...] ಲಾಗಿದೆ! ಆದರೆ ಅಲ್ಲಿಗೆ ಅಣು ಬಾಂ[ಬು] ಈ ವರೆಗೆ ಒಯ್ದಿಲ್ಲ, ಯುದ್ಧ ಪ್ರಾರಂ[ಭ...] ಮಾತ್ರ ಒಯ್ಯಲಾಗುವುದು ಎಂದು [...]

[...]ಜರು ಹೇಡಿಯಲ್ಲ; [...] ಹೇಳಬಿರುವದಿಲ್ಲ. [...]ತ್ರ ಚಂಚಲದೃಷ್ಟಿ[...]ದಿಂದಲೂ ಹೃದರಾ[...] ಬಗೆಯ ದಾನವೀ[...]ಸು. ಅವನ ಅನು[...]ದು ತೊರೆದುದಲ್ಲದೆ [...]ನ್ನು ಹಿಡಿದುಕೊಟ್ಟ [...]ಚಾರಣೆಯನ್ನೆದುರು[...]ನ ರಜಾಕಾರರು [...]ರು, ಅದರಂತೆಯೆ [...]ನ್ನು [...]ನರುಚ್ಛಾ[...] [...]ವನಲ್ಲಿದ್ದ ಧರ್ಮಾಂ[...]ತಿ ನೆಲೆಯೂರಿದೆ. [...]ಕರಳುಬೇನೆಯಿಂದ [...]ಕೊಳೆಯುತಿದ್ದಾನೆ. [...]ದಲ್ಲಿ ಅವನ ಪಾತ್ರ [...]ಬಹುದು. ಸ್ವತಂತ್ರ [...]ನ್ನು ಕೆರಳಿಸಿ [...]ಂಹಾಸನವನ್ನು [...]ಲಾಲಸೆಯಿಂದ [...]ಸೈನ್ಯದ ಸಹಾಯ [...]ಪೀಡಿಸುತಿದ್ದನು.



[...]ರಜವಿ

[...] ಅಲ್ಪವಾದುದು. [...]ರುನ್ನು ಕೆರಳಿಸುವ [...]ಗಿತ್ತು. [...]ೂ ಅಧಿಕಾರ ಬೇಕಾ[...] ಸ್ವಭಾವ ಬೇರೆ [...]ತಕೀಯ ಯುಕ್ತಿಗಳ[...]ತ್ತು. ಆದರೆ ಇಬ್ಬರೂ [...]ಾಹಸ ಮಾಡಿದರು. [...]ನು ಪರರಿಗೆ ನಿರ್ದ[...] ಸಾವು ತನಗೂ ಬರ[...]ದ್ದರೆ ಎಡ್ರೂಜರು [...] ಪಡದೆ ಕೊನೆತನಕ [...]ರಂಗವಾಡಲು ಸಿದ್ಧ[...]

[...]ುಖ್ಯ ಪಾತ್ರವಾದ [...]ರಿಯವರ ಕೆಲಬಲ [...]ಸ್ಥಾನವನ್ನು ಪ್ರಜಾ[...] [...]ಧರಿಯವರ [...]ದ್ದು. ತೀಕ್ಷ್ಣವಾದ [...]ದ್ದರೆ ಅದರಲ್ಲಿ [...]ಸುವಂತೆ ಮಾಡುವ [...]ಅಧಿಕಾರಮದದಿಂದ [...]ವ ಭಯವಿದೆ. [...]ಾರಣದ ಜಂಜಡದ [...]ಲು ಬರಿ ಸಮರ[...] [...]ದು.

[...]ನೋಡಿರಿ)

ಗ್ರಹಗಳ ಮುನ್ನೋಟ

ಎಪ್ರಿಲ ೨೫ ರಿಂದ ಮೇ ೧ ರ ವರೆಗೆ

ಜ್ಯೋತಿಷಿ :—ಶ್ರೀ ಕೃಷ್ಣಶಾಸ್ತ್ರಿ ಭಿಡೆ, ಬೆಳಗಾಂವಿ

ಮೇಷ

ನಿಮ್ಮ ಮಾತೃಸ್ಥಾನದಲ್ಲಿರುವ ಸ್ತ್ರೀಯರಿಗಿಷ್ಟು ಅಸ್ವಸ್ಥವಾದೀತಲ್ಲದೆ ನಿಮಗಾಗಲಿ ಹೆಂಡತಿ ಮಕ್ಕಳಿಗಾಗಲಿ ಆರೋಗ್ಯವಾಗದು. ಅತ್ತರಲೊಬ್ಬನು ತುಂಬ ಉತ್ಕರ್ಷ ಹೊಂದುವನು. ಉದ್ಯೋಗದಲ್ಲಿ ಲಾಭ ಯಥೇಷ್ಟವಾಗಿದ್ದರೂ ನೀವು ನೌಕರಿಯವರಿದ್ದಲ್ಲಿ ಅಪ್ರಾಮಾಣಿಕತೆಯ ಅಪವಾದಕ್ಕೆ ಗುರಿಯಾಗುವಿರಿ. ಹಣದ ಬಲದಿಂದ ಚುನಾವಣೆಯಲ್ಲಿ ಆರಿಸಿ ಬರಬಹುದು! ವಾದ ಸ್ಪರ್ಧೆಗಳಲ್ಲಿ ಅಂಥ ಇಲ್ಲವೆ ಒಪ್ಪಂದವಾಗುವ ಸಂಭವ. ಸಂಗ್ರಹವನ್ನು ಹೆಚ್ಚಿಸಿಕೊಳ್ಳುವಿರಿ. ದೂರ ಪ್ರವಾಸಗಳು ಗಂಟುಬಿದ್ದರೂ ಸುಖವಾಗಿ ಅವು ಪೂರೈಸುತ್ತವೆ. ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಭರಣಿಗೆ ಹೆಚ್ಚು ಒಳ್ಳೆಯದು. ತಾ. ೨೮, ೨೯, ೩೦ ಅನುಕೂಲ.

ವೃಷಭ

ಗಂಡ ಹೆಂಡಿರಿಬ್ಬರಿಗೆ ದೈಹಿಕ ಕ್ಲೇಶ ಮತ್ತು ಒಳ್ಳೆಯ ಜನರ ಸಹವಾಸದಿಂದಲೂ ಮಕ್ಕಳ ಅಶಕ್ತ್ಯಗಳಿಂದಲೂ ಮಾನಸಿಕ ಕ್ಲೇಶ. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರಕೃತಿ ಪ್ರಕೋಪದಿಂದ ಸ್ಥಾವರಾಸ್ತಿಗೆ ಹಾನಿಯಾಗುವದಿದ್ದೀತು. ವಾದ ಸ್ಪರ್ಧೆಗಳಲ್ಲಿ ಸೋತು ಅದಕ್ಕಾಗಿ ಸಿಕ್ಕಾಬಟ್ಟೆ ಸುರಿಸಿದ ಹಣ ನಿರರ್ಥಕವಾಗಿ ಹೋದೀತು. ಪ್ರವಾಸ ಕಷ್ಟದಾಯಕ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಹಿತ. ರೋಹಿಣಿಗೆ ತೊಂದರೆ ಕಡಿಮೆ. ತಾ. ೨೫, ೨೬, ೧ ಅನುಕೂಲ.

ಮಿಥುನ

ಹೆಂಡತಿಯ ಜಡ್ಡು ಮತ್ತು ಮಕ್ಕಳ ದುಂಡುಗಾರಿಕೆಯಿಂದಾಗುವ ಅಸಂತೋಷವನ್ನು ಬಿಟ್ಟರೆ ಈ ವಾರ ನಿಮಗೆ ತುಂಬ ಹಿತವೇ. ಉದ್ಯೋಗದಲ್ಲಿ ತುಂಬ ಲಾಭ. ದಿನ ದಿನವೂ ಒಳ್ಳೆ ಸುದ್ದಿಗಳೂ ಧನ ಸಂಗ್ರಹವೂ ಆಗುವದರಿಂದ ಒಮ್ಮೊಮ್ಮೆ ದರ್ಪೋಕ್ತಿಗಳು ನಿಮ್ಮ ಬಾಯಿಂದ ಹೊರಬೀಳಬಹುದು. ವಾದ ಸ್ಪರ್ಧೆಗಳಲ್ಲಿಯೂ ಜಯವಾಹನ ಸುಖ. ಶುಭ ಸ್ವಪ್ನಗಳ ದೆಸೆಯಿಂದ ಪ್ರಸನ್ನರಾಗುವಿರಿ. ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಭೆಟ್ಟಿ ಸಾಧಕವಲ್ಲ. ಆರ್ದ್ರಗೆ ಅನುಕೂಲ ಹೆಚ್ಚು ತಾ. ೨೫, ೨೬, ೨೭, ೨೮ ಹಿತ.

ಕರ್ಕ

ನಿಮಗೂ ನಿಮ್ಮ ಹೆಂಡತಿಗೂ ದೈಹಿಕ ಕ್ಲೇಶ. ಮಕ್ಕಳ ವರ್ತನೆಯೂ ಸರಿಯಾಗಿರದು. ಆದರೆ ಉದ್ಯೋಗದಲ್ಲಿ ಪ್ರತಿಷ್ಠೆ, ಲಾಭಗಳು ಹೆಚ್ಚಿ ದೊಡ್ಡ ಮನುಷ್ಯರಿಂದ ಕೂಡ ಭಲೆ ಎನಿಸಿಕೊಳ್ಳುವಿರಿ. ಸ್ಥಾವರದಲ್ಲಿ ಅನುಕೂಲ ಮಾತುಗಳು ಘಟಿಸಿದರೂ ತೊಂದರೆಯೂ ಜಾಸ್ತಿ. ವಾದ ಸ್ಪರ್ಧೆಗಳಲ್ಲಿಯೂ ಜಯ ದೊರಕಬೇಕಾದರೆ ತುಂಬ ವೆಚ್ಚ, ತೊಂದರೆ. ಪ್ರವಾಸ, ಭೆಟ್ಟಿ ಅನುಕೂಲ. ಪತ್ರವ್ಯವಹಾರ ಅಷ್ಟಕ್ಕಷ್ಟೆ. ಪುಷ್ಯಕ್ಕೆ ದಿನಗಳು ಅನುಕೂಲವಿಲ್ಲ. ತಾ ೨೫, ೨೬, ೨೭, ೨೮ ಹಿತ.

ಸಿಂಹ

ನಿಮಗೆ ಮತ್ತು ಹೆಂಡತಿಗೆ ಪ್ರಕೃತಿಸೌಖ್ಯವಾಗಿದ್ದರೂ ಮಕ್ಕಳಿಗೆ ಕುಸು ಕ್ಲೇಶ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ, ಲಾಭ ಉತ್ತಮವಲ್ಲದೆ ಅಧಿಕಾರ ಮತ್ತು ಸ್ವಾಮಿತ್ವ ಹೆಚ್ಚುವವು. ಸಂಗ್ರಹದಲ್ಲಿ ಹೆಚ್ಚಳವಾದರೂ ತುಂಬ ಕಷ್ಟದಿಂದ. ವಾದ ಸ್ಪರ್ಧೆಗಳಲ್ಲಿ ಎದುರಾಳಿಗಳ ಕೈಮೇಲು. ಪ್ರವಾಸ ಹಿತ. ಭೆಟ್ಟಿಗಿಂತ ಪತ್ರವ್ಯವಹಾರವೇ ಶ್ರೇಯಸ್ಕರ. ಪೂರ್ವಕ್ಕೆ ತೊಂದರೆ ಕಡಿಮೆ. ತಾ. ೨೮, ೨೯, ೩೦, ೧ ಒಳಿತು.

ಕನ್ಯಾ

ನಿಮ್ಮ ಪ್ರಕೃತಿ ಚನ್ನಾಗಿದ್ದರೂ ಹೆಂಡತಿ ಮಕ್ಕಳಿಗೆ ಅಸೌಖ್ಯ. ಮನೆಯ ಜನರ ಅಸಂತೋಷಕ್ಕಾಗಿ ನಿಮ್ಮ ಮನಸಿಗೊಪ್ಪದ ಕೆಲಸಗಳಿಗೆ ಒಪ್ಪಿಗೆ ಕೊಡಬೇಕಾದ ಪ್ರಸಂಗ. ಉದ್ಯೋಗದಲ್ಲಿ ಪ್ರತಿಷ್ಠೆಗೆ ಕೊರತೆಯಾದರೂ ಲಾಭ ಉತ್ತಮ. ವಾದ ಸ್ಪರ್ಧೆಗಳಲ್ಲಿ ಮಧ್ಯಮ. ಧಾರ್ಮಿಕ ಪ್ರೇಮದಿಂದ ದಾನಧ

ಸನ್ಯಾಸಿಗಳನ್ನು ಸೇವಿಸಿ ಹಗರಣಕ್ಕೊಳಗಾಗುವಿರಿ. ಖರ್ಚೇನೋ ಬಹಳ. ಆದರೆ ಉದ್ದೇಶ ಸಿದ್ಧಿಸುವದು ಮಾತ್ರ ಸಂಶಯ. ಪ್ರವಾಸಾದಿ ಕಾರ್ಯಗಳು ತುಂಬ ಕಷ್ಟದಾಯಕ. ಹಸ್ತಾ ನಕ್ಷತ್ರದವರಿಗೆ ಮಾತ್ರ ವಿಶೇಷ ಅನಿಷ್ಟವಿಲ್ಲ. ತಾ. ೨೫, ೨೬, ೩೦ ಅನುಕೂಲ.

ತುಲಾ

ಹೆಂಡತಿಯ ಮತ್ತು ವರಿಷ್ಠರ ಪ್ರಕೃತಿ ಕೆಡಬಹುದು. ಉದ್ಯೋಗದಲ್ಲಿ ಲಾಭ ಚನ್ನಾಗಿದ್ದರೂ ಪ್ರತಿಷ್ಠೆಗೆ ಕಲಂಕ ಹತ್ತಬಹುದು. ಸ್ಥಾವರದಲ್ಲಿ ಅಷ್ಟಿಷ್ಟು ಹಾನಿ. ಮಿತ್ರಸುಖ ಚನ್ನಾಗಿದ್ದರೂ ಶತ್ರುಗಳ ಕಾಟವೂ ಸಹನಾತೀತವಾಗುವದು. ವಾದ ಸ್ಪರ್ಧೆಗಳಲ್ಲಿ ಸಿಕ್ಕಂತೆ ತೋರುವ ಗೆಲವೆಲ್ಲ ಟೊಳ್ಳು. ಭೆಟ್ಟಿಗಿಂತ ಪತ್ರವ್ಯವಹಾರ ಒಳಿತು. ಪ್ರವಾಸವೂ ಸುಖದಾಯಿ. ಸ್ವಾತಿಗೆ ಅಷ್ಟು ತೊಂದರೆಯಿಲ್ಲ. ತಾ. ೨೭, ೨೮, ೨೯ ಅನುಕೂಲ.

ವೃಶ್ಚಿಕ

ನೀವು ಹೆಂಡತಿಯ ಪ್ರಕೃತಿಯ ಬಗ್ಗೆ ತುಂಬ ಜಾಗರೂಕರಾಗಿರಬೇಕು. ಹೆಂಡತಿಯ ಅಸ್ವಸ್ಥದ ಕಾರಣದಿಂದಲೋ ಏನೋ ನಿಮ್ಮ ಮನಸು ಪರಸ್ತ್ರೀಯ ಕಡೆ ಹರಿಯಬಹುದಾದ್ದರಿಂದ ಆ ವಿಷಯದಲ್ಲಿ ಸಂಯಮದಿಂದಿರಿ. ಉದ್ಯೋಗದಲ್ಲಿ ಪ್ರತಿಷ್ಠೆಯಷ್ಟೇ ಇದ್ದರೂ ಲಾಭ ಮಾತ್ರ ತೀರ ಕಡಿಮೆ. ಮಿತ್ರರಲ್ಲಿ ವಿರೋಧ. ವಾದ ಮತ್ತು ಸ್ಪರ್ಧೆಯಲ್ಲಿ ಇಬ್ಬರಿಗೂ ಹಾನಿಯೆ. ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಅನುರಾಧೆಗೆ ಸ್ವಲ್ಪ ಹೆಚ್ಚು ಸುಖ ತಾ. ೨೫, ೨೬, ೩೦ ಅನುಕೂಲ.

ಧನು

ನಿಮ್ಮಿಬ್ಬರ ಪ್ರಕೃತಿ ಉತ್ತಮ. ಆದರೆ ಮಕ್ಕಳಿಗೆ ಸ್ವಲ್ಪ ತ್ರಾಸವಾಗಬಹುದು. ಉಳಿದ ವಿಚಾರಗಳಲ್ಲಿ ತುಂಬ ಅನುಕೂಲ. ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರತಿಷ್ಠೆಗೆ ಹಿಂದೇಟು ಬಿದ್ದರೂ ಲಾಭಕ್ಕೆ ಯಾವ ಕೊರತೆಯೂ ಆಗದು. ವಾದ ಸ್ಪರ್ಧೆಗಳಲ್ಲಿ ತುಂಬ ಯಶ. ಆಕಸ್ಮಿಕ ಪ್ರವಾಸದಿಂದ ತುಂಬ ಕಷ್ಟವಾಗುವದು. ಭೆಟ್ಟಿಗಿಂತ ಪತ್ರವ್ಯವಹಾರವೇ ಲೇಸು. ಪೂರ್ವಾಷಾಢಕ್ಕೆ ಅಷ್ಟೇನೂ ತೊಂದರೆಯಿಲ್ಲ. ತಾ. ೨೭, ೨೮, ೨೯ ಹಿತ.

ಮಕರ

ನಿಮ್ಮ ಪ್ರಕೃತಿ ಅಷ್ಟಕ್ಕಷ್ಟೆ ಆದರೂ ಹೆಂಡತಿಯದು ಚನ್ನಾಗಿರುತ್ತದೆ. ಮಕ್ಕಳು ಅಪ್ರಿಯ ವರ್ತನೆ ಮಾಡುವರು. ಉದ್ಯೋಗದಲ್ಲಿ ಲಾಭ ಮಧ್ಯಮ, ಪ್ರತಿಷ್ಠೆ ಉತ್ತಮ. ವಾದ ಸ್ಪರ್ಧೆಗಳಲ್ಲಿ ನಿಮಗೇ ಗೆಲವು. ಪ್ರವಾಸ ಒಳಿತಲ್ಲ. ಪತ್ರ ವ್ಯವಹಾರ ಭೆಟ್ಟಿಗಿಂತ ಶ್ರೇಯಸ್ಕರ. ಶ್ರವಣಕ್ಕೆ ತೊಂದರೆ ಕಡಿಮೆ. ತಾ. ೨೫, ೨೬, ೩೦, ೧ ಒಳಿತು.

ಕುಂಭ

ಪ್ರಕೃತಿ ಉತ್ತಮ. ಹೆಂಡತಿಯ ವಿರೋಧದಿಂದ ಮನಸು ವ್ಯಗ್ರವಾದರೂ ಮಕ್ಕಳ ನಳಿಗೆಯಿಂದ ಪ್ರಸನ್ನವಾಗುವದು. ಉದ್ಯೋಗದಲ್ಲಿ ಪ್ರತಿಷ್ಠೆ ಚನ್ನಾಗಿದ್ದರೂ ದ್ರವ್ಯಲಾಭ ಮಧ್ಯಮ. ವಾದ ಸ್ಪರ್ಧೆಗಳಲ್ಲಿ ತುಂಬ ಯಶ. ಪ್ರವಾಸಾದಿ ಕಾರ್ಯ ನಿರ್ವಿಘ್ನ. ಶತತಾರಿಕೆಗೆ ಅನಿಷ್ಟ ಫಲಬಾಧೆ ಕಡಿಮೆ. ತಾ. ೨೫, ೨೬, ೨೭, ೨೮ ಅನುಕೂಲ.

ಮೀನ

ನಿಮ್ಮ ಪ್ರಕೃತಿ ನೆಟ್ಟಗೆ. ಹೆಂಡತಿಯದು ಕೆಡಬಹುದು. ಉಳಿದ ಪ್ರಾಪಂಚಿಕ ಸುಖ ಒಮ್ಮೆ ಹಾಲು ಒಮ್ಮೆ ನೀರು ಉದ್ಯೋಗದಲ್ಲಿ ಪ್ರತಿಷ್ಠೆ ಲಾಭಗಳು ತುಂಬ ಆದರೆ ವೆಚ್ಚವೂ ಮಿತಿಮೀರಿ. ವಾದ ಸ್ಪರ್ಧೆಗಳಲ್ಲಿ ಯಶ. ಮಕ್ಕಳಲ್ಲಿ ಒಬ್ಬನ ಉತ್ಕರ್ಷದ ಲಕ್ಷಣ. ಪ್ರವಾಸ ಅಷ್ಟು ಸುಖಕರವಾಗದು. ಭೆಟ್ಟಿ ಪತ್ರವ್ಯವಹಾರ ಎರಡೂ ಸಫಲ. ರೇವತಿಗೆ ಅನಿಷ್ಟ ಕಡಿಮೆ. ತಾ. ೨೫, ೨೬, ೩೦, ೧ ಅನುಕೂಲ.

ಹೈದರಾಬಾದ— ಪುರಾತನ ಮತ್ತು ನೂತನ

(೯ ನೇ ಪುಟದಿಂದ ಮುಂಬರಿದದ್ದು)

ಅವರ ಹಿಂದೆ ಸಂಸ್ಥಾನ ಮಂತ್ರಿಶಾಖೆಯು ಪರ್ಗಸ್ಸಿದೆಯೋನೋ ನಿಜ. ಆದರೆ ಕರ್ತವ್ಯದಲ್ಲಿ ಅವರಿಗೆ ದೊರೆತ ಯಶಸ್ಸೇ ಅವರ ಸಾಮರ್ಥ್ಯಕ್ಕೆ ನಿದರ್ಶನವಾಗಿದೆ. ಅವರಿಗೆ ಸಹಕಾರ್ಯಕರ್ತರ ಪೂರ್ಣ ಸಹಕಾರ ವಿಶ್ವಾಸಗಳು ದೊರೆತಿವೆ. ತಾವು ಸೈನಿಕರೆಂದು ಅವರು ಹೇಳಿಕೊಳ್ಳುತ್ತಿದ್ದರೂ ಅವರಲ್ಲಿರುವ ವಿನಯವೂ ಅಸಾಧಾರಣವೆ. ಎಲ್ಲರೊಡನೆಯೂ ಸೌಜನ್ಯ, ಆದರೆ ಯಾರೊಡನೆಯೂ ಆತ್ಮೀಯತೆಯಿಲ್ಲದ ಅವರು ಅಂತರಂಗದಲ್ಲಿ ಸ್ಥಿರ, ನ್ಯಾಯನಿಷ್ಠುರರಾಗಿ ನಡೆದುಕೊಳ್ಳುತ್ತಾರೆ. ಸುಂದರಿಯರಾದ ರಾಜಪುತ್ರಿಯರೇ ಇರಲಿ, ಎಲ್ ಎಡ್ರೂಸರೇ ಇರಲಿ, ಸಾಮಾನ್ಯ ಅಧಿಕಾರಿಯೇ ಇರಲಿ, ಯಾರನ್ನೂ ತೀರ ಸಲುಗೆ ಬೆಳೆಸಗೊಡುವಂತಿಲ್ಲ. ತುಂಬ ಜಟಿಲ ಮತ್ತು ಕಠಿನ ಪರಿಸ್ಥಿತಿಯಲ್ಲಿಯೂ ಅವರು ಶೀಘ್ರ ನಿರ್ಣಯ ಸಾಮರ್ಥ್ಯವನ್ನು ತೋರಿಸಿದ್ದಾರೆ. ಆದರೂ ತಮ್ಮ ನಿರ್ಣಯ ನಿರ್ದೋಷವೆಂದು ಭ್ರಮಿಸುವಷ್ಟು ಒರಟರು ಅವರಲ್ಲ. ಹೈದರಾಬಾದಿನಲ್ಲಿ ಒಮ್ಮೊಮ್ಮೆ ದಿನಕ್ಕೆ ಹನ್ನೆರಡು ತಾಸು ದುಡಿತ ಬೀಳುತ್ತದೆ ಅವರಿಗೆ. ಅದನ್ನು ಅವರು ಆನಂದದಿಂದಲೇ ನೆರವೇರಿಸುತ್ತಾರೆ. ಆದರೆ ಅವರ ಕೆಲಸ ಪೂರೈಸಿ, ಬೇರೆ ಕಡೆ ಹೋಗೆಂದು ಸರಕಾರದ ಅಜ್ಞೆ ಬಂದರೆ ಅದನ್ನೂ ಆನಂದದಿಂದ ಸ್ವೀಕರಿಸುವವರೆ.

ಜನರು

ಇದೆಲ್ಲದರ ಹಿಂದಿದೆ ಜನತೆಯೆಂಬ ನಿರಾಕಾರ ಹಿನ್ನೆಲೆ. ದಾಸ್ಯದಲ್ಲಿ ಬಲುಗಾಲ ನವೆದ ಈ ಜನರಿಗೆ, ತಲೆಯೆತ್ತಿ ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಕೈಗೆ ತೆಗೆದುಕೊಳ್ಳುವ ಸಾಹಸ, ತಿಳಿವಳಿಕೆಗಳು ಇನ್ನೂ ಬಂದಿಲ್ಲ. ಅವರ ಬೆನ್ನು ಇನ್ನೂ ನೆಟ್ಟಗಾಗಿಲ್ಲ. ಅವರು ಉಳುವ ಭೂಮಿಯಂತೆ ಅವರೂ ಒಂದು ಅಚೇತನ ಪದಾರ್ಥವೇ ಆಗಿದ್ದಾರೆ. ಆದರೂ ಅವರಲ್ಲಿ ಕುಸುಕುಸುವೆ ನವೋದಿತ ಸ್ವಾತಂತ್ರ್ಯದ ದೀಪ್ತಿ ಜಾಗೃತವಾಗುತಿದೆ. ಅಲ್ಪಸಂಖ್ಯರು ಇನ್ನು ಬಹುಸಂಖ್ಯರನ್ನು ತುಳಿಯಲಾರರೆಂಬ ಭರವಸೆ ಮೂಡಿದೆ. ಇದರ ಫಲವೂ ಕಾಣಸದೆ ಇಲ್ಲ. ಮುಸ್ಲಿಮರಿಗೆ ತಾವಿನ್ನು ಜನ್ಮಸಿದ್ಧ ಅರಸರಲ್ಲವೆಂಬ ಸತ್ಯವನ್ನು ಮನಗಾಣುವದು ತೀರ ಕಠಿನವಾಗುತಿದೆ.

ಹಳ್ಳಿಗಾಡಿನ ಮುಸ್ಲಿಮರು ಇದನ್ನು ಪಟ್ಟಣಿಗರಿಗಿಂತ ಸುಲಭವಾಗಿ ಮನಗಾಣುತಿದ್ದಾರೆ. ಪಟ್ಟಣಿಗರು ಇನ್ನೂ ನೂತನ ಪ್ರಕಾಶದಿಂದ ಕಣ್ಣು ಕುಕ್ಕಿದವರಾಗಿಯೆ ಇದ್ದಾರೆ. ಸೈನಿಕ ಸರಕಾರ ಅಧಿಕಾರಕ್ಕೆ ಬಂದಾಗ ಇನ್ನೇನು ಇತಿಶ್ರೀಯಾಯಿತೆಂದೇ ಅವರು ಬಗೆದಿದ್ದರು. ಆದರೆ ವ್ಯವಸ್ಥೆ ಕಾಯದೆ ಸರಿಯಾಗಿಯೆ ಇದ್ದು, ತಮ್ಮ ಜೀವನ ಅಷ್ಟೇನೂ ಹದಗೆಡದ್ದನ್ನು ಅವರು ಕಂಡುಕೊಂಡರು. ಈಗ ಅವರು ಪ್ರಜಾತಂತ್ರದ ಆಗಮನ, ಸಂಸ್ಥಾನ ಕಾಂಗ್ರೆಸ್ಸಿನ ಉದಯಗಳನ್ನು ನೆನೆದು ನಡುಗುತ್ತಿದ್ದಾರೆ. ಪ್ರಜಾತಂತ್ರ ಬಂದರೆ ಹಲವರ ಗೆಯ್ತದಿಂದ ಕೆಲವರು ಸುಖಪಡುವ ಹಳೆಯ ರೂಢಿ ಮಣ್ಣುಪಾಲಾಗಿ ತಮ್ಮ ಜೀವನ ವ್ಯವಸ್ಥೆ ಬುಡಮೇಲಾದೀತೆಂದು ಅವರಿಗೆ ಹೆದರಿಕೆ. ಅಂತೂ ದೊಣ್ಣೆ ಕತ್ತಿಗಳ ರಾಜ್ಯ ಹೋಗಿಬಿಟ್ಟದೆ. ಬೆಪ್ಪು ಒಡೆದಿದೆ.

ಎರಡು ಕಥಾ ಸಂಗ್ರಹಗಳು

ಉಬ್ಬರವಿಳಿತ: ಲೇಖಕರು: ಶ್ರೀ 'ನಿಶಾಕಾಂತ'; ಛಾಯಾ ಪ್ರಕಟನಾಲಯ ಬೆಂಗಳೂರು; ಮಾರಾಟದ ಹಕ್ಕುದಾರರು: ಸ್ಟ್ಯಾಂಡರ್ಡ್ ಬುಕ್ ಡಿಪೋ, ಅವೆನ್ಯೂ ರೋಡ್, ಬೆಂಗಳೂರು ನಗರ. ೭೨ ಪುಟ, ಆಣೆ ೧೨.

ಹಕ್ಕಿನ ಹೋರಾಟ: ಲೇಖಕರು: ಶ್ರೀ ಪ. ಸು. ಭಟ್ಟ. ಶರಾವತಿ ಪ್ರಕಟನೆ ಮಂದಿರ, ಶಿರಸಿ. ೬೪ ಪುಟ್ಟ ರೂ. ೧.

ಸಣ್ಣ ಕತೆಗಳ ಕ್ಷೇತ್ರದಲ್ಲಿ ದಿನವೂ ಹೊಸ ಹೊಸ ಲೇಖಕರ ಪ್ರವೇಶವಾಗುತಿದೆ. ಅವರಿಗೆ ಬಿಡಿಬಿಡಿಯಾಗಿಯೂ ಸಂಗ್ರಹವಾಗಿಯೂ ತಮ್ಮ ಕಥೆಗಳನ್ನು ಬೆಳಕಿಗೆ ತರಲು ಇಂದು ಇರುವ ಅನುಕೂಲ, ಹತ್ತು ವರ್ಷ ಹಿಂದೆ ಅವರಂಥವರಿಗಿದ್ದದ್ದಕ್ಕಿಂತ ಹೆಚ್ಚಾಗಿಯೂ ಇದೆ. ಆದರೆ ಇದರಿಂದ ಹಿತವಾದಷ್ಟೇ ಅಹಿತವಾಗಿದೆಯೆಂದು ತೋರುತ್ತದೆ. ಇನ್ನೂ ಪರಿಪಕ್ವವಾಗದಿರುವ ತಮ್ಮ ಕಲೆಯನ್ನು ಅವರು ಹಸಿಬಿಸಿಯಾಗಿ ಬೆಳಕಿಗೆ ತರುತ್ತಿದ್ದಾರೆ. ಕರ್ನಾಟಕದ ಪ್ರಕಾಶಕರಲ್ಲಿ ತೊಂಬತ್ತು ಪಾಲು ಜನರು ಸ್ವತಃ ಸಾಹಿತ್ಯವನ್ನು ತೂಗಲು ತಾವೂ ಅಸಮರ್ಥರು, ಯೋಗ್ಯ ಕಲಾವಿಮರ್ಶಕರನ್ನು ಆ ಕೆಲಸದಲ್ಲಿ ನಿಯೋಜಿಸಲೂ ಒಲ್ಲದವರಾಗಿದ್ದಾರೆ. ಹೀಗಾಗಿ ಗ್ರಂಥಗಳು ಬೆಳಕಿಗೆ ಬರುವದಕ್ಕೊಂದು ಹಿಡಿತವೂ ಇಲ್ಲ, ಅವುಗಳ ಯೋಗ್ಯತೆಗೊಂದು ಮಾನದಂಡವೂ ಇಲ್ಲವೆಂದಾಗಿದೆ. ಸಾಹಿತ್ಯದ ಎಲ್ಲ ಅಂಗಗಳಿಗೂ ಇದು ಅನ್ವಯಿಸುವದಾದರೂ ಕನ್ನಡದ ಸಣ್ಣ ಕತೆಗಳ ಶ್ರೇಷ್ಠತೆಯ ಪರಂಪರೆ ಇತರ ಸಾಹಿತ್ಯಾಂಗಗಳಿಗಿಂತ ಉತ್ತಮವಾಗಿರುವದರಿಂದ ನಾಯಿಕೊಡೆಗಳ ಬೆಳವಣಿಗೆ ಆ ರಂಗದಲ್ಲಿ ಹೆಚ್ಚುತ್ತಿರುವದು ವಿಶೇಷವಾಗಿ ವಿಷಾದಕರವಾಗಿದೆ. ಮೇಲಾಗಿ ಭಾಷಾಶುದ್ಧಿಯೇ ಮೊದಲಾದ ಪ್ರಾಥಮಿಕ ವಿಷಯಗಳಲ್ಲಿ ಕೂಡ ತುಂಬ ವೈರಾಗ್ಯವನ್ನೇ ತಳೆದ ಕತೆಗಳೂ ಹುಲುಸಾಗಿ ಬೆಳದು ಜನರ ರುಚಿಯನ್ನೇ ಹಾಳುಗೆಡಹುತಿವೆ.

"ಉಬ್ಬರವಿಳಿತ"ದ ಆರು ಕತೆಗಳ ಲೇಖಕರಾದ ಶ್ರೀ ನಿಶಾಕಾಂತರು ತಮ್ಮ ಕತೆಗಳನ್ನು ಅನ್ಯ ಪತ್ರಿಕೆಗಳಲ್ಲಿ ಪ್ರಕಟವಾದ ನಂತರ, ಸ್ವಪ್ಪ ತಿದ್ದಿ ತೀಡಿ ಇಲ್ಲವೆ ಅನ್ಯರಿಂದ ಸಂಸ್ಕರಣ ಮಾಡಿಸಿ ಪ್ರಕಟಿಸಿದ್ದರೆ ಅವರ ಕೀರ್ತಿಗೇ ಎಷ್ಟೋ ಹಿತವಿತ್ತು. ಮೊದಲನೆಯದಾಗಿ ಅವರು ಬರೆಯುತಿರುವದು ಬಳಕೆ ಮಾತಿನಲ್ಲೋ ಗ್ರಾಂಥಿಕ ಭಾಷೆಯಲ್ಲೋ ಎಂದು ತಿಳಿಯದಂತೆ, ಅದೂ ಅರ್ಥ ಇದೂ ಅರ್ಥ ಸೇರಿದ ಬೆರಕೆ ಮಾತಿನಲ್ಲಿ ಬರೆದು ಹದಗೆಡಿಸಿದ್ದಾರೆ. "ಕೈಲಾಸಂ" ಅವರ ಉಪದೇಶ ವಾಕ್ಯವನ್ನು ಪಡೆದ ಇವರಿಗೆ ಆ ಕಲಾಸಮ್ರಾಟನ ಶೈಲಿಯ ಮೇಲೆಯೂ ಮೋಹವಿದ್ದಂತಿದೆ. ಆದರೆ ಗಂಭೀರ ವಿಚಾರಗಳನ್ನು—ಅವು ಕಥನಗಳೇ ಇದ್ದರೂ— ಬಳಕೆ ಮಾತಿನಲ್ಲಿ ಬರೆಯುವದೆಂದರೆ "ತಿಂಗಳಾದರೂ" ಎಂಬುದನ್ನು "ತಿಂಗ್ಳಾದ್ರೂ" ಎಂದುಬಿಡುವಷ್ಟು ಸುಲಭವಾಗಿಲ್ಲೆಂದು ಅವರು ತಿಳಿದುಕೊಳ್ಳಬೇಕಿತ್ತು. ಅವರ ಈ ಸಂಗ್ರಹದ ಕತೆಗಳಲ್ಲಿ ಆರೇ ಪುಟಗಳನ್ನು ಆಕ್ರಮಿಸಿದ್ದರೂ "ಉಬ್ಬರವಿಳಿತ" ಚೆನ್ನಾಗಿದೆಯೆನ್ನಲು ಅಡ್ಡಿಯಿಲ್ಲ. "ನೆನಹು" ನಲ್ಲಿ ತಾಯಿಯ ಹೃದಯವನ್ನು ತೆರೆದಿಡಲು ಅವರು ಮಾಡಿದ ಪ್ರಯತ್ನ ಅದರ ಅನವಶ್ಯಕ ಸಂವಿಧಾನಗಳಿಂದ ಹದಗೆಟ್ಟಿದೆ. "ಕಣ್ಣೀರು" ನಲ್ಲಿ ವಿಧಾನಗಳು ವಿಧೇಯಕ್ಕೆ ಪೋಷಕವಾಗಿಲ್ಲ. ಉಳಿದವು ಸಾಮಾನ್ಯವಾಗಿವೆ.

ಶ್ರೀ ಪ. ಸು. ಭಟ್ಟರ "ಹಕ್ಕಿನ ಹೋರಾಟ" ಉತ್ತರ ಕನ್ನಡದ ಜನಜೀವನವನ್ನು ಚಿತ್ರಿಸಹೊರಟ ೬ ಕತೆಗಳನ್ನೊಳಗೊಂಡಿದ್ದರೂ ನಿಜವಾದ ಮಲೆನಾಡಿನ ಜೀವನಕ್ಕೇ ವಿಶಿಷ್ಟವಾದವು ಮೊದಲಿನ ಎರಡು ಮಾತ್ರ ಎನ್ನಬೇಕು. "ಹೋಳಿಗೋಳಿ" ಯಂತೂ ವಿಶಿಷ್ಟವೂ ಸಾಕಷ್ಟು ಕುತೂಹಲಜನಕವೂ ಆಗಿದೆ. "ಸ್ವಾಹಿ" ತೀರ ಸಾಮಾನ್ಯವಾಗಿದ್ದು ಇಲ್ಲಿ ಸೇರದಿದ್ದರೆ ಒಳಿತಾಗುತ್ತಿತ್ತು. ಉಳಿದವುಗಳನ್ನು ಒಮ್ಮೆ ಓದಲು ಅಡ್ಡಿಯಿಲ್ಲ. ಶ್ರೀ ಭಟ್ಟರ ಲೆಕ್ಕಣಿಕೆಯಲ್ಲಿ ಇನ್ನೂ ಕಸುವು ಸಾಲದು. ಅವರ ಅನುಭವವೂ ಪರಿಪಕ್ವವಾಗಿಲ್ಲ. ಆದರೆ ಅವರು ಅರಿತದ್ದನ್ನು ಸರಳವಾಗಿ ಹೇಳುತ್ತಾರೆ. ಅವರ ಮುಂದಿನ ಕತೆಗಳು ಹೆಚ್ಚು ಮನೋರಂಜಕವಾದಾವೆಂದು ಬಗೆಯೋಣ.

ಶ್ರೀ ಮಹಾದೇವಿಯಕ್ಕ:

ಬರೆದವರು: ಮಾ. ನಂ. ನಂಜಪ್ಪನವರು, ಪ್ರಕಾಶಕರು, ವೀರಶೈವ ಸಾಹಿತ್ಯ ಭಾಂಡಾರ, "ಕಲ್ಯಾಣ ಭವನ", ೩೯೯, ಚಿಕ್ಕಪೇಟೆ, ಬೆಂಗಳೂರು ೨. ಪುಟ ೧೨೦, ಬೆಲೆ ೧ ರೂ. ೮ ಆಣೆ.

ಮಹಾದೇವಿಯಕ್ಕನವರ ಚರಿತ್ರೆಯನ್ನೂ ಅವರು ಹೇಳಿದ ವಚನಗಳನ್ನೂ ಈ ಪುಸ್ತಕದಲ್ಲಿ ನಂಜಪ್ಪನವರು ವಿವರಿಸಿದ್ದಾರೆ. ಗ್ರಂಥವು ಕನ್ನಡಿಗರಿಗೆ ಶ್ರೀ ಮಹಾದೇವಿಯಕ್ಕನವರ ಚರಿತ್ರೆಯನ್ನು ತಿಳಿಯಲು ಸಹಾಯಕವಾಗಿದೆ. ಅಕ್ಕಮಹಾದೇವಿಯವರ ವ್ಯಕ್ತಿತ್ವ, ಅವರ ವಚನಗಳು, ಶಿವನ ಮೇಲಿದ್ದ ಅವರ ಪ್ರೀತಿ, ಯಾರಿಗೂ ಹೆದರದೆ ತಮಗೆ ನ್ಯಾಯವಾಗಿ ತೋರಿದುದನ್ನು ಮಾಡುವ ಅವರ ಧೈರ್ಯ, ಸಾಹಿತ್ಯದಲ್ಲಿರುವ ಪ್ರತಿಭೆ ಇವೇ ಮೊದಲಾದ ಗುಣಗಳಿಗೆ ಯಾರಾದರೂ ತಲೆಬಾಗುವಂತಿದೆ. ಅನುಭಾವಿಗಳ ಸದ್ಗೋಷ್ಠಿಯಲ್ಲಿ ಶ್ರೀ ಪ್ರಭುದೇವರು ಮತ್ತು ಬಸವಣ್ಣನವರು ಕೇಳಿದ ಪ್ರಶ್ನೆಗಳಿಗೆ ಅಕ್ಕಮಹಾದೇವಿಯವರು ಕೊಟ್ಟ ಉತ್ತರ ಅವರ ಧೈರ್ಯ ಸ್ಥೈರ್ಯಗಳನ್ನು ತೋರಿಸುತ್ತದೆ.

"ದೇವನೊಲಿಯದೆ ನೀನೊಲಿದೆನೆಂಬುದು
ಅದಾವುದಕ್ಕೆ? ಭಾವ ಶುದ್ಧವಾದಲ್ಲಿ
ಸೀರೆಯನಳಿದು ಕೂದಲ ಮರೆ
ಮಾಡಲೇತಕ್ಕೆ?
ಎಂದು ಅಂತರಂಗದ ನಾಚಿಕೆ ಬಾಹ್ಯದಲ್ಲಿ
ತೋರಿತ್ತು, ಅದು ಗುಹೇಶ್ವರ ಲಿಂಗಕ್ಕೆ
ಒಲವರವಲ್ಲ"

ಎಂದು ಪ್ರಭುದೇವರು ಕೇಳಿದ ಒಂದು ಪ್ರಶ್ನೆಗೆ ಅಕ್ಕನವರು ಸ್ಥಿರಚಿತ್ತದಿಂದ ಕೊಟ್ಟ ಉತ್ತರ ಹೀಗಿದೆ—

"ಫಲ ಪಕ್ವವಾದಲ್ಲದೆ ಹೊರಗಣ ಸಿಪ್ಪೆ
ಒಪ್ಪಗೆಡದು.
ಕಾಮನ ಮುದ್ರೆಯ ಕಂಡು ನಿಮಗೆ
ನೋವಾದೀತೆಂದು
ಆ ಭಾವದಿಂದೆ ಮುಚ್ಚಿದೆ, ಇದಕೆ ನೋವೇಕೆ?
ಕಾಡದಿರಣ್ಣಾ ಚೆನ್ನಮಲ್ಲಿಕಾರ್ಜುನ ದೇವರ
ದೇವನ ಒಳಗಾದವಳಾ"

ಅಕ್ಕನವರು ಪ್ರಭುದೇವರ ಎಲ್ಲ ಪ್ರಶ್ನೆಗಳಿಗೂ ಹೀಗೇ ಸರಳತನದಿಂದ ಉತ್ತರಿಸಿದ್ದಾರೆ. ಒಂದೆಡೆ ಅವರು ನಿಷ್ಕಾಮಿ, ನಿರಾಕಾರಿ ಎಂದು ಶಿವನನ್ನು ವರ್ಣಿಸಿದ್ದಾರೆ. ಇನ್ನೊಂದೆಡೆ ಮೊದಲಿನ ಮಾತಿನ ವಿರುದ್ಧವಾಗಿ "ಅತಿಕಾಮಿ ಚೆನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ ಕೂಡಿ" ಎಂದಿದ್ದಾರೆ. ಇಂತಹ ಒಂದೆರಡು ವ್ಯಾಹತಿಗಳು ಅಲ್ಲಲ್ಲಿ ಕಾಣಲು ಸಿಗುತ್ತವೆ. ಇವುಗಳ ಆಭಾಸಿಕ ವಿಪರ್ಯಾಸವನ್ನು ಶ್ರೀ ನಂಜಪ್ಪನವರು ವಿವರಿಸಬೇಕಾಗಿತ್ತು.

"ಹೆಣ್ಣು ವಿದ್ಯಾವತಿಯಾಗಿರಬೇಕು. ಸಕಲ ಕಲಾಕೋವಿದೆಯಾಗಿ ತ್ಯಾಗಮಯಿಯಾಗಿರಬೇಕು. ಮೌಢ್ಯವನ್ನು ತ್ಯಜಿಸಬೇಕು. ದಾರಿ ತಪ್ಪಿ ಪಾಶವೀ ವೃತ್ತಿಗಿಳಿಯುವ ಮಾನವರನ್ನು ಸನ್ಮಾರ್ಗಕ್ಕೆ ತಿರುಗಿಸಲು ಪ್ರಯತ್ನಿಸಬೇಕು. ಆ ಪ್ರಯತ್ನದಲ್ಲಿ ಜಯಶೀಲಳಾಗದಿದ್ದರೆ ಯಾರಿಗೂ ಕೇಡನ್ನು ಬಗೆಯದೆ ತಾನಾದರೂ ದಾರಿತಪ್ಪದೆ ಸ್ವಂತ ಆತ್ಮೋದ್ಧಾರವನ್ನಾದರೂ ಮಾಡಿಕೊಂಡು ತನ್ಮೂಲಕ ಲೋಕಕಲ್ಯಾಣ ಸಾಧಿಸಬೇಕು" ಎಂಬ ಅಕ್ಕನವರ ದಿವ್ಯ ಆದರ್ಶನವನ್ನು ಎಲ್ಲ ಮಹಿಳೆಯರು ಪಾಲಿಸಬೇಕು. ಆಗ ಸ್ತ್ರೀಯರಿಗೆ ಸ್ವಾತಂತ್ರ್ಯ ಬೇಕು ಹಾಗೆ ಹೀಗೆ ಎಂದು ಕೇಳುವ ಪ್ರಶ್ನೆಗಳೇ ಬರಲಾರವು. ಅದು ತಾನಾಗಿಯೇ ಸಿದ್ಧಿಸುವುದು. ಸಮಾಜದಲ್ಲಿ ಆಗ ನಡೆಯುತ್ತಿದ್ದ ಡಂಭಾಚಾರಗಳನ್ನು ಖಂಡಿಸಿ ಮಹಾದೇವಿಯಕ್ಕ ಹೇಳಿದ ಕೆಲವು ವಚನಗಳನ್ನು ಹದಿನೇಳನೆಯ ಪ್ರಕರಣದಲ್ಲಿ ಕೊಟ್ಟಿದೆ. ಪುಸ್ತಕವು ಎಲ್ಲರೂ ಓದುವಂತಿದೆ. ಎಲ್ಲೆಲ್ಲೂ ಮೂಢತ್ವ ತುಂಬಿರುವ ಈ ಕಾಲದಲ್ಲಿ ಈ ಪುಸ್ತಕವು ಸನ್ಮಾರ್ಗದಲ್ಲಿ ಹೋಗಬೇಕೆಂಬ ಮಹಿಳೆಯರಿಗೆ [illegible]ದರೂ ಮಾರ್ಗದರ್ಶಕವಾಗಬಹುದು.

ನಿಮಿಷಾವಲೋಕನ

ವೈದ್ಯ: ಶ್ರೀ ಹಾವಳಗಿ ಮಲ್ಲಪ್ಪನವರ "ಶಾಸ್ತ್ರ ಶುರಂಧರ ಸ್ಮರಣ" (ಪ್ರಕಾಶಕರು [illegible] ಮಲ್ಲಪ್ಪ ಹಾವಳಗಿ, ಹಮುಮಾನ ಪ್ರೆಸ್ [illegible] [illegible] ಬೆಲೆ [illegible]) [illegible] ಗಾಂಧೀ, [illegible] ರನ್ನು [illegible] ಭಕ್ತಿ, ಸೌಜನ್ಯ ಪ್ರೇಮ [illegible] ಕವಿತಾ ಶಕ್ತಿ ಮಾತ್ರ ದುರ್ಲಭವಾಗಿದೆ.

ಜಾನಪದ ದಾಟಿಯಲ್ಲಿ ಶ್ರೀ ಬಸಪ್ಪ ಮಠದಾರರು ಬರೆದ "ವಸ್ತ್ರಸ್ವಾವಲಂಬನ ಗೀಗೀ ಪದಗಳು" (ಪ್ರಕಾಶಕರು: ಗ್ರಾಮೋದ್ಯೋಗ ಸಮಿತಿ ರೋಣ ಬೆಲೆ ೪ ಆ.) ಹಾಡಿ ಹುಕ್ಕು ವಸ್ತ್ರಸ್ವಾವಲಂಬನಗಳನ್ನು ಬೋಧಿಸುತ್ತವೆ.

ಶ್ರೀ ಪ. ಅ. ಉಪಾಧ್ಯಾಯರು ಅಚ್ಚು ಪ್ರಕಟಿಸಿದ "ಪುರಂದರ ದಾಸರ ಕೀರ್ತನೆ" ಯಲ್ಲಿ ದಾಸವರ್ಯರ ಜನಪ್ರಿಯವಾದ ಕೆಲ ಹಾಡುಗಳನ್ನು ಶುದ್ಧವಾಗಿ ಮುದ್ರಿಸಲಾಗಿದೆ. ಉಪಾಧ್ಯಾಯ ಪ್ರಕಟನಾಲಯ, ಗೋಪಾಲಕೃಷ್ಣ ಗುಡಿ ಬೀದಿ, ಚಿಕ್ಕಪೇಟೆ, ಬೆಂಗಳೂರು, ಇಲ್ಲಿಂದ ಅರಾಣೆ ಬೆಲೆಗೆ ಪಡೆಯಬಹುದು.

ಶೈಕ್ಷಣಿಕ: ಮುಂಬಯಿಯ ಕನ್ನಡ ಅಧ್ಯಾಪಕ ಶ್ರೀ ವಾಸುದೇವರಾವ್ ಶಿಬ್ರೂರಕರು ಸಂಗ್ರಹಿಸಿದ "ಬಾಲಕರ ಸಂಪೂರ್ಣ ಗಣಿತ ಕೋಶ" ದಲ್ಲಿ (ಪ್ರ – ಸ್ವತಂತ್ರ ಭಾರತ ಬುಕ್ ಕಂ., ಕೋಟೆ, ಮುಂಬಯಿ, ಬೆಲೆ ೮ ೮) ಯಲ್ಲಿ ಮಗ್ಗಿಯೇ ಮೊದಲಾದ ಹಲವು ಉಪಯುಕ್ತ ತಾಲಿಕೆಗಳೂ ಇತರ ಮಾಹಿತಿಗಳೂ ಇವೆ. ಶ್ರೀ ಕೆ. ಕೆ. ಗಲಗಲಿಯವರ ಐದನೇ ವರ್ಗದ "ನೂತನ ಗಣಿತ" (ಪ್ರ – ಆಕಳವಾಡಿ ಬುಕ್ ಡಿಪೋ, ಧಾರವಾಡ. ಬೆಲೆ ರೂ. ೧/೪) ದಲ್ಲಿ ಹೊಸ ಅಭ್ಯಾಸ ಪತ್ರಿಕೆಯನ್ನನುಸರಿಸಿದ ಗಣಿತ ಕೈಪಿಡಿದೆ.

[illegible]

ನಿರೀಕ್ಷರತೆ [illegible]

[illegible]

ಈ ಛಾಯಾ ಸಂಗ್ರಹದಲ್ಲಿ [illegible] ಕರ್ತವ್ಯಮುಂದಾದ [illegible] ಸ್ಪಷ್ಟವಾಗಿ ಹೇಳಲಾಗಿದೆ. [illegible] ಅನೇಕ [illegible] ಹಳೆಯ ವಿಷ್ಯಗಳನ್ನೇ [illegible] ಕನ್ನಡಿಗರಿಗೆ [illegible] ಅಂಶವನ್ನೂ ಹೇಳಲಾಗಿ[illegible] ಹಳವಳವನ್ನು [illegible] ಯಶಸ್ವಿಯಾದೀತೆಂಬುದನ್ನು [illegible] ಗಂಭೀರವಾಗಿ ವಿಚಾರ[illegible] ಪ್ರಸ್ತುತ ಪುಸ್ತಕ [illegible] ಬಹಳ ಮಟ್ಟಿಗೆ [illegible]

ಕಲಿತವರ ಕೃಷಿ

ಲೇಖಕರು— ಶ್ರೀ. ಗು. ಜೇಡರ

ಸಾವು ಯಾವುದಕ್ಕಿಲ್ಲದಿದ್ದರೂ ನಮ್ಮ ದೇಶದ ಭೂಸಂಪತ್ತಿಗಾಗಿ ಹೆಮ್ಮೆ ಪಡಬೇಕು. ಇನ್ನುಳಿದ ಸಮಸ್ತ ಭೂಮಿಖಂಡದವರು ನಮ್ಮ ಭಾಗ್ಯವನ್ನು ಕಂಡು ಅಸೂಯೆಪಡಬೇಕು. ಅದೇತಕ್ಕೆಂದರೆ ಅಲ್ಲಿ ಸಸ್ಯ ಬೆಳೆಯಬಹುದಾದ ಮಣ್ಣುಳ್ಳ ಭಾಗ ಕಡಿಮೆ. ಹೆಚ್ಚಾಗಿ ಕಲ್ಲು-ಕಲ್ಲಿದ್ದಲು - ಲೋಹಗಳ ಹೊದರುಳ್ಳದ್ದೋ ಹಿಮಾಚ್ಛಾದಿತ ಬಂಜರೋ ಇರುತ್ತದೆ. ನಮ್ಮಲ್ಲಿ ನೋಡಿ-ಎಲ್ಲಿಬೇಕಲ್ಲಿ ಸಸ್ಯ ತಾನಾಗಿ ಬೆಳೆದುಕೊಂಡಿರುತ್ತದೆ. ಕಲ್ಲು ಬಂಡೆಗಳಲ್ಲಿ ಎಲ್ಲಿಯೋ ಸ್ವಲ್ಪ ಮಣ್ಣು ಸಿಕ್ಕಿದರೂ ಅಲ್ಲಿ ಕಡು ವನಸ್ಪತಿಗಳು ಹುಟ್ಟಿರುತ್ತವೆ!

ಆದರೆ ಇಂತಹ ಫಲದ್ರೂಪ ಭೂಮಿಯನ್ನುಳ್ಳ ದೇಶದಲ್ಲಿ ಹೊಟ್ಟೆತುಂಬ ಅನ್ನವಿಲ್ಲದ ಕಳವಳವೇಕೆ? ಅಷ್ಟೇಯಲ್ಲ, ವಿಸ್ತಾರ ಭೂಮಿಯನ್ನುಳ್ಳ ಉಳಿದ ಭೂಖಂಡದಿಂದ ಕಾಳುಗಳನ್ನು ಬಿಕ್ಕೆ ಬೇಡಿ ತರುವ ಲಜ್ಜಾಸ್ಪದ ಪ್ರಸಂಗವೇಕೆ?

ಅನೇಕಾನೇಕ ಕಾರಣಗಳಲ್ಲಿ ಮುಖ್ಯವಾಗಿ ನಮ್ಮಲ್ಲಿನ ಸುಶಿಕ್ಷಿತರು ಕೃಷಿಯನ್ನು ಕೈಕೊಳ್ಳದಿರುವದು. ಯಾವುದೇ ದೇಶದಲ್ಲಿ ಅದರ ಹವಾಮಾನ, ಭೌಗೋಲಿಕ ಸ್ಥಾನ, ಭೂ..ಖನಿಜ ಸಂಪತ್ತು ಮುಂತಾದವುಗಳ ಅನುಕೂಲತೆಯ ಮೇರೆಗೆ ಒಂದೊಂದು ಮುಖ್ಯೋದ್ಯೋಗವಿರುತ್ತದೆ. ಅಲ್ಲಿನ ಸುಶಿಕ್ಷಿತರು ಪ್ರಾಮುಖ್ಯವಾಗಿ ಆ ಉದ್ಯೋಗದ ಕಡೆಗೇ ತಮ್ಮ ಒಲವನ್ನಿಟ್ಟಿರುತ್ತಾರೆ. ಸರ್ವ ರಾಜಕಾರಣಿಗಳು ಯಂತ್ರೋದ್ಯಮಿಗಳು, ತಜ್ಞರು ಸಂಶೋಧಕರು ಅಷ್ಟೇಕೆ..ಕವಿ..ನಾಟಕಕಾರರು ಸಹ ಆ ಉದ್ಯಮದ ಉತ್ತರೋತ್ತರ ಉನ್ನತಿಗಾಗಿ ತಮ್ಮ ಭಾಗದ ಕರ್ತವ್ಯವನ್ನು ಅಭಿಮಾನಪೂರ್ವಕವಾಗಿ ಮಾಡಿ ಪೂರೈಸುತ್ತಾರೆ.

ನಮ್ಮಲ್ಲಿ?

ನಮ್ಮಲ್ಲಿ ಉಚ್ಚ ಶಿಕ್ಷಣ ಪಡೆದವರಲ್ಲಿ ಕೃಷಿಯನ್ನು ಕೈಕೊಂಡವರೆಷ್ಟು ಜನ? ನವಕರಿಯೇ ಪರಮಸಾಧನೆಯೆಂದೂ ಅದಿಲ್ಲದೆ ಗತ್ಯಂತರವೇ ಇಲ್ಲವೆಂದೂ ತಿಳಿದು ಕೇವಲ ನವಕರಿಗಾಗಿ ಹೆಣಗುತ್ತಿರುವವರೆಷ್ಟು ಜನ? (ನವಕರಿ ಸಿಗದಿದ್ದರೂ ಕೃಷಿಯನ್ನು ಕೈಕೊಳ್ಳದೆ ವೃಥಾ ಸಂತಾಪದಿಂದ ಬೇರಿನ್ನೆಲ್ಲೋ ಹೇಗೋ ಉದರಂಭರಣ ನಡೆಸುತ್ತಿರುವವರೇ ಹೆಚ್ಚು.) ನವಕರಿ ಸಿಕ್ಕವರಲ್ಲಿ ನಮ್ಮ ದೇಶದ ಕೃಷಿಯನ್ನು ನಿಜವಾಗಿಯೂ ಉತ್ತಮಗೊಳಿಸಬೇಕು ಎಂಬ ಉದ್ದೇಶವಿಟ್ಟುಕೊಂಡು ಕೆಲಸಮಾಡುತ್ತಿರುವವರೆಷ್ಟು ಜನ?

ಮ. ಗಾಂಧೀಜಿಯವರೊಮ್ಮೆ ''ರೈತನೇ ನಮ್ಮ ದೇಶದ ಮುಖ್ಯಮಂತ್ರಿಯಾಗಬೇಕು, ಗವ್ಹರ್ನರ ಜನರಲನಾಗಬೇಕು, ...'' ಮುಂತಾಗಿ ಹೇಳಿದರು. ಅದರರ್ಥ ಈಗಿದ್ದ ಹಳ್ಳಿಯ ಹುಂಬನೊಬ್ಬನನ್ನು ತಂದು ಮುಖ್ಯಮಂತ್ರಿಯನ್ನಾಗಿಮಾಡಬೇಕೆಂದಲ್ಲ. ಮುಖ್ಯಮಂತ್ರಿಯಾದವನಲ್ಲಿ ಗವ್ಹರ್ನರನಾದವನಲ್ಲಿ, ಶಿಕ್ಷಣಾಧಿಕಾರಿಯಾದವನಲ್ಲಿ, ಸಂಶೋಧಕನಾದವನಲ್ಲಿ... ನಮ್ಮ ನಾಡಿನ ಕೃಷಿಕವರ್ಗದ ದೃಷ್ಟಿಯಿರಬೇಕೆಂದು ಅರ್ಥ.

ಈಗ ನಮ್ಮ ದೃಷ್ಟಿಯಲ್ಲಿ ಕೃಷಿ ಓದು ಬರಹ ಬಾರದವರ ಕೆಲಸ. ಓದು, ಬರಹ ಕಲಿಯುವದು ಇನ್ನಾವುದೋ ಉದ್ಯೋಗಕ್ಕಾಗಿ. ಉಚ್ಚ ಶಿಕ್ಷಣ ಪಡೆದವನೊಬ್ಬ ಒಕ್ಕಲುತನ ಕೈಕೊಂಡರೆ ''ಒಕ್ಕಲುತನವನ್ನೇ ಮಾಡಬೇಕಾಗಿದ್ದರೆ ಇಷ್ಟೆಲ್ಲ ಯಾಕೆ ಖರ್ಚು ಮಾಡಿ ಓದಬೇಕಾಗಿತ್ತು?'' ಎಂದು ಕೇಳುತ್ತಾರೆ. ಕೃಷಿಪ್ರಧಾನವಾದ ನಮ್ಮ ದೇಶದಲ್ಲಿ ಸುಶಿಕ್ಷಿತರ ಈ ದೃಷ್ಟಿ ನಿಚ್ಚಳವಾದ ವಿನಾ ನಮ್ಮ ಪ್ರಧಾನ ಉದ್ಯೋಗ ದೇಶಕ್ಕೆ ಕಲಂಕ. ಅಶಿಕ್ಷಿತ ಹುಂಬನೊಬ್ಬ ಈ ಉದ್ಯೋಗವನ್ನು ಕೈಕೊಂಡಿದ್ದರಿಂದ ಈ ಉದ್ಯೋಗದಲ್ಲಿ ಪ್ರಗತಿಯಾಗದು, ಲಾಭವಂತೂ ಇಲ್ಲವೇ ಇಲ್ಲ. ಆತನ ಸೌಕರ್ಯಕ್ಕಾಗಿ ಶ್ರಮಿಸುತಿದ್ದೇವೆ ಎಂದು ಹೇಳುವ ಸುಶಿಕ್ಷಿತರಿದ್ದರೆ ಅವರ ಆತ್ಮವಂಚನೆ ಕನಿಕರಾರ್ಹ. ಹೇಗೆಂದರೆ-ರೈತರಹಿತಕ್ಕಾಗಿಪತ್ರಿಕೆಯೊಂದನ್ನು ಹೊರಡಿಸಿ ಆ ಮೂಲಕ ಅವರ ಉದ್ಯೋಗವನ್ನು ಸುಧಾರಿಸುವಂತೆ ಮಾಡುವದೆಂದರೆ. ಆ ಅಶಿಕ್ಷಿತ ರೈತರೆಲ್ಲ ಅದನ್ನು ಓದಬಲ್ಲರೇ? ರೇಡಿಯೋ ಮೂಲಕ ಹೇಳಿ ಕಳಿಸುವುದೆಂದರೆ. ಕೇವಲ ಶಹರದಲ್ಲಿದ್ದ ರೈತರಲ್ಲಿಯೂ ಎಷ್ಟು ಜನ ಸಂಜೆಯ ಮುಂದೆ ನಿಯಮಿತವಾಗಿ ರೇಡಿಯೋ ಇದ್ದಲ್ಲಿ ಹೋಗಿ ಕೇಳುತ್ತಾರೆ? ಕೇಳಿದವರಲ್ಲಿಯೂ ಎಷ್ಟು ಜನ ತಮ್ಮ ಹುಂಬತನ ಬಿಟ್ಟು ಸಾರಾಸಾರ ವಿಚಾರಿಸಿ ನಡೆದುಕೊಳ್ಳಬಲ್ಲರು? (ಅದಕೆ ನಾನಿಲ್ಲಿ ಬರೆಯುತ್ತಿರುವುದು ಸುಶಿಕ್ಷಿತರಿಗಾಗಿ, ಸುಶಿಕ್ಷಿತರಲ್ಲಿ ಹೆಚ್ಚು ಜನ ಓದಬಲ್ಲರೆಂಬ ಭರವಸೆ ಅದಕ್ಕೋಸ್ಕರ ಈ ಬರೆಹ ಯಥಾಯೋಗ್ಯ). ಈಗಿನ ರೈತ ಭಾವುಕ, ಅಜ್ಞಾನಿ, ಸಂಪ್ರದಾಯವಾದಿ, ಅಲ್ಪಸಂತುಷ್ಟ ಇರುವದರಿಂದ ಆತನಿಗೆ ಸೌಕರ್ಯಗಳನ್ನೊದಗಿಸುವ ಸಾಹಸ ಜಲಹೋಮ. ಸಬ್‌ಸಿಡಿ, ತಗಾಯಿ ಮುಂತಾದ ಧನಸಹಾಯ ಆತನ ಭಾವುಕ ದುಂದುಗಾರಿಕೆಗಳಿಗೆ ವ್ಯಯವಾಗಬಹುದು. ಕಡಿಮೆ ದರದ ಟ್ರ್ಯಾಕ್ಟರಗೆಯ್ತದ ಸಹಾಯಕ್ಕೆ ಆತ: ಮನ ಎಳೆಸಲಿಕ್ಕಿಲ್ಲ. ಯಾಕಂದರೆ ಆತ ಸಂಪ್ರದಾಯವಾದಿ. ''ಕಬ್ಬಿಣ ರೆಂಟೆ ಹೊಡೆದರೆ ನೆಲಕ್ಕೆ ಜಂಗುಹತ್ತುತ್ತದೆ'' ಎಂಬ ಭಾವನೆಯ ರೈತರನ್ನೆಷ್ಟೋ ನಾನು ನೋಡಿದ್ದೇನೆ. ಹೊಸ ಶೋಧಗಳಿಂದ ಆತ ಪ್ರಯೋಜನ ಪಡೆಯಲಿಚ್ಛಿಸುವದಿಲ್ಲ. ಆತ ಅಲ್ಪಸಂತುಷ್ಟ.

ಒಮ್ಮೆ ಒಬ್ಬ ತರುಣ ತನ್ನ ತಂದೆಯ ಮಾತನ್ನು ಮೀರಿ ಟ್ರ್ಯಾಕ್ಟರ ರೆಂಟೆ ಹೊಡೆಸಿದ. ಹೊಡೆಯುವ ಕೈಲಿ ಆಳವಾಗಿ.ಬಹು ಆಳವಾಗಿ ಹೊಡೆಸಿದ. ಕೆಳಗಿನ ಮಣ್ಣು ಮೇಲೆ ಬಂತು. ಮೇಲಿನದು ಕೆಳಕ್ಕೆ ಹೋಯಿತು. ನೋಡುವದಕ್ಕೆ ಒಳ್ಳೇ ಉತ್ತಮ ಕೆಲಸವಾದಂತೆ ಕಂಡಿತಾದರೂ ಮುಂದೆ ೩-೪ ವರ್ಷ ಬೆಳೆ ಮೊದಲಿನಷ್ಟೂ ಬರಲಿಲ್ಲ! ತಂದೆ ಮಗನನ್ನು ಹಳಿಯಲು ಅನುವಾಯಿತು. ಮಗನ ಸಾಹಸಬುದ್ಧಿಯ ಕುಡಿ ಮುರುಟಿತು. ಕಾರಣವೇನಂದರೆ ತಮ್ಮ ಉದ್ಯೋಗದ ವೈಜ್ಞಾನಿಕ ಜ್ಞಾನವಿಲ್ಲದಿರುವದು. ಭೂಮಿಯ ಮೇಲ್ಭಾಗದಲ್ಲಿ ಕೇವಲ ಹನ್ನೆರಡು ಇಂಚು ಆಳದಲ್ಲಿ ಮಾತ್ರ ಸೂರ್ಯನ ಕಿರಣಗಳು ಕೆಲಸ ಮಾಡಬಲ್ಲವು. ಅದರಿಂದಾಗಿ ಸಸ್ಯಾಹಾರ ಭೂಮಿಯ ಆ ಭಾಗದಲ್ಲಿ ಮಾತ್ರ ಸಸ್ಯ ತೆಗೆದುಕೊಳ್ಳುವ ಸ್ಥಿತಿಯಲ್ಲಿರುತ್ತದೆ. ಅದಕ್ಕೆ ಕೆಳಗಿನ ಖನಿಜ ಆಳವಾದ ರೆಂಟೆಯಿಂದ ಮೇಲೆ ಬಂತು; ತಯಾರಾದ (Decomposed) ಖನಿಜ ಸಸ್ಯಕ್ಕೆ ನಿಲುಕದಷ್ಟು ಕೆಳಕ್ಕೆ ಹೋಯಿತು. ಮೇಲೆ ಬಂದ ಖನಿಜದ್ರವ್ಯ ಸೂರ್ಯಕಿರಣಗಳಿಂದ ಪೃಥಕ್ಕರಿಸಲ್ಪಟ್ಟು ಸಸ್ಯಕ್ಕೆ ತೆಗೆದುಕೊಳ್ಳಲು ಬರುವಂತಾಗುವವರೆಗೆ ಆತನಿಗೆ ಸರಿಯಾಗಿ ಬೆಳೆ ಬರಲಿಲ್ಲ. ತೀರ ಆಳವಾಗಿ ಟ್ರ್ಯಾಕ್ಟರ ಹೊಡೆಸಬಾರದಾಗಿತ್ತು. ಆದರೆ ಇದನ್ನು ಆತನಿಗೆ ತಿಳಿಸುವವರಾರು?

ಪ್ರಚಲಿತ ಕೃಷಿಯಲ್ಲಿ ಆರ್ಥಿಕ ದೃಷ್ಟಿಯಿಂದ ಕೇವಲ ಹಾನಿಯೇ ಅದೆ. ಅಶಿಕ್ಷಿತ ರೈತನು ತನ್ನ ಸಾಗುವಳಿಯ ಸಲುವಾಗಿ ಹಾಕಿದ ಬಂಡವಲ, ದನಕರುಗಳ-ಗಳೇಸಾಮಾನುಗಳ ಈಗಿನ ಬಾಡಿಗೆ, ತಾನು ತನ್ನ ಬಾಂಧವರು ದುಡಿದ ಕೂಲಿ, ಕೂಲೀ ಆಳಿನ ಕೂಲಿ, ಪೈರು ಬಂದ ಮೇಲೆ ಮನೆಯಲ್ಲಿಟ್ಟುಕೊಂಡಷ್ಟು ಕಾಲದ ಕಾಯುವ ಕಟ್ಟುವ ಕೂಲಿ, ಬೆಳೆಯನ್ನು ಪೇಟೆಗೆ ಸಾಗಿಸಿದ ಖರ್ಚು ಮುಂತಾದನ್ನೆಲ್ಲ ಲೆಕ್ಕಹಾಕಿ ಬಂದ ಬೆಳೆಯಿಂದ ಪೇಟೆಯಲ್ಲಿ ಸಿಕ್ಕ ಬೆಲೆಯನ್ನು ನೋಡಿದರೆ ಪ್ರತಿಯೊಬ್ಬ ರೈತ ಪ್ರತಿ ವರ್ಷ ಎಷ್ಟು ಹಾನಿ ಹೊಂದುತ್ತಿದ್ದಾನೆಂಬುದು ತಿಳಿಯುತ್ತದೆ.

ಈಗಿನ ನಮ್ಮ ಸರ್ಕಾರ ಪದವೀಧರರೆಲ್ಲರೂ ತಮ್ಮ ಕಾಲೇಜು ವಿದ್ಯಾಭ್ಯಾಸ ಮುಗಿದೊಡನೆ ಕೆಲಕೆಲವಾದರೂ ಹಳ್ಳಿಗೆ ಹೋಗಿ ಸಮಾಜ ಸೇವೆ ಮಾಡಲೇಬೇಕೆಂದು ನಿರ್ಣಯಿಸಲಿದೆ. ಅದರಲ್ಲಿಯೂ ಅರ್ಥಶಾಸ್ತ್ರ ದೃಷ್ಟಿಯಿಂದ ಹಾನಿ ಹೊಂದದೆ ಹೇಗೆ ನಮ್ಮ ದೇಶದ ಪ್ರಮುಖ ಉದ್ಯೋಗ-ಒಕ್ಕಲತನವನ್ನು ನಡೆಸಬೇಕೆಂಬುದನ್ನು ಜನಕ್ಕೆ ತಿಳಿಯುವಂತೆ ಈ ಪದವೀಧರರು ಆ ಹಳ್ಳಿಗಳಲ್ಲಿ ಕನಿಷ್ಠ ಎರಡು ವರ್ಷಗಳವರೆಗಾದರೂ ಸ್ವತಃ ಶಾಸ್ತ್ರೀಯವಾಗಿ ಹೊಸ ಸುಧಾರಿಸಿದ ಪದ್ಧತಿಯಿಂದ ಮಿತವ್ಯಯದಿಂದ ಬೇಸಾಯಮಾಡಿ ತೋರಿಸಬೇಕು. ಅದರಿಂದ ಇನ್ನುಳಿದ ಅಷ್ಟು ಹೆಚ್ಚಾಗಿ ಕಲಿಯದ ಒಕ್ಕಲತನ ಮಾಡುವದು ಕೀಳೆಂದು ಭಾವಿಸುವವರಿಗೆ ಪಾಠ ಹಾಕಿ ಕೊಟ್ಟಂತಾಗುವದಲ್ಲದೆ ಭಾವುಕ, ಅಜ್ಞಾನಿ ರೈತನೂ ಎಚ್ಚರಿದುತ್ತಾನೆ.

ಒಕ್ಕಲುತನವು ಎಲ್ಲ ಶಾಲೆ ಕಾಲೇಜುಗಳಲ್ಲಿ ಒತ್ತಾಯದ ಶಿಕ್ಷಣವಾದ ಹೊರತು ನಮ್ಮ ಕಲಿತವರಿಗೆ ಈ ಉದ್ಯೋಗದ ಶಾಸ್ತ್ರ ಸರಿಯಾಗಿ ತಿಳಿಯದು. ಈ ಉದ್ಯೋಗಶಾಸ್ತ್ರದ ಹೊರತು ಇನ್ನುಳಿದ ವಿಚಾರಶೀಲ ನಡೆವಳಿಕೆ, ಮಿತವ್ಯಯ ಇತ್ಯಾದಿ ಸಂಗತಿಗಳನ್ನು ನಮ್ಮ ಈ ಕಲಿತವರಲ್ಲಿ ಕಾಣಬಹುದಾಗಿದೆ. ಈ ಉದ್ಯೋಗಶಾಸ್ತ್ರವನ್ನಷ್ಟು ಈ ಮೂಲಕ ಓದುಗರು ಅರಿತುಕೊಂಡರೆ ಆದೀತಲ್ಲವೇ?

ಹರಿಜನ ಲೇಖ

ಅಗ್ರಲೇಖ

ಮಂದಗತಿಯ ಮತ್ತು ಸಮವೇಗದ ಅಭಿವೃದ್ಧಿ

ಮನುಷ್ಯನು ಕನಸು ಕಂಡೇ ಕಾಣುವನು; ಆ ಕನಸಾದರೂ ಸುಖಾನ್ವೇಷಣೆಗಾಗಿಯೇ. ಆದರೆ ಅದರ ಸಿದ್ಧಿ ತನ್ನನ್ನು ಅವಲಂಬಿಸುವದೋ ಅಥವಾ ತನ್ನ ಅಧಿಕಾರ ಕಕ್ಷೆಯ ಹೊರಗಿನ ಆಕಸ್ಮಿಕ ಸನ್ನಿವೇಶಗಳ ವರ್ಗವೊಂದರ ಮೇಲೋ ಎಂಬುದರಿಂದ ಅದು ಸರಿಯಾದದ್ದೋ ಇಲ್ಲವೆ ಹುಚ್ಚು ಹುಚ್ಚೋ ಎಂಬುದು ಗೊತ್ತಾಗುತ್ತದೆ. ನಾವು ಸರಿಯಾಗಿ ಕನಸು ಕಾಣಬೇಕು.

ಸುಳ್ಳು ಕನಸುಗಳು ನಮ್ಮನ್ನೂ ಜನರನ್ನೂ ತಪ್ಪುದಾರಿಗೊಯ್ಯುತ್ತವೆ. ಅವು ರಾಷ್ಟ್ರದ ಕೈಯಿಂದ ಒಮ್ಮೆ ಕಳೆದರೆ ತುಂಬಿಸಿಕೊಳ್ಳಲಾರದಷ್ಟು ಹಾನಿಬರುವ ಕಾರ್ಯಗಳನ್ನು ಮಾಡಿಸಲು ಹಚ್ಚುತ್ತವೆ ಮತ್ತು ಕೊನೆಯಲ್ಲಿ ನಿರಾಶೆ ಅತೃಪ್ತಿಭಾವನೆಗಳನ್ನು ಹುಟ್ಟಿಸಿ ಪ್ರಚ್ಛನ್ನ ಅಥವಾ ಪ್ರಕಟ ಹಿಂಸೆಯಲ್ಲಿ ಮುಗಿಯುವುವು.

ಇತ್ತೀಚೆಗೆ ಸ್ವರ್ಣಯುಗವನ್ನು ಸಾಧಿಸಲು ಅನೇಕ ಪ್ರಬಲ ಯೋಜನೆಗಳನ್ನು ರಚಿಸಲಾಗಿದೆ. ಕೆಲವು ಯೋಜನೆಗಳು ಅದರ ಸಾಧನೆಗೆ ೫ ವರ್ಷ ಬೇಕೆಂದರೆ ಮತ್ತು ಕೆಲವು ೧೦ ವರ್ಷ ಎನ್ನುತ್ತವೆ. ಸಾರ್ಜೆಂಟ್ ಯೋಜನೆಯು ೪೦ ವರ್ಷಗಳ ಅವಧಿಯನ್ನು ಹಾಕಿದಾಗ ಅದನ್ನು ರಾಜತಂತ್ರಜ್ಞರೂ ಶಿಕ್ಷಣಜ್ಞರೂ ಧಿಕ್ಕರಿಸಿದರು. ಇಂದಿನ ಸರಕಾರವು ಅದನ್ನು ೧೨ ರಿಂದ ೧೫ ವರ್ಷಗಳೊಳಗೆ ಸಾಧಿಸಿ ಕೊಡುವುದಾಗಿ ವಚನವಿತ್ತಿದೆ.

ಪ್ರಬಲ ಯೋಜನೆಗಳಿಗೆ ಹಣ ಮತ್ತು ಸಾಮಗ್ರಿಗಳ ದೊಡ್ಡ ರಾಶಿಗಳೂ ಯೋಗ್ಯವಾದ ಜನರೂ ಅಗತ್ಯ. ಪರದೇಶೀಯರಿಂದ ಎರವು ತೆಗೆದುಕೊಳ್ಳುವ ಬಯಕೆಯೊಂದಿದೆ. ಪರದೇಶೀಯರಲ್ಲಿ ಅಮೇರಿಕದ ಸಂಯುಕ್ತ ಸಂಸ್ಥಾನವು ಸಹಾಯಮಾಡಲು ಎಲ್ಲರಿಗಿಂತ ಹೆಚ್ಚು ಉತ್ಸುಕವಾಗಿದೆ. ಹಿಂದೆ ಅದು ಬಹಳ ರಾಷ್ಟ್ರಗಳಿಗೆ ಸಹಾಯ ಮಾಡಿತ್ತು. ಆದರೆ ಅದು ಒಬ್ಬ ಒಕ್ಕಲಿಗ ತನ್ನ ಮಗನಿಗೆ ಕೊಟ್ಟ ಬುದ್ಧಿವಾದವನ್ನು ನೆನಪಿಗೆ ತಂದು ಕೊಡುತ್ತದೆ: “ಒಬ್ಬ ಹಣಗಾರನು ಸಾಲಕೊಡಲು ಬಹಳ ಉತ್ಸಾಹ ತೋರಿಸಿದರೆ, ಮಗನೇ ಎಚ್ಚರಿಕೆ, ಅವನಿಂದ ನೀನು ಸಾಲ ತೆಗೆದುಕೊಳ್ಳಬೇಡ.”

ನಾವು ಸ್ವಲ್ಪ ವ್ಯವಹಾರಬುದ್ಧಿಯನ್ನು ತಾಳೋಣ. ನಮ್ಮನ್ನೂ ನಮ್ಮ ಜನರನ್ನೂ ಮೋಸಕ್ಕೀಡು ಮಾಡುವುದು ಬೇಡ. ಜನರಿಗೆ ಪ್ರಯೋಜನಕ್ಕೆ ಬೀಳುವ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ೫ ಅಥವಾ ೧೦ ವರ್ಷಗಳಲ್ಲಿ ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ. ಆ ಯೋಜನೆಯ ಪ್ರಕಾರ ಸಾಕಷ್ಟು ಸಮತೂಕ ಆಹಾರ, ೩೦ ಗಜ ಬಟ್ಟೆ, ಚೆನ್ನಾದ ಮನೆಗಳು, ಚೊಕ್ಕಟವಾದ ಹಳ್ಳಿಗಳು, ವಿದ್ಯುಚ್ಛಕ್ತಿ, ಪೆಟ್ರೋಲ್, ವಿದ್ಯುಚ್ಛಕ್ತಿ ಅಥವಾ ಅಣುಶಕ್ತಿಗಳಿಂದ ನಡೆಯುವ ಚಿಕ್ಕ ಯಾಂತ್ರಿಕ ಕಾರಖಾನೆಗಳು ಮತ್ತು ಇತರ ಸುಖಸಾಧನಗಳನ್ನು ಎಲ್ಲರಿಗೂ ಒದಗಿಸಲು ೨೦ ವರ್ಷಗಳಾದರೂ ಕಡಿಮೆಯೇ. ಶಿಕ್ಷಣವೆಂದರೆ ಹಳೆ ಪದ್ಧತಿಯ ಅನುತ್ಪಾದಕ ಶಿಕ್ಷಣ ಎಂದು ತಿಳಿದರೂ ಅಂಥ ಪ್ರಾಥಮಿಕ ಶಿಕ್ಷಣವನ್ನು ಕೂಡ ೧೫ ವರ್ಷ ಕಳೆದರೂ ಎಲ್ಲರಿಗೂ ಒದಗಿಸಲು ಸಾಧ್ಯವಾಗದು.

ಇಂದಿನ ವಿಜ್ಞಾನವು ಅದ್ಭುತ ಕಾರ್ಯವನ್ನು ಸಾಧಿಸಿದೆಯೆಂಬುದರಲ್ಲಿ ಸಂದೇಹವಿಲ್ಲ. ಅದು ಕೇವಲ ಐಹಿಕ ಕ್ಷೇತ್ರದಲ್ಲಲ್ಲದೆ ಆಮುಷ್ಮಿಕ ಕ್ಷೇತ್ರದಲ್ಲೂ ಅನೇಕ ಸಿದ್ಧಿಗಳನ್ನು ಪಡೆವಂತೆ ಮಾಡಿದೆ. ಸಾಧ್ಯವಾದಷ್ಟು ಮಟ್ಟಿಗೆ ಸತ್ಯವನ್ನು ಮುಖಾಮುಖಿಯಾಗಿ ನೋಡಿ ಮಾನವ ಕುಲದ ಸುಖಶಾಂತಿಗಳಿಗಾಗಿ ದುಡಿಯುವುದೇ ಅದರ ಅತ್ಯಂತಿಕ ಗುರಿ.

ಆದರೆ ಇಂದಿನ ವಿಜ್ಞಾನವಾದರೂ ಮಧ್ಯಯುಗದ ಮಾಂತ್ರಿಕ ಕಲೆಯಂತೆಯೇ ಒಂದು ನಾವಿಕನಿಲ್ಲದ ಹಡಗೆನಿಸಿದೆ ಎಂಬುದನ್ನು ನೆನಪಿನಲ್ಲಿಡಬೇಕು. ಒಂದು ವಿಧದಲ್ಲಿ ನೋಡಿದರೆ ಇದು ಅದಕ್ಕೂ ಹೆಚ್ಚು ಅಪಾಯಕರ ಎನ್ನಬೇಕು. ಏಕೆಂದರೆ, ಆಧುನಿಕ ವಿಜ್ಞಾನವು ಬಳಸಲು ಬರುವ ಆದರೆ ಯಾವ ಉದ್ದೇಶಕ್ಕಾಗಿ ಬಳಸಬೇಕೆಂಬುದನ್ನರಿಯದ ನೂರಾರು ಜನರ ಕೈಗೆ ಅಪಾಯಕರವಾದ ಉಪಕರಣಗಳನ್ನು ಕೊಟ್ಟಿದೆ. ಆದುದರಿಂದ ರಚನಾತ್ಮಕ ಉದ್ಯಮಿಗಳಿಗೆ, ಜೀವನಾವಶ್ಯಕ ವಸ್ತುಗಳ ಉತ್ಪಾದನೆಗೆ ವಿಜ್ಞಾನವು ಬಳಸಲ್ಪಡುವುದರೊಳಗೇ ಮೊದಲು ಲಕ್ಷ್ಯಹಾಕಬೇಕಾದ ಸಂಗತಿಗಳ ಪಟ್ಟಿಗೆ ಸೇರಿದ ಯುದ್ಧಗಳ ಸಿದ್ಧತೆಯ ಕ್ಷೇತ್ರಗಳಲ್ಲೇ ಉದಿತೋದಿತ ಉತ್ಸಾಹದಿಂದ ಬಳಸಲ್ಪಡುತ್ತಿದೆ.

ಯುದ್ಧಮಗ್ನ ರಾಷ್ಟ್ರದ ಉಲ್ಲಾಸವನ್ನು ಉಳಿಸಬೇಕಾದರೆ ಯುದ್ಧೋಪದ್ವ್ಯಾಪಿಗಳಾದ ರಾಜನೀತಿಜ್ಞರು ಜನರಿಗೆ ಅತಿಶಯ ಅಭಿವೃದ್ಧಿ ಮತ್ತು ವೈಭವಗಳನ್ನು ಸಾಧಿಸಿ ಕೊಡುವ ವಚನ ಕೊಡಬೇಕಾಗುತ್ತದೆ. ಪ್ರಾಚೀನ ಕಾಲದಲ್ಲಿ ‘ಅಡಿಯ ಮುಂದಿದೆ ಸ್ವರ್ಗ’ ಎಂದು ಮಡಿಯುವವರಿಗೆ ವೀರಸ್ವರ್ಗದ ಆಮಿಷ ತೋರಿಸಿ ಜನರನ್ನು ಯುದ್ಧದಲ್ಲಿ ತೊಡಗಿಸಬಹುದಾಗಿತ್ತು. ಶಾಂತಿಸ್ಥಾಪಕರು ಅಂಥವರನ್ನು ಅನುಕರಿಸಕೂಡದು. ಶತಮಾನಗಳ ಪ್ರಯತ್ನದಿಂದ ಕಟ್ಟಿದ ಜೀವನಾಭಿವೃದ್ಧಿಗಳ ಬಿಳ್ಳಿಲೆಯುಪ್ಪರಿಗೆಗಳನ್ನು ಅರೆನಿಮಿಷದಲ್ಲಿ ಒಂದು ಭೂಕಂಪವೂ ಕೆಲ ತಾಸಿನಲ್ಲಿ ವಿಜ್ಞಾನವೂ ಕೆಲವೇ ದಿನಗಳಲ್ಲಿ ಭೇದೋಪಾಯವೂ ನೆಲಸಮ ಮಾಡಬಲ್ಲುವು. ಸಹಿಷ್ಣುತೆಯಿಂದಲೂ ಕಷ್ಟದಿಂದಲೂ ದುಡಿದರೆ ಮಾತ್ರ ಅವನ್ನು ಪುನಃ ರಚಿಸಲಾದೀತು. ಇದನ್ನು ನಾವೂ ತಿಳಿದುಕೊಳ್ಳಬೇಕು ಮತ್ತು ಜನರಿಗೂ ಸರಳವಾಗಿ ಹೇಳಿಬಿಡಬೇಕು.

ಶತಶತಮಾನಗಳ ವರೆಗೆ ಅವಿರತವಾಗಿ ಅಂತಃಕಲಹದಲ್ಲಿದ್ದು, ಕಡಿಮೆಯೆಂದರೆ ೨ ಶತಮಾನಗಳ ವರೆಗೆ ವಿದೇಶೀಯರ ದಬ್ಬಾಳಿಕೆಗೊಳಪಟ್ಟಿದ್ದು, ಇತ್ತೀಚೆಗೆ ಒಂದು ಜಾಗತಿಕ ಯುದ್ಧವನ್ನು ಮುಗಿಸಿ, ಅನಂತರ ಪಡೆದ ಸ್ವರಾಜ್ಯವು ೫ ಅಥವಾ ೧೦ ವರ್ಷಗಳೊಳಗೆ ಸುಖಸಂಪತ್ಸಮೃದ್ಧಿಯನ್ನು ಒದಗಿಸುವುದು ಅಸಾಧ್ಯವೇ ಸೈ. ಇನ್ನು ಬಂಡವಾಳಿಗರು ಸಂಕುಚಿತ ಭಾವ ತಾಳಿ, ಕೂಲಿಕಾರರು ಕೆಲಸ ಹಗುರಾಗಬೇಕೆಂದು ಹವಣಿಸಿ ಕುಳಿತು, ಸರಕಾರವೊಂದೇ ಅದನ್ನು ಒದಗಿಸುವ ಹೊಣೆ ಹೊರಬೇಕಾದರಂತೂ ಅದು ಮತ್ತೂ ಅಸಾಧ್ಯದ ಸಂಗತಿಯಾದೀತು.

ಸ್ವರಾಜ್ಯವೆಂದರೆ ಜನರು ಇಷ್ಟಪಟ್ಟರೆ ಹೊರಗಿನವರು ಮಾಡುವ ಶೋಷಣೆಯನ್ನು ನಿಲ್ಲಿಸುವುದು ಮತ್ತು ಆತ್ಮೋದ್ಧಾರಕ್ಕಾಗಿ ಹೆಚ್ಚು ಕಷ್ಟಪಟ್ಟು ದುಡಿವ ಒಂದು ಹೇತುವನ್ನೂ ಅವಕಾಶವನ್ನೂ ಪಡೆಯುವುದು. ಈಗ ೧೦೦–೧೫೦ ವರ್ಷಗಳ ಕೆಳಗೆ ರೂಢಿಯಲ್ಲಿದ್ದ ಗಾದೆಯಂತೆ ಪಡೆಯುವುದೊಂದೇ ಸಮೃದ್ಧಿಯ ಮಾರ್ಗ. ಒಬ್ಬ ಬನಿಯ ಮೊದಲು ಒಂದು ಕೊಡ ಮತ್ತು ಒಂದು ಹಗ್ಗ ಹಿಡಿದುಕೊಂಡು ಮನೆಯಿಂದ ಹೊರಟು, ೨೦–೩೦ ವರ್ಷಗಳ ವರೆಗೆ ಕಷ್ಟಪಟ್ಟು ದುಡಿದು ಮಿತವ್ಯಯಿಯಾಗಿ ಕಾಸಿಗೆ ಕಾಸು ಗಂಟು ಹಾಕುತ್ತ, ತನ್ನ ಬಾಳಿನ ಬಹುಭಾಗವನ್ನು ದೇಶಭ್ರಷ್ಟನಂತೆ ದೂರದ ಪ್ರಾಂತ ಅಥವಾ ದೇಶದಲ್ಲಿ ಕಳೆದು, ಮುಪ್ಪಿನ ಕಾಲದಲ್ಲಷ್ಟೇ ತನ್ನ ಕುಟುಂಬವು ಸಮೃದ್ಧಿಯ ಹಾದಿ ಹಿಡಿದಿರುವುದನ್ನು ಕಾಣುತ್ತಿದ್ದನು. ಬ್ರಿಟಿಶರು ಬರುವುದಕ್ಕೆ ಮೊದಲು ಕೂಡ ಬನಿಯರಿದ್ದರು. ಆದರೆ ಅವರದು ತಿರಸ್ಕೃತವೆಂದು ಎತ್ತಿ ಹೊರಗಟ್ಟಿದ ಜಾತಿಯಾದುದರಿಂದ ಅವರು ಯಾರ ಲಕ್ಷ್ಯವನ್ನೂ ಸೆಳೆಯಲಿಲ್ಲ. ಆದರೂ ಮಿಕ್ಕವರಿಗಿಂತ ಅವರು ಯಾವಾಗಲೂ ಸ್ವಲ್ಪ ಹೆಚ್ಚು ಸಂಪನ್ನರಾಗಿಯೇ ಇರುತ್ತಿದ್ದರು. “ಒಬ್ಬ ಬನಿಯ ಇದಿಯಲ್ಲದಿದ್ದರೆ ಅರ್ಧ ರೊಟ್ಟಿಯನ್ನಾದರೂ ಸಂಪಾದಿಸಿಯಾನಲ್ಲವೆ, ಅವನೆಂದೂ ಉಪವಾಸಬಿದ್ದು ಸಾಯುವವನಲ್ಲ.” ಎಂದು ಒಂದು ನಾಣ್ಣುಡಿಯಿದೆ. ಅವರೆ ಅವನು ತನ್ನ ಸಂಪತ್ತನ್ನು ಮಂದಗತಿಯಿಂದ ತಲೆತಲಾಂತರಗಳ ಮೂಲಕ ಆರ್ಜಿಸುತ್ತಿದ್ದನು.

ತಾನು ಸ್ವತಃ ಭೂಮಿಯನ್ನು ಸಾಗುಮಾಡದೆ ಜಮೀನುದಾರ, ಹಣ ಬಡ್ಡಿಗಿಡುವಾತ ಎನಿಸಿಕೊಳ್ಳಲು ಅಥವಾ ಸ್ವತಃ ವಸ್ತುಗಳನ್ನು ತಯಾರಿಸದೆ ಲಕ್ಷಗಟ್ಟಲೆ ರೊಕ್ಕವನ್ನು ಗಳಿಸಲು, ಬ್ರಿಟಿಶರ ಆಳಿಕೆಯು ಈ ಉದ್ಯಮ ಕ್ರಾಂತಿಯು, ತೇಜಿಮಂದಿ ವ್ಯಾಪಾರದ ಮತ್ತು ಜೂಜುಗಾರಿಕೆಯ ಯುಗದಲ್ಲಿ ಅವನಿಗೆ ಅನುಕೂಲ ಒದಗಿತು. ಅಂದಿನಿಂದ ಅವನು ಮಾತ್ಸರ್ಯಕ್ಕೆ ತುತ್ತಾದನು. ವಸ್ತುಸ್ಥಿತಿಯಲ್ಲಿ ಕೆಲವೇ ಮಂದಿ ಇದರಲ್ಲಿ ಮುನ್ನಡೆದು ಜಯಶೀಲರಾದರು. ಮಿಕ್ಕವರು ಕೆಲವೇ ವರ್ಷಗಳಲ್ಲಿ ಹಾಳಾದರು. ನಮ್ಮ ಇಡೀ ರಾಷ್ಟ್ರವನ್ನು ತೆಗೆದುಕೊಂಡರೆ, ಸಮವೇಗದ ಸಮೃದ್ಧಿಸಾಧನೆಗೆ ಹಳೆಯ ಬನಿಯನ ಮಾರ್ಗವೊಂದೇ ನಿಶ್ಚಿತವಾದುದು.

ಕಳೆದ ೫ ವರ್ಷಗಳಿಂದ ನನಗನಿಸುತ್ತಿರುವುದನ್ನು ನಾನು ವಿನಯಪೂರ್ವಕವಾಗಿ ನಿಮ್ಮ ಮುಂದೆ ಹೇಳುತ್ತೇನೆ ಕೇಳಿರಿ: ನಾವು “ವೈಜ್ಞಾನಿಕವೆ ನಾಗರಿಕತೆ”ಯನ್ನು ತ್ವರೆಯಿಂದ ಆಯಾತಮಾಡಿಕೊಂಡರೆ, ರಾಜಕಾರಣದ ಮತ್ತು ಇತರ ವಿವಿಧ ದುರ್ಜಯ ಸಮಸ್ಯೆಗಳನ್ನೂ ಉಗ್ರ ಅಲ್ಲೋಲಕಲ್ಲೋಲವನ್ನೂ ಎದುರಿಸಬೇಕಾದ ಪ್ರಸಂಗದಿಂದ ತಪ್ಪಿಸಿಕೊಳ್ಳಲಾರೆವು. ವಿಜ್ಞಾನದ ನಿಯಮಗಳ ಜ್ಞಾನವು ಸೂಚಿಸಬಹುದಾದ ಪ್ರತಿಯೊಂದು ನವಶೋಧ ಮತ್ತು ಶ್ರಮ ಮಿತವ್ಯಯ ಸಾಧನವನ್ನೂ ಬಳಕೆಗೆ ತರಬೇಕೆಂಬ ಪ್ರಾಣೋತ್ಕ್ರಮಣಸದೃಶವಾದ ಗಡಿಬಿಡಿಯನ್ನು ನಾವು ಬಿಟ್ಟು ಬಿಡಬೇಕು. ನಾವು ವಿಕ್ಟೋರಿಯಾ ರಾಣಿಯ ಕಾಲದಲ್ಲಿ ಅಥವಾ ಮಧ್ಯಯುಗದಲ್ಲಿ ಈಗಲೂ ಬಾಳುತ್ತಿರುವವರೆಂದು ನಮ್ಮನ್ನು ಯಾರಾದರೂ ಕರೆದರೂ ನಾವು ಲಕ್ಷ್ಯ ಮಾಡಬೇಕಾಗಿಲ್ಲ. ನಮ್ಮ ನಾಡಿನ ಅತಿ ಕೆಳವರ್ಗದ ದೇಶಬಾಂಧವರ
ವರೆಗೆ ಎಲ್ಲರಿಗೂ ಸಾಕಷ್ಟು ಆಹಾರ,
ಮತ್ತು ಆರೋಗ್ಯ ಸಂಪನ್ನವೂ ಬಲ
ಆಗಿರುವ ದೀರ್ಘಾಯುಷ್ಯದ
ಬಾಳಲು ಒಂದು ಮನೆ, ಇಷ್ಟನ್ನು
ಕೊಟ್ಟರೆ ಸಾಕು, ಹೆಚ್ಚೇನೂ ಬೇಡ.
ಗತಿಯಿಂದ ಏಳಿಗೆಯನ್ನು ಸಾಧಿಸುವ
ನಮಗೆ ತೃಪ್ತಿಯಿದ್ದರೆ, ನಾವು ನಮ್ಮ
ವನ್ನು ಸ್ವಾವಲಂಬನದಲ್ಲಿ ಆತ್ಮವಿಶ್ವಾ
ಒಂದು ಪ್ರಬಲ ರಾಷ್ಟ್ರವನ್ನಾಗಿ ಪ್ರಸ
ಶಕ್ತರಾದೇವು. ಸರಳ ಜೀವನವನ್ನು
ಮಾನವ ಮಟ್ಟದ್ದೆಂದು ಬಹಿಷ್ಕರಿಸು
ಊಟಕ್ಕೆ ಕುಳಿತವರು ಹೊರಗೆ
ಯೆಂಬ ಕಾರಣದಿಂದ ಬಿಳಿಯ ರೊ
ತುಣುಕೇ ಇರಲಿ, ಇಡೀ ಊಟಕ್ಕೆ
ದೊಡ್ಡ ರೊಟ್ಟಿ ಬೇಡ ಎನ್ನುವುದೂ
ಸಮವಾದುದು.

ನಾವು ಹುಚ್ಚುಕನಸುಗಳನ್ನು ಬಿಟ್ಟು
ಜೀವನದ ಸತ್ಯಸಂಗತಿಗಳನ್ನು ಒಳಹೊ
ನೋಡಿದರೆ, ಪ್ರತ್ಯಾಶಾಭರಿತರಾಗಿ
ಟಿತರಾಗಿ ಆತ್ಮೋದ್ಧಾರ ಮಾಡಿಕೊ
ಒಂದೇ ಒಂದು ಮಾರ್ಗವೆಂದರೆ
ತಿರುಗಿಸುವುದು. ಪಂಡಿತ ಜವಾ
ಖಾದಿಯನ್ನು “ಸ್ವಾತಂತ್ರ್ಯ
ಎಂದು ಕರೆದರು. ಗಿಳಿಯಂತೆ ಅದನ್ನು
ಧ್ವಜಸಮಾರಂಭದ ಮೂಲಕ ಅದಕ್ಕೆ
ನಿಷ್ಠೆ ಸಲ್ಲಿಸಿದ್ದೇ ನಮ್ಮನ್ನು
ರಿಂದಲೂ ಆಗದಷ್ಟು ಚೆನ್ನಾಗಿ ಸ್ವ
ಸಂಪಾದನೆಗಾಗಿ ಸಂಘಟಿಸಿತು. ತನ್ನ
ಚಟುವಟಿಕೆಯಲ್ಲಿ ಖಾದಿಯನ್ನು ಆ
ವನ್ನಾಗಿ ಸ್ವೀಕರಿಸಿದ್ದರೆ ಎಂಥ ಬಲಿಷ್ಠ
ಟನೆ ಸಿದ್ಧಿಸುತ್ತಿತ್ತು!

ವರ್ಧಾ, ಕಿ. ಘ. ಮಶ್ರುವಾ

೧೪—೪—೪೯

ಸೈನ್ಯ ಮತ್ತು ಆಹಾರದ ಕೊರತೆ

ಸ್ವಾತಂತ್ರ್ಯ ದೊರಕಿದ ನಂತರ ಸಶಸ್ತ್ರ ಬಲಗಳನ್ನು ಹೆಚ್ಚಿಸುವ ಒಲವು ಸ್ಪಷ್ಟವಾಗಿ ಕಾಣಬರುತಿದೆ. ಸೈನ್ಯಕ್ಕೆ ಭರತಿಯಾಗುವ ಜನರು ಹೆಚ್ಚಾಗಿ ಹಳ್ಳಿಗಾಡಿನಿಂದ ಬಂದವರು. ಪದೇ ಪದೇ ಒಕ್ಕಲಿಗ ವರ್ಗದಿಂದಲೇ ಸೈನಿಕರನ್ನು ಭರತಿಮಾಡಿಕೊಳ್ಳಲಾಗುತ್ತಿದೆ. ಊರುಮನೆಯಲ್ಲಿ ಇವರಿಗೆ ದೊರೆಯುವದು ತೀರ ಮಿತವಾದ ಆಹಾರ, ದಿನಕ್ಕೆ ಒಂದೇ ಊಟ ಎನ್ನಬಹುದು. ಈ ಅರ್ಧೋಪವಾಸ ಸ್ಥಿತಿಯೇ ಅವರು ಹೆಚ್ಚಾಗಿ ಸಶಸ್ತ್ರ ಬಲಗಳಲ್ಲಿ ಸೇರಲಿಕ್ಕೆ ಉತ್ಸುಕರಾಗಿರಲು ಕಾರಣ. ಅಲ್ಲಿ ದಿನಾಲೂ ಅವರಿಗೆ ಎರಡು ನಾಸ್ತಾ, ಎರಡು ಹೊಟ್ಟೆ ತುಂಬ ಊಟ ದೊರಕುವವಲ್ಲದೆ, ಸಿಗರೇಟು ಸೇದುವ ಮತ್ತು ಬಹುಶಃ ಮದ್ಯಪಾನದ ಚಟಗಳನ್ನು ಕೂಡ ಅಭ್ಯಾಸಮಾಡಲು ಅವಕಾಶ ಸಿಗುವಂತಿದೆ. ರೂಢಿಯ ಮಾತಿನಲ್ಲಿ ಇದನ್ನು “ಜೀವನ ಮಟ್ಟವನ್ನು ಏರಿಸುವದು” ಎಂದು ಕರೆಯಬಹುದು. ಆದರೆ ಅಂಥ ಜೀವನ ಮಟ್ಟದ ಏರಿಕೆಯ ವೆಚ್ಚ ಜನತೆಯ ತಲೆಯ ಮೇಲೆಯೇ ಹೇರುತ್ತದೆ. ಅಲ್ಲದೆ ಸದ್ಯದ ಆಹಾರ ಸಂಗ್ರಹವನ್ನು ಅದು ಹೆಚ್ಚುಹೆಚ್ಚಾಗಿ ಕರಗಿಸುತ್ತದೆಂದೂ ಅರ್ಥವಾಗುತ್ತದೆ. ಆದುದರಿಂದ ಸೈನ್ಯ ಭರತಿ ಹೆಚ್ಚಾದ ಮಾತ್ರಕ್ಕೆ ಆಹಾರ ಸೇವನೆ ಹೆಚ್ಚುವದರಿಂದ, ಆಹಾರ ಕೊರತೆಯೂ ಹೆಚ್ಚುವದು.

ಇತ್ತ, ಈ ಸೈನಿಕರು ತಮ್ಮ ಹೊಲ ಮನೆಯಲ್ಲಿಯೇ ಉಳಿದಿದ್ದರೆ ಆಹಾರವನ್ನು ಉತ್ಪಾದಿಸುತಿದ್ದರು. ಆ ಉತ್ಪಾದನಕ್ರಿಯೆಯಿಂದ ಅವರು ತಪ್ಪಿಸಿಕೊಂಡಷ್ಟು ಮಟ್ಟಿಗೆ ನಮ್ಮ ಆಹಾರ ಪೂರೈಕೆಯೂ ಕುಗ್ಗುವದು. ಹೀಗೆ ಸೈನ್ಯವನ್ನು ಬೆಳೆಸುವದೆಂದರೆ ಉತ್ಪಾದಕ ಕ್ರಿಯೆಯನ್ನು ಕುಗ್ಗಿಸಿ ಇದ್ದ ಆಹಾರ ಸಂಗ್ರಹದ ಮೇಲೆ ಇನ್ನಷ್ಟು ಭಾರ ಹೇರಿದಂತೆ.

ಶ್ರೀಮಂತ ದೇಶಗಳು ಇತರ ದೇಶಗಳಿಂದ ಆಹಾರ ಸಂಗ್ರಹವನ್ನು ಸೆಳೆದುಕೊಂಡು, ಪೂರೈಸುವ ದೇಶಗಳಲ್ಲಿ ಉಪವಾಸ-ಬರಗಾಲಗಳಾದರೂ ಲೆಕ್ಕಿಸದೆ, ದೊಡ್ಡ ದೊಡ್ಡ ಸೈನ್ಯಗಳನ್ನು ಇಟ್ಟುಕೊಳ್ಳಲು ಸಮರ್ಥವಾಗಿವೆ. ಆದರೆ ಭಾರತಕ್ಕೆ ಇಂಥ ಸಾಮರ್ಥ್ಯವಿಲ್ಲ. ಆದುದರಿಂದ ಸೈನ್ಯ ವಿಸ್ತರಣೆಯಿಂದೊದಗಿದ ಆಹಾರ ಕೊರತೆಯನ್ನು ತುಂಬಿಕೊಳ್ಳುವ ಸಲುವಾಗಿ ಹೊರದೇಶಗಳಿಂದ ಧಾನ್ಯಗಳನ್ನು ತರಿಸಲು ನಾವು ಜೀವ ಒತ್ತೆಯಿಟ್ಟು ಹಣ ಒದಗಿಸಬೇಕಾಗಿದೆ.

ಹೀಗೆ ಸಶಸ್ತ್ರ ಬಲಗಳು ಆಹಾರ ವಿಷಯದಲ್ಲಿ ಬಹುತರವಾಗಿ ಪರೋಪಜೀವಿಗಳಾಗಿವೆ. ಇದನ್ನು ಸ್ವಲ್ಪವಾದರೂ ತಡೆಯುವ ಇಚ್ಛೆ
ನಮಗಿದ್ದರೆ ಸೈನ್ಯದ ಜನಶಕ್ತಿಯನ್ನು
ಆಹಾರೋತ್ಪಾದನೆಗೆ ವಿನಿಯೋಗಿಸಬೇ
ಸೈನ್ಯದ ಶ್ರಮ ಮತ್ತು ವೇಳೆಯಲ್ಲಿ ವಿನ
ವಲ್ಲದಿದ್ದರೂ ನಿರುತ್ಪಾದಕ ಅಂಶವೇ ಹೆ
ಶಾಂತಿಕಾಲದಲ್ಲಿ ಅವರ ಶ್ರಮವನ್ನು
ರೋತ್ಪಾದನೆಯ ಕಾರ್ಯದಲ್ಲಿ ತೊಡಗಿ
ಎಷ್ಟೋ ಲೇಸು. ಸೈನಿಕರ ಕಾರಣದಿಂದ
ಗಿದ ಎಲ್ಲ ಕೊರತೆಯನ್ನು ತುಂಬಿಕೊಳ್ಳ
ಅದು ಸಾಲದಿದ್ದರೂ ಹಾನಿಯನ್ನು
ವಾದರೂ ಬಾಯಿಗೂಡಿಸಲು ಇಂಥ ಪ್ರಯ
ದಿಂದ ಸಾಧ್ಯವಾಗಬಹುದು.

ವಿದೇಶೀ ಆಳಿಕೆಯಲ್ಲಿ ಸೈನ್ಯಾಧಿಕಾರಿ
ದೊಡ್ಡ ನಗರಗಳಲ್ಲಿ ಅವರಿಗಾಗಿಯೇ
ಲ್ಪಟ್ಟ “ದಂಡಿನ ಭಾಗ”ಗಳಲ್ಲಿ ವಾಸಿಸಲ
ಸುತಿದ್ದರು. ಈಗ ಅಂಥ ಸ್ಥಳಗಳಲ್ಲಿ ಅ
ವಾಸಿಸಲು ಯಾವ ಕಾರಣ ಇಲ್ಲ. ಸಾ
ಪ್ರಜಾಗಣದಿಂದ ದೂರವಾಗಿ ಅವರನ್ನು
ಯೋಗ್ಯವಾದ ಪಡಭೂಮಿಗಳಲ್ಲಿ ತ
ಸಲು ಅಡ್ಡಿಯಿಲ್ಲ. ಆಗ ಅವರು ತಮ್ಮಲ್ಲಿ
ಅಪಾರವಾದ ಸಾಧನಸಂಪತ್ತಿ ಮತ್ತು ಯು
ಕೌಶಲದ ಬಲದಿಂದ ಕೃಷಿಯೋಗ್ಯ
ಭೂಮಿಗಳನ್ನು ಸಾಗುಮಾಡಬಲ್ಲರು.
ಬೇಕಾದ ಆಹಾರ ಮತ್ತು ಕಾಯಿಪಲ್ಲೆಗ
ಬಹುಭಾಗವನ್ನು ಅವರು ಬೆಳೆಮಕೆ
ಬಹುದು.

ಈ ರೀತಿ ಸಶಸ್ತ್ರ ಬಲಗಳನ್ನು ವರ್ಷದ
ಋತುಗಳಲ್ಲಿ ನಿಯೋಜಿಸುವುದರಿಂದ ಅ
ಪ್ರಯೋಜನಗಳಿವೆ. ಅದು ವಾಸದ ಮನೆ
ಕೊರತೆಯನ್ನು ಕಡಿಮೆ ಮಾಡುತ್ತದೆ.
ದರೆ, ದಂಡಿನ ಭಾಗಗಳಲ್ಲಿಯ ಮನೆಗಳ
ಆಗ ನಾಗರಿಕರ ಉಪಯೋಗಕ್ಕಾಗಿ ಬ
ಕೊಡಬಹುದು. ಸೈನ್ಯಖಾತೆಯಲ್ಲಾದರೆ
ಯಾದ ಸಿಬಂದಿಯನ್ನು ನೇಮಿಸಿ, ಬ
ನಾಳೆ ಒಕ್ಕಲಿಗ ವೃತ್ತಿಯನ್ನೇ ಅವಲಂ
ಲಿರುವ ಯುವಕ ಸೈನಿಕರಲ್ಲಿ ಗೊಬ್ಬರ ಮ
ಉತ್ತಮ ಬೀಜಗಳ ಬಗ್ಗೆ ಅನುಕೂಲ ಮ
ವೃತ್ತಿಯನ್ನುಂಟುಮಾಡಬಹುದಾದ್ದರಿಂದ
ರನ್ನು ಆಧುನಿಕ ಕೃಷಿಪದ್ಧತಿಗಳಲ್ಲಿ ನುರಿ
ರನ್ನಾಗಿ ಮಾಡಲು ಸಾಧ್ಯವಿದೆ. ನಮ್ಮ
ನುಗತಿಕ ಒಕ್ಕಲಿಗರಲ್ಲಿರುವ ಎರಡು ದೊ
ದೋಷಗಳು ಈ ಪ್ರಕಾರ ನಿವಾರಿಸಲ್ಪ
ವವು. ಎಲ್ಲಕ್ಕೂ ಮಿಗಿಲಾಗಿ ಆಹಾರ ಕೊ
ಯನ್ನು ಕೆಲಮಟ್ಟಿಗೆ ಬಾಯ್ಗೂಡಿಸಬಹು
ಒಂದುವೇಳೆ ಆ ವೆಚ್ಚದ ಕಾರಣದಿಂದ
ರುವ ಆಹಾರ ವಸ್ತುಗಳ ಸಂಗ್ರಹದ ಮೇ
ವಿಶೇಷ ಭಾರವನ್ನು ಹಾಕದೆ ಸೈನಿಕರು ಉ

-(ಮುಂದಿನ ಪುಟ

ಟಿಪ್ಪಣಿಗಳು

...ಕ ಯುದ್ಧ ಕರ

ಬ್ರಿಟಿಶ ಸೈಕಲ್ಲುಗಳು ಅಲ್ಲಿನ ಯುದ್ಧೋತ್ತರ ಕಾರಖಾನೆಗಳ ಶಾಂತಿಕಾಲದ ಉತ್ಪತ್ತಿಗಳಾಗಿರುವದರಿಂದ ಅವು ...ಡನೆ ಪೈಪೋಟಿ ನಡೆಸಿ ಗೆಲ್ಲುವದು ಹಿಂದೀ ...ಕಲ್ ಉತ್ಪತ್ತಿಗೆ ಸಾಧ್ಯವಾಗುವದಿಲ್ಲ. ...ದ ಮೇಲೆ ನಾವು ಬ್ರಿಟಿಶ ಸೈಕಲುಗಳನ್ನು ...ಂಡುಕೊಳ್ಳುವ ಮೂಲಕ ಬ್ರಿಟಿಶರ ...ದ್ಧಸನ್ನದ್ಧತೆಗೆ ಸಹಾಯ ಮಾಡುತ್ತಿದ್ದೇ...ದಾಯಿತು.

...ದೇ ಪ್ರಕಾರ, ನಮ್ಮ ಹೊಸ ಮುಂಗಡ ...ತ್ರಿಕೆಯಲ್ಲಿ ಇನ್ನೊಂದು ಅಪೂರ್ವ ಮಿಂಚಿ... ...ಂಡುಬರುತ್ತದೆ. ಒಂದೇ ಒಂದು ಕಂಪನಿ ...ನ್ನು ಬಿಟ್ಟರೆ ಉಳಿದೆಲ್ಲ ವಿಮಾನ ಸಾಗಿ... ...ಣಗಳು ನಷ್ಟದಿಂದಲೇ ನಡೆಯುತ್ತಿ...ಯಂತೆ. ಇಂದಿನ ಪ್ರವಾಸಿಕರ ವಿಮಾನಗಳೇ ...ಳಿನ ಬಾಂಬರುಗಳು. ಆದುದರಿಂದ ನಮ್ಮ ...ಯುದ್ಧ ಸನ್ನದ್ಧತೆ ಸರಿಯಾಗಿರಬೇಕಾದರೆ ...ಭವಿರಲಿ ನಷ್ಟವಾಗಲಿ ಈ ವಿಮಾನಗಳೂ ...ಮಾನಿಕರೂ ಅದಕ್ಕೆ ಸಂಬಂಧಿಸಿದ ನೆಲ ...ಬಂದಿಯೂ ಸಿದ್ಧವಾಗಿರುವಂತೆ ನೋಡಿಕೊಳ್ಳ...ಬೇಕಾಗುತ್ತದೆ. ಆದುದರಿಂದ ಸೈನಿಕ ...ಂಗದ ಪತ್ರಿಕೆಯ ಅಂಕೆಗಳನ್ನು ಹೇಳಿಸದೆ ... ನಷ್ಟದ ಭರತಿಗಾಗಿ ಸರಕಾರ ಉಂಬಳಿ ...ಡಬೇಕಾಗುವದು. ಇದಕ್ಕೆ ಟಪಾಲು ದರ...ಳನ್ನು ಹೆಚ್ಚಿಸಿ ಎಲ್ಲ ಪತ್ರಗಳನ್ನೂ ವಿಮಾನ ...ಮೂಲಕ ಕಳಿಸಲಾಗುವದೆಂದು ನಟನೆ ಮಾಡು...ದಕ್ಕಿಂತ ಸುಲಭವಾದ ಉಪಾಯವಾವುದು? ... ಹೆಚ್ಚಿದ ಟಪಾಲು ದರಗಳೆಂದರೆ, ಮನಸಿ...ಲಿ ಇಲ್ಲದಿರಲಿ, ನಮ್ಮ ಯುದ್ಧಸನ್ನದ್ಧತೆ...ಗಿ ಕೊಡುವ ಕರವೇ ಸರಿ.

— ಜೆ. ಸಿ. ಕು.

...ಪಾಲು ಕಾರ್ಡು ಕವರುಗಳಲ್ಲಿ ...ಳಿತಾಯ

ಆದರೆ ಯುದ್ಧ ಸನ್ನದ್ಧತೆಯನ್ನು ಯಥಾ...ತ್ವಾಗಿ ಉಳಿಸಿಕೊಂಡೂ ಅರ್ಧಾಣೆ ಕಾರ್ಡು, ...ಂದೂವರೆ ಆಣೆ ಪಾಕೀಟುಗಳ ಸೌಕರ್ಯವನ್ನು ...ಸಿದುಕೊಳ್ಳದೆ ಇದರಲ್ಲಿ ಉಳಿತಾಯ ...ಡುವ ಉಪಾಯಗಳಿದ್ದವು. ವಿಕ್ಟೋರಿಯಾ ...ಣಿಯ ಕಾಲದ ಒಂದು ಬಿಲ್ಲೆಯ ಕಾರ್ಡಿ...ನ ಕಾರ್ಡಿನ ಆಕಾರವನ್ನು ಕಡಿಮೆ ಮಾಡ...ಬಹುದಾಗಿತ್ತು. ಇಲ್ಲವೆ ಎರಡೂ ಪಕ್ಕಗಳಲ್ಲಿ ...ರೆಯುವದನ್ನು ನಿಲ್ಲಿಸಿಬಿಡಬಹುದಾಗಿತ್ತು. ...ದೇ ಪ್ರಕಾರ ಈಗಿನ ವಿಮಾನ ಅಂಚೆಯ ...ತ್ರಗಳಂಥ ಕಾಲು ಪುಟದ ಪತ್ರಗಳನ್ನು ಬಳ...ಗೆ ತಂದು ಅವುಗಳಿಗೆ ಐದು ಬಿಲ್ಲೆ ಗೊತ್ತು...ಡಿಸಿ, ಪಾಕೀಟುಗಳಿಗೆ ಎರಡಾಣೆಯಿಡಬಹು...ದಾಗಿತ್ತು. ಇದರಿಂದ ಬಡವರಿಗೆ ಉಪಕಾರ...ವಾಗಿ ಹೆಚ್ಚಿದ ದರಗಳು ಅವರಿಗೆ ಭಾರವೆನಿಸ...ದಂತಾಗುತ್ತಿತ್ತು. ನಿಜವಾಗಿ ಭಾರವಾದ ...ತ್ರಗಳ ಮೇಲೆ ಪ್ರತಿ ೧ ಅಥವಾ ೦। ತೊಲೆಗೆ ...ಬಿಲ್ಲೆ ದರ ಹಚ್ಚಿದ್ದರೆ ಕೂಡ ಅವರಿಗೆ ...ಅಂದರೆಯಾಗುತ್ತಿದ್ದಿಲ್ಲ.

...ಲಕ್ಷ ಲಕ್ಷಾಂತರ ಜನರ ಪತ್ರಗಳು ವಿಮಾನ...ದ ಮೂಲಕ ಎಂದೂ ಹೋಗಲಾರವು, ಹಾಗೆ ...ಹೋಗುವ ಅವಶ್ಯಕತೆಯೂ ಅವರಿಗಿಲ್ಲ. ...ದರೆ ಅವರ ಮನೆವೆಚ್ಚದಲ್ಲಿ ಸ್ವಲ್ಪವಾದರೂ ...ಳಿತಾಯವಾದರೆ ಅವರಿಗೆ ಕ್ಷೇಮವೂ ...ಂತೋಷವೂ ಆಗುತ್ತದೆ. ನಿಜವಾಗಿ ನೋಡಿ...ದರೆ, ಅರ್ಧ ದಾರಿ ವಿಮಾನ ಅರ್ಧದಾರಿ ರೇಲು ...ಮೂಲಕ ಟಪಾಲು ಹೋಗುವ ಸ್ಥಳಗಳಲ್ಲೆಲ್ಲ ...ದಾ ಟಪಾಲಿಗಿಂತಲೂ ವಿಮಾನ ಟಪಾಲು ...ದವಾಗಿಯೇ ಹೋಗುತ್ತದೆ. ಅಂಥ ಸ್ಥಳ...ಳು ನೂರುಗಟ್ಟಳೆ ಇದ್ದರೆ ವಿಮಾನ ನಿಲ್ದಾಣ...ವುಳ್ಳ ಸ್ಥಳಗಳ ಸಂಖ್ಯೆ ಇಪ್ಪತ್ತೈದು ಕೂಡ ...ಲ್ಲ!

...ಪಾಲು ಕಾರ್ಡಿನ ಬೆಲೆ

ಆದರೆ ಸರಕಾರದ ಮೇಲೆ ಇನ್ನೂ ಗಂಭೀರ...ವ ಆರೋಪವೊಂದಿದೆ- ಸರಕಾರಕ್ಕೆ ಟಪಾಲು ...ಕಾರ್ಡು ತಯಾರಿಸಲು ಪ್ರತಿಯೊಂದಕ್ಕೆ ೮.೨ ...ಪೈಯಂತೆ ವೆಚ್ಚ ಬೀಳುವದೆಂದು ಸರಕಾರದ ...ರವಾಗಿ ಹೇಳಲಾಯಿತೆಂದು ವರದಿಯಾಗಿದೆ. ...ದರ ಅರ್ಥ ಅರ್ಧಾಣೆಯ ಕಾರ್ಡುಗಳಿಂದ್ಲಾಗ ...ರ್ಕಾರಕ್ಕೆ ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ...ಹಾನಿಯಾಗುತ್ತಿರಬೇಕೆಂದಾಗುವದು.

...ಲೋಕ್ಯಾಚಾರಸ್ಥನಾದ ಒಬ್ಬ ಟೀಕಾಕಾರನು ...ದರ ಬಗ್ಗೆ ಹೀಗೆ ಉದ್ಗಾರ ತೆಗೆದಿದ್ದಾನೆ: ...ಕಾರ್ಡಿನ) "ಕಾಗದದ ಬೆಲೆ ಮತ್ತು ಮುದ್ರಣ ವೆಚ್ಚ ೮.೨ ಪೈಗಳಷ್ಟಾಗುವದಾದರೆ ಸರಕಾರದ ಮುದ್ರಣಾಲಯವನ್ನು ನಡೆಸುವ ಜನರು ಮನೆಗೆ ಕಳಿಸಲ್ಪಡಲು ಅರ್ಹರಾಗಿದ್ದಾರೆಂಬ ನನ್ನ ಅಭಿಪ್ರಾಯ." ಅವನು ಮುಂಬಯಿಯಲ್ಲಿ ಮೂರು ನಾಲ್ಕು ಮುದ್ರಣಾಲಯಗಳಲ್ಲಿ ವಿಚಾರಿಸಿದನು. ಕಾರ್ಡಿನ ಒಟ್ಟು ಬೆಲೆ ಬಹಳಾದರೆ ೨ ಪೈ ಮೀರಲಾರದೆಂದು ಅವನಿಗೆ ತಿಳಿಯಿತು. ಬಹಳ ಪ್ರಮಾಣದಲ್ಲಿ ತಯಾರು ಮಾಡುವಾಗ ಅದರ ಬೆಲೆ ಒಂದು ಪೈಗಿಂತ ಹೆಚ್ಚಾಗಲಾರದು. ನಾನು ವಿಚಾರಿಸಿದಾಗಲೂ ಇದೇ ಪರಿಣಾಮ ಸಿದ್ಧವಾಯಿತು. ಮೂಲ ಬೆಲೆ .೮೨ ಪೈ ಆಗಿರಬೇಕಲ್ಲದೆ ೮.೨ ಪೈಯಾಗಲಾರದು—ದಶಾಂಶ ಚಿಹ್ನ ಒಂದು ಸ್ಥಾನ ಹಿಂದೆ ಬಿದ್ದಿರಬೇಕೆಂದು ಊಹಿಸಲೆಡೆಯದೆ!

ಕಾರ್ಡಿನ ಬೆಲೆ ೮.೨ ಪೈ ಹೇಗಾಯಿತೆಂದೂ ಅದನ್ನು ಸರಕಾರ ಹೇಗೆ ಒಪ್ಪಿಕೊಂಡಿತೆಂದೂ ವಿವರಣೆ ಕೊಡುವದು ಸರಕಾರದ ಮತ್ತು ಶಾಸನ ಸಭಾಸದರ ಕರ್ತವ್ಯ. ಅದರಲ್ಲೇನಾದರೂ ತಪ್ಪಾಗಿದ್ದರೆ ಕ್ಷಮಾಪಣೆ ಕೇಳಿ ಅವರು ಪರಿಹಾರಕೊಡಬೇಕು.

ವರ್ಧಾ — ಕಿ. ಘ. ಮ.
೨೧-೪-೪೯

ಲಂಚಗುಳಿತನವನ್ನು ಹತ್ತಿಕ್ಕುವದು

ಜನವರಿ ೯, ೧೯೪೯ ರ "ಹರಿಜನ"ದಲ್ಲಿ (ಕರ್ಮವೀರ, ೧೫-೧-೪೯) "ಭ್ರಷ್ಟಾಚಾರದ ಕಾಂಡವು" ಎಂಬ ಲೇಖವನ್ನೋದಿ ಕುಂಟ ವ್ಯಥೆಪಟ್ಟೆ. ಬೇರೆ ಜನರಿಂದಲೂ ಅಂಥವೇ ಸುದ್ದಿಗಳು ನನಗೆ ತಲುಪುತ್ತಿವೆ. ಅದರಿಂದನನ್ನ ಮನಸಿನಲ್ಲಿ ಉತ್ಪನ್ನವಾದವಿಚಾರತರಂಗಗಳನ್ನು "ಹರಿಜನ"ದ ಓದುಗರ ಮುಂದಿಡಬಯಸು ತ್ತೇನೆ. ಪೇದೆಗಳು, ಶಿರಸ್ತೇದಾರರೇ ಮೊದಲಾದವರಲ್ಲಿರುವ ಲಂಚಗುಳಿತನವಾದರೂ ಅಷ್ಟು ಮನನೋಯಿಸುವದಿಲ್ಲ. ಆದರೆ ಈ ಭ್ರಷ್ಟಾಚಾರ ಅದಕ್ಕಿಂತಲೂ ಆಳವಾಗಿ ಬೇರು ಬಿಟ್ಟದ್ದನ್ನು ನೋಡಿ ವಿಷಾದವಾಗುತ್ತದೆ. ಪೇದೆಗಳಿಗಾದರೂ ಲಂಚವನ್ನಾಶ್ರಯಿಸಲು ಒಂದು ನೆವವಿದೆ—ಅವರಿಗೆ ದೊರೆಯುವ ಸಂಬಳದಲ್ಲಿ ಘನತೆಯಿಂದ ಜೀವನ ಮಾಡುವದು—ಏಕೆ ಹೇಗಾದರೂ ಜೀವನ ಮಾಡುವದೇ- ಸಾಧ್ಯವಿಲ್ಲ. ಅವರಿಗೆ ಬೇರೆ ಉತ್ಪನ್ನದ ಸಾಧನಗಳು—ಅವೇನೇ ಇರಲಿ—ಬೇಕೇ ಬೇಕು. ಲಂಚಗುಳಿತನವನ್ನು ದೂರ ಮಾಡಬೇಕಾದರೆ ನಾವು ಅದರ ಮೂಲವನ್ನು ಶೋಧಿಸಬೇಕು. ಕೆಳವಟ್ಟದ ಜನರಿಗೆ ಸಿಗುವದು ನಿಜವಾಗಿ ತೀರ ಕಡಿಮೆಯಾಯಿತು. ಆದರೆ ಶಿಖರದ ಸಮಸಮೀಪದಲ್ಲಿರುವವನು ಕೂಡ ತನಗೆ ಸಿಗುವದು ತೀರ ಕಡಿಮೆಯಾಯಿತೆಂದು ದೂರಿಕೊಳ್ಳುತ್ತಿದ್ದಾನೆ! ಅತಿ ಹೆಚ್ಚು ಸಂಬಳದವರಲ್ಲಿ ಕೆಲವರು ತಮಗೆ ಸಿಗುವದರಲ್ಲಿ ದಿನ ದೂಡುವದೇ ಕಠಿಣವಾಗಿದೆಯೆಂದು ಹೇಳುವದನ್ನು ಕೇಳಿ ನಾನು ವಿಸ್ಮಿತನಾಗಿದ್ದೇನೆ. ಇದಕ್ಕೆ ಕಾರಣವಿಷ್ಟೆ: ಈ ಜನರು ನಮ್ಮ ದೇಶದಕ್ಕಿಂತ ೨೦೦ ಪಾಲು ತಲಾ ಉತ್ಪನ್ನವುಳ್ಳ ಇತರ ದೇಶಗಳಲ್ಲಿ ತಮಗೆ ಸಮಾನವಾದ ಹುದ್ದೆಗಳಲ್ಲಿರುವವರೊಡನೆ ತಮ್ಮನ್ನು ಹೋಲಿಸಿಕೊಳ್ಳುತ್ತಾರೆ. ಅವರ ರೀತಿ ನೀತಿಗಳನ್ನು ಅನುಕರಿಸಲು, ಅವರಂತೆಯೆ ಸತ್ಕಾರಕೂಟ, ಮದ್ಯಪಾನ ಕೂಟಗಳೇ ಮೊದಲಾದವನ್ನು ಏರ್ಪಡಿಸಲು ಪ್ರಯತ್ನಿಸುತ್ತಾರೆ. ಈ ಜನರು ಹೆಚ್ಚು ವಾಚಾಲರಾಗಿದ್ದು ತಮ್ಮ ಕೂಗನ್ನು ಮೇಲಿನವರ ಕಿವಿ ವರೆಗೆ ಮುಟ್ಟಿಸಬಲ್ಲರಾದುದರಿಂದ ಅವರಿಗೆ ಬಢತಿ ಕೂಡ ಸಿಗಬಹುದು. ಆದರೆ ಕೆಳದರ್ಜೆಯಲ್ಲಿರುವವನನ್ನು ಮಾತ್ರ ಕೇಳುವವರೇ ಇಲ್ಲ. ಅಂತೂ ಯಾರೂ ಮೇಲ್ಪಟ್ಟದವರ ಸಂಬಳಕ್ಕೆ ಕೈಹಚ್ಚಲೆಳಸುವದಿಲ್ಲ. ಇಷ್ಟು ದೊಡ್ಡ ಸಂಬಳವಿದ್ದೂ ಲಂಚಕ್ಕೆ ಸಮಾನವಾದ ಪರಿಸ್ಥಿತಿಯ ಪ್ರಯೋಜನಗಳನ್ನು ಪಡೆಯಲು- ಅದು ಶುದ್ಧ ಲಂಚವಲ್ಲದಿದ್ದರೂ— ಅನೇಕ ಉಚ್ಚಾಧಿಕಾರಿಗಳು ಹೇಸುವದಿಲ್ಲ. ಶುದ್ಧ ಲಂಚವನ್ನು ಹಣರೂಪದಲ್ಲೇ ಕೂಡ ಸ್ವೀಕರಿಸುವ ಅಧಿಕಾರಿಗಳೂ ಇದ್ದಾರೆಂದು ಕೇಳುತ್ತೇನೆ. ಹೊಣೆಯರಿಯದ ಅಧಿಕಾರಿಗಳಂತೂ ಎಲ್ಲ ಶ್ರೇಣಿಗಳಲ್ಲೂ ಇದ್ದಾರೆ. ಎರಡು ಮೂಲಭೂತ ಗುಣಗಳಾದ ಸಚ್ಚಾರಿತ್ರ-ಪ್ರಾಮಾಣಿಕತೆಗಳನ್ನೂ ಹೊಣೆ ಮತ್ತು ಕರ್ತವ್ಯಬುದ್ಧಿಯನ್ನೂ ಬೆಳಸಿಕೊಳ್ಳಲು ನಾವು ಏನಾದರೂ ಮಾಡದೆಹೋದರೆ ಎಲ್ಲಿಗೆ ಹೋಗಿ ಮುಟ್ಟುವೆವೋ ನಿಯಮವಿಲ್ಲ. ಮೇಲ್ಮಟ್ಟ ಕೆಳಮಟ್ಟಗಳ ಅಂತರವನ್ನು ಸ್ವಲ್ಪಮಟ್ಟಿಗೆ ಹುಗಿಸುವದಲ್ಲದೆ ಬೇರೆ ಹಾದಿಯಿಲ್ಲೆಂದು ನನಗನಿಸುತ್ತದೆ. ನಾವು ಉತ್ಪಾದನೆಯನ್ನು ಹೆಚ್ಚಿಸಬೇಕು, ನಿಜ. ಆದರೆ ಆ ವರೆಗೆ ನಾವು ಕೊರತೆಯನ್ನು ಹಂಚಿಕೊಳ್ಳಬೇಕು, ಮತ್ತು ಸ್ವೇಚ್ಛೆಯಿಂದ ಹಂಚಿಕೊಳ್ಳಬೇಕು. ಅದೀಗ ಬಾಪುವಿನ ಮಾರ್ಗ, ತಪ್ಪಿದರೆ ನಾವು ಕಮ್ಯುನಿಝಂ-ಅಂದರೆ ಹಿಂಸಾತ್ಮಕ ವಿಪ್ಲವದ ಅನ್ಯಾಯಕ್ಕೊಳಗಾಗಿ ಹಂಚಿಕೊಳ್ಳಬೇಕಾಗುತ್ತದೆ. ಲಂಚ, ಬಡತನ, ಅಸಂತೋಷಗಳು ಹಿಂಸಾತ್ಮಕ ಕ್ರಾಂತಿಗೆ ಬಹಳ ಹುಲುಸಾದ ಕ್ಷೇತ್ರ. ನಮ್ಮ ಮುಂದಾಳುಗಳು ಬಾಪುವಿನ ತತ್ವಗಳ ಮೂರ್ತಿಮಂತ ನಿದರ್ಶನಗಳನ್ನು ತೋರಿಸಲು ಪ್ರಯತ್ನಿಸದೆ ಹೋದರೆ ಹಿಂದುಸ್ತಾನವೂ ಚೀನದ ದಾರಿ ಹಿಡಿಯುವದು. ಇದನ್ನು ತಡೆಯಬಲ್ಲವರು ಯಾರೂ ಇಲ್ಲ. ವಿಚಾರಗಳನ್ನು ಬಲಪ್ರಯೋಗದಿಂದ ಎದುರಿಸುವದು ಅಸಾಧ್ಯ. ಅವುಗಳನ್ನು ಇನ್ನೂ ಶ್ರೇಷ್ಠವಾದ ವಿಚಾರಗಳಿಂದಲೂ ಆಚಾರಸುಧಾರಣೆಯಿಂದಲೂ ಮಾತ್ರ ಎದುರಿಸಬಹುದು. ಬಾಪು ನಮಗೆ ಕೊಟ್ಟದ್ದಕ್ಕಿಂತ ಉತ್ತಮವಾದುದು ಬೇರೇನು ಇರಬಲ್ಲದು? ಬಾಪು ಇಲ್ಲಿ ಇಷ್ಟೆಲ್ಲ ಮಾಡಿ ಹೋದ ನಂತರವೂ ಭಾರತವನ್ನು ಕಮ್ಯುನಿಝಂ ಆಕ್ರಮಿಸುವಂತಾದರೆ ಅದಕ್ಕಿಂತ ದೊಡ್ಡ ದುರ್ಭಾಗ್ಯವೇನಿದ್ದೀತು? ಅದರೂ ಪರಿಸ್ಥಿತಿಯಲ್ಲಿ ಶೀಘ್ರವಾಗಿ ಮತ್ತು ತೀವ್ರವಾಗಿ ಬದಲಾವಣೆಯಾಗದಿದ್ದರೆ ಕಮ್ಯುನಿಜಂ ಅನಿವಾರ್ಯವೇ ಆಗುವದು. ಕಮ್ಯುನಿಜಂನಿಂದ ಭಾರತಕ್ಕೆ ಗಂಡಾಂತರವಿಲ್ಲೆಂದು ಅಲಕ್ಷ್ಯದಿಂದ ಹೇಳೋಣ ಬೇಡ. ಸ್ಥಿತಿಗತಿ ಹೀಗೆಯೆ ಉಳಿದರೆ ಅದು ನಿಜವಾದ ಗಂಡಾಂತರವೇ ಆಗುವದು.

— ಸು. ಪ.

ಡಾಲ್ಟಿಮೋರ
(ಅಮೇರಿಕಾ)
೧೧-೩-೪೯

[ಸೂಚನೆ- ಮೇಲಿನದಕ್ಕೆ ನಾನೊಂದು ಎಚ್ಚರದ ಮಾತನ್ನು ಜೋಡಿಸಬಯಸುತ್ತೇನೆ. ಪೇದೆಗಳಾಗಲಿ, ಶಿರಸ್ತೇದಾರರಾಗಲಿ, ಮತ್ತಾವ ಸಾರ್ವಜನಿಕ ಸೇವಕರೇ ಆಗಲಿ, ಅವರ ಸಂಬಳ ಕಡಿಮೆಯಾಗಿರಲಿ ಅನುದಾರವಾಗಿರಲಿ, ತಮ್ಮ ಮಟ್ಟಿಗೆ ಲಂಚ ಭಕ್ಷೀಸುಗಳನ್ನು ಪಡೆಯುವದು ಕ್ಷಮ್ಯವೆಂದು ಬಗೆಯದಿರಲಿ. ಅದೊಂದು ಅಪಾಯಕರ ಹೇತ್ವಾಭಾಸ. ಅದರಿಂದ ಮನುಷ್ಯನು ಆತ್ಮಾಪಮಾನ ಮತ್ತು ಆತ್ಮಪರಿವೇದನೆಯ ದಾರಿ ಹಿಡಿಯುತ್ತಾನೆ. ಜೀವನದ ಮಟ್ಟ ಏರುವದು ಅವಶ್ಯವೆಂಬ ಮಾತು ಸರ್ವತ್ರ ಅಂಗೀಕೃತವಾಗಿದೆ. ಆದರೆ ಜೀವನದಮಟ್ಟ ಸಾಕಷ್ಟು ಏರಿಕೆಯಿಲ್ಲದಿರುವುದೇ ಅವ-ಮಾನವಾವಸ್ಥೆಯಲ್ಲ. ಪ್ರಾಮಾಣಿಕತೆಯೇ ಮೊದಲಾದ ಶ್ರೇಷ್ಠ ಚರಿತ್ರಗಳು ಮನುಷ್ಯ ಸಹಜ; ಅಪ್ರಾಮಾಣಿಕತೆ, ಮರೆಮೋಸ, ಸ್ವಾರ್ಥವೇ ಮೊದಲಾದವು ಅವ-ಮಾನವ ಅಥವಾ ಜನಾವರ ಗುಣಗಳು. ಸದ್ಗುಣ ತನ್ನಲ್ಲಿ ತಾನೇ ಸಾರ್ಥಕವಾಗುತ್ತದೆ. ಅದು ಬರಿ ಐಹಿಕ ಸುಖಕ್ಕೆ ಸಾಧನವಾದೊಂದು ಧೋರಣವಲ್ಲ. ಅದು ಪ್ರತಿಭೆಗಾಗಲಿ ಆರ್ಥಿಕ ಸಾಮಾಜಿಕ ಸ್ಥಾನಮಾನಗಳಿಗಾಗಲಿ ಅಧೀನವಲ್ಲ. ಒಬ್ಬ ಹೈಕೋರ್ಟ ನ್ಯಾಯಾಧೀಶನು ಕುಡುಕನಾಗಿರಬಹುದು, ಲಂಚಗುಳಿಯಾಗಿರಬಹುದು. ಆವನ ಬಡ ಪೇದೆಯೋ ಶಿರಸ್ತೇದಾರನೋ ಈ ದುರ್ಗುಣಗಳಿಂದ ನಿರ್ಲಿಪ್ತನಾಗಿರಬಹುದು. ಸ್ವಕಾರ್ಯಧುರಂಧರ ಜಗತ್ತು ನ್ಯಾಯಾಧೀಶನಿಗೆ ತೋರಿಕೆಯ ಗೌರವ ಕೊಡಬಹುದು. ಆದರೆ ಪ್ರಾಮಾಣಿಕ ಪೇದೆ ಅಥವಾ ಶಿರಸ್ತೇದಾರನು ಅನುಭವಿಸುವ ಅಂತರಿಕ ಶಾಂತಿ ಘನತೆಗಳು ನ್ಯಾಯಾಧೀಶನಿಗೆ ಅಲಭ್ಯವಾಗುವವು. ಸ್ವತಃ ಆ ನ್ಯಾಯಾಧೀಶನಿಗೆ ತನ್ನ ಪ್ರಾಮಾಣಿಕ ಅಧೀನ ಜನರ ಮುಂದೆ ತನ್ನ ಕೀಳ್ಮೆ ಮನಸಿಗೆ ಒತ್ತುತ್ತಲೆ ಇರುವದು. ಅವನು ಹೇಡಿಯಾಗಿದ್ದರಂತೂ ಗಾಂಧೀಜಿಯಲ್ಲಿದ್ದ ಅಪಾರ ಸಜ್ಜನಿಕೆಯಿಂದ ಭೀತನಾಗಿ ಅವರನ್ನೆ ಕೊಂದ ಹಿಂದೂ ಜಾತ್ಯಂಧನಂತೆ ತನ್ನ ಪ್ರಾಮಾಣಿಕ ಪರಿಜನರನ್ನು ದೂರೀಕರಿಸಲು ಕೂಡ ಪ್ರಯತ್ನಿಸಬಹುದು.

ಮೇಲ್ಮಟ್ಟದಲ್ಲಿ ಪ್ರಾರಂಭವಾಗುವ ವರೆಗೆ ನೈತಿಕ ಸುಧಾರಣೆ ತಡೆಯಬೇಕೆಂದು ಬಗೆಯುವದು ತಪ್ಪು. ಎಷ್ಟೋವೇಳೆ, ಬದಲಾವಣೆ ಕೆಳಮಟ್ಟದಲ್ಲೇ ಪ್ರಾರಂಭವಾಗಿ ಮುಂದೆ ಇಡಿ ಸಮಾಜವನ್ನೇ ಆವರಿಸುತ್ತದೆ. ಮೇಲ್ಮಟ್ಟದವರ ಹೃದಯಪರಿವರ್ತನೆ, ಕೊನೆಗೆ ನಿರುಪಾಯವಾಗಿಯೋ ಸ್ವೈಜವಾಗಿಯೊ ಆಗಿರುತ್ತದೆ. ಸಮಾಜದಲ್ಲಿನ ನಮ್ಮ ಸ್ಥಿತಿಯೇನೇ ಇರಲಿ, ನಮಗಿರುವ ಅಡಚಣಿಗಳೇನೇ ಇರಲಿ, ನಾವು ಉನ್ನತವಾದ ನೈತಿಕ ಮಟ್ಟವನ್ನು ಆಶ್ರಯಿಸಬೇಕು.

ವರ್ಧಾ ೨೯-೩-೪೯ — ಕಿ. ಘ. ಮ.]

ವ್ಯಾಪಾರಲೋಕ

ಮುಂಬಯಿ ಶೇರಪೇಟೆ

ತಾ. ೨೧

ಹಣದ ಪೇಟೆಯ ಮುಗ್ಗಟ್ಟು ಯಥಾಪ್ರಕಾರ ಉಳಿದಿದೆ ಟಾಟಾ ಸ್ಟೀಲ, ಮೊದಲಾದ ಉಕ್ಕು ಕಬ್ಬಿಣದ ಪಾಲುಗಳು ಕೆಳಗಿಳಿಯುತ್ತಲೇ ಹೋದವು. ಟಾಟಾ ಡೆಫರ್ಡಗಳು ೧೩೭೦ ರ ವರೆಗೂ ಇಳಿದಿದ್ದವು. ಜವಳಿ ಪಾಲುಗಳಲ್ಲಿಯೂ ಸುಧಾರಣೆ ಬಹಳ ಇಲ್ಲ. ಇಂದಿನ ಬೆಲೆಗಳು ಇಂತಿದ್ದವು.

ಡಾಯಿಂಗ್	೯೩೭-೮-೦
ಕೋಹಿನೂರು	೨೮೩-೦-೦
ಸ್ವದೇಶಿ	೩೦೧-೦-೦
ಸಿಂಧ್ಯ ಸ್ಟೀಮ್	೧೪-೯-೦
ಗೋಕಾಕ	೨೭೦-೦-೦
ಸೆಂಚುರಿ	೫೧೦-೦-೦
ಸಿಂಪ್ಲೆಕ್ಸ	೧೭೭-೦-೦
ಟಾಟಾ ಸ್ಟೀಲ ಡೆಫರ್ಡ	೧೩೯೦-೦-೦
ಇಂಡಿಯನ್ ಅಯರ್ನ್	೨೨-೧೪-೦
ಅಸೋ ಸಿಮೆಂಟ	೧೩೭-೮-೦
ಸೆಂಟ್ರಲ ಬ್ಯಾಂಕ್	೮೨-೮-೦
ಇಂಪೀರಿಯಲ್ ಬ್ಯಾಂಕ್(ಪೂರ್ಣ)	೧೮೪೬-೪-೦
ಬ್ಯಾಂಕ ಆಫ್ ಇಂಡಿಯಾ	೧೮೫-೦-೦

ಚಿನ್ನ ಬೆಳ್ಳಿ

ಚಿನ್ನ ಬೆಳ್ಳಿ ಪೇಟೆಯಲ್ಲಿ ವ್ಯಾಪಾರ ಚನ್ನಾಗಿದ್ದು ಚಿನ್ನದ ಬೆಲೆ ೧೧೩ ರೂಪಾಯಿ ಮೇಲ್ಮಟ್ಟ ಹೋಗಿ ಇಂದು ಈ ಕೆಳಗಿನಂತೆ ಕೊನೆಗೊಂಡಿತು.

ಚಿನ್ನ ತಯಾರಿ	೧೧೨-೧೧-೦
,, ವಾಯದಾ	೧೧೦-೧೫-೦
ಬೆಳ್ಳಿ ತಯಾರಿ	೧೭೯ ೨-೦
ವಾಯದಾ	೧೭೦-೦-೦

ಅರಳೆ

ಪೇಟೆಯಲ್ಲಿ ಅಧಿಕೃತ ವ್ಯಾಪಾರವಿಲ್ಲ. ಹತ್ತಿ ಉತ್ಪತ್ತಿ ಕಡಿಮೆಯಾಗಿದ್ದು ಬೆಲೆಗಳು ನಿಯಂತ್ರಣಕ್ಕಿಂತ ಮೇಲೆಯೆ ಇವೆ. ಅನಧಿಕೃತ ದರಗಳು ಹೀಗಿವೆ.

ಮೇ	೬೨೫-೦-೦
ಜುಲೈ	೬೨೩-೮-೦
ಸೆಪ್ಟೆಂಬರ	೬೨೨-೮-೦

ಎಣ್ಣೆಕಾಳು

ಶೇಂಗಾ	೧೮೮-೧೨ ೦
ಅಗಸೆ (ತಯಾರಿ)	೩೦-೦-೦
,, (ಹೊಸ)	೨೯ ೧೩-೦
,, ಎಣ್ಣೆ	೧೮-೪-೦
ಔಡಲ	೨೭-೦-೦

ಶಿವಮೊಗ್ಗೆ

ತಾ. ೮

ದೇಶಾವರ ನಂ. ೧ (ಮಣಕ್ಕೆ)	೩೦-೩೩
,, ೨	೨೮-೩೦
ರಾಜಾ ಅಲವು	೨೮-೩೦
ಪೇಟೆನ್	೩೦-೩೪
ತೊರಸಾಲು	೨೬-೨೯
ಬೆಟ್ಟವಂತಿ	೧೬-೧೮
ಬೆಟ್ಟೆ	೧೫-೧೬

ವ್ಯಾಪಾರ ಚನ್ನಾಗಿದೆ.

ಹುಬ್ಬಳ್ಳಿ

ತಾ. ೧೩

ಜ. ಹತ್ತಿಕಾಳು	(೧ ರೂ. ಗೆ)		ವ್ಯಾಪಾರ ನಡೆದಿರುವದಿಲ್ಲ.
ಕುಸುಬಿ (ಬ. ಮಣಕ್ಕೆ)		೧೫.೪.೬	೧೫-೬-೦
ಅಗಸಿ	(ಚೀಲಕ್ಕೆ)	—	೩೯-೦-೦
ಔಡಲ	,,		೩೮-೦-೦
ಜ. ಹೆಸರು	,,	೪೨-೧೦-೮	೪೬-೮-೦
ಕರಿ ಎಳ್ಳು	,,		೬೪-೬೬
ಬಿಳಿ ಎಳ್ಳು	,,		೭೩
ಕಡಲೆ	,,		೫೬ ೫೮
ಜ. ತೊಗರಿ	,,		೨೮-೨೯
ಹುರಳಿ	,,		೩೫-೦-೦
ಕೆಂ. ಅಲಸಂದಿ	,,		೫೫-೫೬
ಬಿ. ಅಲಸಂದಿ	,,		೫೬-೦-೦
ಶೇಂಗಾ (ಹೇರು)			೪೮-೫೦
ಶೇಂಗಾ ಕಾಳು			೬೮-೬೯

(೧೩ ನೇ ಪುಟದಿಂದ)

ಪನೆಯಲ್ಲಿ ಉದ್ಯುಕ್ತರಾದರೆ ಹೆಚ್ಚಿದ ಸೈನಿಕ ವೆಚ್ಚವನ್ನು ಕೂಡ ನಾವು ಸಮರ್ಥಿಸಬಹುದು. ಆದುದರಿಂದ, ಸೈನ್ಯಾಧಿಕಾರಿಗಳು ತಮ್ಮ ಸೈನಿಕರನ್ನು ಕೃಷಿ ಶಾಖೆಯ ಸಹಕಾರದಿಂದ ಇಂಥ ವಿರಾಮವೇಳೆಯ ಒಕ್ಕಲತನದಲ್ಲಿ ತೊಡಗಿಸಲು ಒಪ್ಪುವರೆಂದೂ ಆ ಮೂಲಕ ದೇಶದ ಮಹಾಶತ್ರುವಾದ ಉಪವಾಸದ ದಾಳಿಯಿಂದ ನಮ್ಮನ್ನು ರಕ್ಷಿಸಲು ಸಮರ್ಥರಾಗಲೆಂದೂ ಹಾರೈಸೋಣ.

—ಜೆ. ಸಿ. ಕುಮಾರಪ್ಪ

ಸಮಸ್ತ ಭಾರತ

ಮುಂಬಯಿ

ಬಡೋದೆ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನಗೊಳಿಸಿದ್ದರ ವಿರುದ್ಧವಾಗಿ ಬಡೋದೆಯ ಹೈಕೋರ್ಟಿನಲ್ಲಿ ಬಡೋದೆ ಸಂಸ್ಥಾನ ಪ್ರಜಾ ಸಂಘದವರು ಖಟ್ಲೆಮಾಡ ತಕ್ಕವರಿರುವರು.

ಹಿಂದುಸ್ತಾನದ ಬಾಲಕರ ಬುದ್ಧಿ ಯುರೋಪದಲ್ಲಿಯ ಬಾಲಕರಿಗಿಂತ ತೀಕ್ಷ್ಣವಾಗಿದೆ. ಸರಕಾರವು ಮಕ್ಕಳ ಯೋಗಕ್ಷೇಮವನ್ನು ಚೆನ್ನಾಗಿ ನೋಡಿಕೊಳ್ಳುವಂತಾದರೆ ಹಿಂದುಸ್ತಾನದ ಭವಿಷ್ಯವು ಉಜ್ವಲವಾಗಿದೆ ಎಂದು ಜಗತ್ ಪ್ರಸಿದ್ಧ ಶಿಕ್ಷಣ ತಜ್ಞರಾದ ಡಾ. ಮೊಂಟಸರಿಯವರು ಇಟಲಿಗೆ ಹೋಗುವ ಮುನ್ನ ಮುಂಬಯಿಯಲ್ಲಿ ಭಾಷಣಮಾಡುತ್ತ ಹೇಳಿದರು.

ಕೊಲ್ಹಾಪುರದ ಹತ್ತಿರದ ವಾಲೇವಾಡಿ ನಿರಾಶ್ರಿತರ ಶಿಬಿರದಲ್ಲಿಯ ೩೦೦ ನಿರಾಶ್ರಿತರು ಪೋಲೀಸರ ಮೇಲೆ ದಾಳಿಮಾಡಿ ಕೆಲವರನ್ನು ಗಾಯಗೊಳಿಸಿದರು. ಪೋಲೀಸರು ಗೋಳೀಬಾರು ಮಾಡಬೇಕಾಯಿತು. ಇದರಿಂದ ನಿರಾಶ್ರಿತರಲ್ಲಿಯ ಕೆಲವರಿಗೆ ಗಾಯಗಳಾಗಿವೆ. ಗಾಯಾಳುಗಳನ್ನು ಅಸ್ಪತ್ರೆಗೆ ಸಾಗಿಸಲಾಗಿದೆ. ಪುಕ್ಕಟೆ ಅಹಾರ ಸೀದಾ ನಿಲ್ಲಿಸಿದ್ದನ್ನು ಪ್ರತಿಭಟಿಸಿ ನಿರಾಶ್ರಿತರು ಇಂತು ದೊಂಬಿಯೆಬ್ಬಿಸಿದರು.

ಕೊಲ್ಹಾಪುರ ಸಂಸ್ಥಾನವು ಮುಂಬಯಿ ಪ್ರಾಂತದಲ್ಲಿ ವಿಲೀನವಾಗಿದ್ದರಿಂದ ಅಲ್ಲಿ ಮುಂಬಯಿ ಗೃಹರಕ್ಷಕಕಾಯದೆಯನ್ನು ಅನ್ವಯಿಸಿ ಮೊದಲಿದ್ದ ಗೃಹರಕ್ಷಕ ದಳವನ್ನು ಪುನರ್ಘಟಿಸಲಾಗುವದು. ಅದರಂತೆ ಪೋಲೀಸಪಡೆಯನ್ನೂ ಪುನರ್ಘಟಿಸಲಾಗುವದು ಎಂದು ಕೊಲ್ಹಾಪುರ ಜಿಲ್ಹಾ ಪೋಲೀಸ ಸುಪರಿಂಟೆಂಡೆಂಟ ಎಫ ಡಿ ರೋಚರು ಹೇಳಿದರು.

ಹಿಂದುಸ್ತಾನ ಸರಕಾರವು ಪ್ರಾಂತಗಳ ಪೆಟ್ರೋಲ ಸೀದಾವನ್ನು ಹೆಚ್ಚಿಸಿರುವದರಿಂದ ಎಪ್ರಿಲ ಜೂನ ತ್ರೈಮಾಸಿಕ ಅವಧಿಯಲ್ಲಿ ಪ್ರಾಂತದಲ್ಲಿಯ ಆವಶ್ಯಕ ವಸ್ತುಗಳ ಸಾರಿಗೆ ವಾಹನಗಳ ಪೆಟ್ರೋಲ ಸೀದಾ ಹೆಚ್ಚಿಸಬಹುದಾಗಿದೆಯೆಂದು ಮುಂಬಯಿ ಸರಕಾರದ ಪತ್ರಿಕಾಪ್ರಕಟನೆಯಿಂದ ತಿಳಿಯುತ್ತದೆ.

ಭಾಷಾನ್ವಯ ಪ್ರಾಂತರಚನೆಯ ಸಂಬಂಧದಲ್ಲಿ ಕಾಂಗ್ರೆಸ ಕಾರ್ಯಸಮಿತಿಯು ತ್ರಿಮೂರ್ತಿ ವರದಿಯನ್ನು ಒಪ್ಪಿಕೊಂಡದ್ದರಿಂದ ಉಂಟಾದ ಪರಿಸ್ಥಿತಿಯನ್ನು ವಿಚಾರಿಸಲು ಮಹಾರಾಷ್ಟ್ರ ಪ್ರಾಂತೀಯ ಕಾಂಗ್ರೆಸ ಕಾರ್ಯಸಮಿತಿಯ ಸಭೆ ಮಹಾಬಳೇಶ್ವರದಲ್ಲಿ ಕಳೆದವಾರ ಸೇರಿತ್ತು. ಮುಂಬೈ ನಗರವನ್ನೊಳಗೊಂಡ ಸಂಯುಕ್ತ ಮಹಾರಾಷ್ಟ್ರ ಪ್ರಾಂತವನ್ನು ರಚಿಸಬೇಕೆಂಬ ಬಗ್ಗೆ ಕೂಲಂಕಷ ಚರ್ಚೆ ನಡೆದು ಅದೇ ಆಶಯದ ನಿರ್ಣಯ ಸ್ವೀಕೃತವಾಯಿತು.

ಕಾಳ್ಗಿಚ್ಚಿನಿಂದ ಡಾಂಗ ಜಿಲ್ಹೆಯೂ ಸಂಪೂರ್ಣವಾಗಿ ಹಾನಿಗೊಂಡಿದ್ದು ಮುಂಬಯಿ ಸರಕಾರದ ಅರಣ್ಯ ಮತ್ತು ಒಕ್ಕಲತನ ಮಂತ್ರಿ ಶ್ರೀ ಪಾಟೀಲ ಮಲ್ಲಿನಗೌಡರು ಅದನ್ನು ಸಂದರ್ಶಿಸಿ ಬಂದರು.

ಹಿಂದುಸ್ತಾನದಲ್ಲಿ ೧೫ ನೇ ಬಾನುಲಿ ಕೇಂದ್ರವು ಅಹಮದಾಬಾದಿನಲ್ಲಿ ೧೭ ನೇ ತಾರೀಕು ಪ್ರಾರಂಭವಾಯಿತು. ಸರದಾರ ವಲ್ಲಭಭಾಯಿ ಪಟೇಲ ಮತ್ತು ಮುಂಬಯಿ ಮುಖ್ಯಮಂತ್ರಿ ಶ್ರೀ ಖೇರರು ಸಂದೇಶ ಕಳಿಸಿದ್ದರು.

ಎಪ್ರಿಲ ೨ ಕ್ಕೆ ಮುಂಬಯಿ ಹೌರಾ ಮೇಲಿನಲ್ಲಿ ಕಳವಾದ ೧೨೩ ಸಾವಿರ ರೂಪಾಯಿ ಬೆಲೆಯ ಬಂಗಾರದಲ್ಲಿ ೫೫ ತೊಲಿ ಬಂಗಾರವನ್ನು ನಾಸಿಕ ಪೋಲೀಸರು ಪತ್ತೆಹಚ್ಚಿದ್ದಾರೆ ಈ ಸಂಬಂಧದಲ್ಲಿ ೮ ಜನರನ್ನು ಸೆರೆಹಿಡಿದಿದಾರ್ರೆ.

ಮಧ್ಯ ಮುಂಬಯಿಯಲ್ಲಿಯ ವ್ಯಾಪಾರದ ಕೇಂದ್ರವಾದ ಕಾಳಬಾದೇವಿಯಲ್ಲಿ ಒಂದು ಬಟ್ಟೆಯ ಅಂಗಡಿಯಲ್ಲಿ ೧೫ ನೇ ತಾರೀಕು ಬೆಳಿಗ್ಗೆ ನಾಲ್ವರು ತರುಣರು ಅಂಗಡಿಯನ್ನು ಪ್ರವೇಶಿಸಿ ಅಲ್ಲಿ ಕೆಲಸಮಾಡುತ್ತಿದ್ದ ಒಬ್ಬನೇ ಒಬ್ಬ ಗುಮಾಸ್ತನನ್ನು ಬಾಯಲ್ಲಿ ಚಂಡು ತುರುಕಿ ಕೈಕಾಲುಕಟ್ಟಿ ಕನ್ನಡಿ ಕಪಾಟನಲ್ಲಿ ಒಗೆದು ಗಲ್ಲೆಯಲ್ಲಿದ್ದ ೫೦೦ ರೂಪಾಯಿ ನಗದು ಹಣವನ್ನು ತೆಗೆದುಕೊಂಡು ಒಂದು ಕಾರಿನಲ್ಲಿ ಕುಳಿತು ಓಡಿಹೋದರು. ಗಾಯಗೊಂಡ ಗುಮಾಸ್ತನನ್ನು ಅಸ್ಪತ್ರೆಗೆ ಸಾಗಿಸಲಾಯಿತು.

ಮದರಾಸ

೧೯೪೮ ಫೆಬ್ರುಅರಿಯಿಂದ ೧೯೪೯ ಜನೆವರಿ ೩೧ ರ ವರೆಗಿನ ಅವಧಿಯಲ್ಲಿ ಒಟ್ಟು ೧೪ ಕಾಂಗ್ರೆಸ ಕಾರ್ಯಕರ್ತರನ್ನು ಕಮ್ಯುನಿಸ್ಟರು ಕೊಲೆ ಮಾಡಿದ್ದು ಅವರಲ್ಲಿ ೧೩ ಜನರು ಕೃಷ್ಣಾ ಜಿಲ್ಹೆಯವರು ಇನ್ನೊಬ್ಬರು ಮಲಬಾರ ಜಿಲ್ಹೆಯವರಿರುವರು. ಕೃಷ್ಣಾ ಜಿಲ್ಹೆಯ ಇನ್ನೇಳು ಕಾಂಗ್ರೆಸ ಕಾರ್ಯಕರ್ತರು ಕಣ್ಮರೆಯಾಗಿದ್ದು ಅವರು ಕೊಲ್ಲಲ್ಪಟ್ಟಿರಬಹುದೆಂದು ಸಂಶಯ. ಹೈದರಾಬಾದ ಸರಕಾರದ ಸಹಾಯದಿಂದ ಮದರಾಸ ಸರಕಾರವು ಪೋಲಿಸ ಕಾವಲನ್ನು ಬಿಗಿಪಡಿಸಿದೆ ಎಂದು ಮುಖ್ಯ ಮಂತ್ರಿ ಕುಮಾರಸ್ವಾಮಿಯವರು ಬರೆಹ ಮೂಲಕ ಮದ್ರಾಸ ಶಾಸನಸಭೆಯಲ್ಲಿ ತಿಳಿಸಿದರು.

ಮದರಾಸ ನಗರದ ರಾಜಬೀದಿಗಳಲ್ಲಿ ೮ ನೇ ಎಡ್ವರ್ಡ ೫ ನೇ ಜಾರ್ಜ ಮೊದಲಾದ ವಿದೇಶೀಯರ ಎಂಟು ಪುತ್ಥಳಿಗಳಿದ್ದು ಅವನ್ನು ಕಿತ್ತಿ ಹಾಕುವ ವಿಚಾರ ಸರಕಾರಕ್ಕೆ ಇಲ್ಲ ಎಂದು ಮಂತ್ರಿವರ್ಯ ಚಂದ್ರಮೌಳಿಯವರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಶಾಸನಸಭೆಯಲ್ಲಿ ಹೇಳಿದರು.

ಮದರಾಸದ ಮುಖ್ಯ ಮಂತ್ರಿಗಳು ತಮ್ಮ ಮಂತ್ರಿಮಂಡಲವನ್ನು ಹೆಚ್ಚು ಪ್ರಾತಿನಿಧಿಕ ಮಾಡಲು ಪ್ರಯತ್ನಿಸುತಿದ್ದಾರೆ. ಅವರು ನನ್ನ ಸಲಹೆ ಕೇಳಿದರೆ ನಾನು ಸಲಹೆ ನೀಡಬಹುದು ಎಂದು ಕಾಂಗ್ರೆಸ ಅಧ್ಯಕ್ಷ ಡಾ. ಪಟ್ಟಾಭಿಯವರು ಪತ್ರಿಕಾ ಸಂದರ್ಶನದಲ್ಲಿ ಹೇಳಿದರು. ಮದರಾಸು ಪಂಜಾಬದ ಅನುಕರಣವನ್ನು ಮಾಡಲಿ ಎಂದೂ ಅವರು ಹೇಳಿದರು.

ಜಾಹೀರಾತುಗಳಲ್ಲಿ ಧುರೀಣರ ಚಿತ್ರವಿರಕೂಡದು. ಬೀಡಿ ಜಾಹೀರಾತುಗಳಲ್ಲಿ ಧುರೀಣರ ಚಿತ್ರವಿದ್ದರೆ ಅವನ್ನು ಸ್ವೀಕರಿಸಬಾರದು ಎಂದು ಮಂತ್ರಿ ಸಂತಾನಂರು ಕೊಯಿಮುತ್ತೂರಲ್ಲಿ ಹೇಳಿದರು.

ಖಾಸಗಿ ದೇವಾಲಯಗಳಲ್ಲಿ ಮತ್ತು ವಿಶಿಷ್ಟ ವರ್ಗದ ಜನರಿಗೆ ಪ್ರವೇಶವಿರುವ ದೇವಾಲಯಗಳಲ್ಲಿ ಹರಿಜನರಿಗೆ ಮತ್ತು ಬಹಿಷ್ಕೃತ ಹಿಂದುಗಳಿಗೆ ಪ್ರವೇಶ ಕೊಡುವ ಮಸೂದೆ ಮದರಾಸ ಶಾಸನಸಭೆಯಲ್ಲಿ ಸ್ವೀಕೃತವಾಯಿತು.

ಅಖಿಲ ಭಾರತ ರೇಲ್ವೆ ಮಹಾಮಂಡಳದ ಕಾರ್ಯದರ್ಶಿಗಳಾದ ಶ್ರೀ ಎಸ್. ಗುರುಸ್ವಾಮಿಯವರು ರೇಲ್ವೆ ಮಂತ್ರಿ ಶ್ರೀ ಸಂತಾನಂ ಇವರನ್ನು ಮದರಾಸಿನಲ್ಲಿ ಕಂಡು ಅರ್ಧ ಗಂಟೆಯ ವರೆಗೆಮಾತುಕತೆಯಾಡಿದರು. ವೇತನವೈಚಿತ್ರ್ಯ ಸಮಿತಿಯ ಕಾರ್ಯವಿಧಾನ ಮತ್ತು ಅದರ ವರದಿಯನ್ನು ಕಾರ್ಯಕಾರಿ ಮಾಡುವ ಬಗ್ಗೆ ಹಾಗು ರೇಲ್ವೆ ಅಧಿಕಾರಿಗಳು ಮತ್ತು ನೋಕರರಲ್ಲಿಯ ತಂಟೆಯ ಬಗ್ಗೆ ಚರ್ಚೆ ನಡೆಯಿತು.

ಹಿಂದೀ ರೇಲ್ವೆಗಳ ರಾಷ್ಟ್ರೀಕರಣವು ಇಷ್ಟರಲ್ಲಿಯೆ ಪೂರ್ಣವಾಗುವದೆಂದು ಸಾರಿಗೆ ಮತ್ತು ರೇಲ್ವೆ ಮಂತ್ರಿಗಳಾದ ಶ್ರೀ ಕೆ. ಸಂತಾನಂ ಇವರು ಮದರಾಸಿನಲ್ಲಿ ಎಂ. ಎಸ್. ಎಂ. ರೇಲ್ವೆ ಅಧಿಕಾರಿಗಳನ್ನುದ್ದೇಶಿಸಿ ಭಾಷಣ ಮಾಡುತ್ತ ಹೇಳಿದರು.

ಮೂರನೇ ವರ್ಗದ ಪ್ರವಾಸಿಕರಿಗೆ ಹೆಚ್ಚಿನ ಸೌಕರ್ಯಗಳನ್ನೊದವಿಸಿ ಕೊಡುವದಕ್ಕಾಗಿ ಎಂ. ಎಸ್. ಎಂ. ರೇಲ್ವೆಯವರು ಮೂರು ವರುಷಗಳ ಯೋಜನೆಯೊಂದನ್ನು ಗೊತ್ತುಪಡಿಸಿದ್ದು ಈ ಯೋಜನೆಯ ಮೊದಲ ವರ್ಷದ ವೆಚ್ಚ ೨೫ ಲಕ್ಷ ರೂ. ಎಂದು ಅಂದಾಜ ಮಾಡಲಾಗಿದೆ. ವಿದ್ಯುತ್ತಿನ ಬೀಸಣಿಕೆಗಳು, ನೀರಿನ ಸೌಕರ್ಯ, ನೇಟಂಗರೂಮು, ಪ್ಲ್ಯಾಟಫಾರ್ಮಗಳಲ್ಲಿ ದೀಪ ಮುಂತಾದ ಯೋಜನೆ ಇವೆ.

ಬಿಹಾರ ಹರಿಜನ ಹಿತಾಭಿವೃದ್ಧಿ ಖಾತೆಯನ್ನು ಸ್ಥಾಪಿಸುವ ಉದ್ದೇಶದಿಂದ ಮದ್ರಾಸು ಪ್ರಾಂತದ ಹರಿಜನ ಕಾರ್ಯಕ್ರಮವನ್ನು ಪರಿಶೀಲಿಸಲು ಮಂಗಳೂರಿಗೆ ಬಂದಿದ್ದ ಪಾಟ್ನಾ ಪ್ರಾದೇಶಿಕ ಹಿತಚಿಂತನಾಧಿಕಾರಿ ಶ್ರೀ ಜಯದೇವದಾಸರು ಮಂಗಳೂರು ಮೂಡಬಿದ್ರಿ ಕಾರ್ಕಳಗಳಲ್ಲಿನ ಹರಿಜನ ಸಂಸ್ಥೆಗಳನ್ನೂ ನೋಡಿಕೊಂಡು ಹರಿಜನ ಕೆಲಸಗಾರರೊಂದಿಗೆ ವಿಚಾರವಿನಿಮಯ ಮಾಡಿಕೊಂಡು ಹೋದರು.

ಮಹಾತ್ಮಾ ಗಾಂಧಿಯವರ ಕೊಲೆಯ ನಂತರ ನರಸೋಬವಾಡಿಯಲ್ಲಿ ಆದ ಸುಲಿಗೆ ಮೊದಲಾದ ಆರೋಪಗಳಿಗಾಗಿ ನ್ಯಾ ಘಡಕರ ಇವರಲ್ಲಿ ಖಟ್ಲೆಯು ನಡೆದು ೨೫ ಜನರಿಗೆ ೧ ರಿಂದ ೨ ವರ್ಷಗಳ ವರೆಗೆ ಶಿಕ್ಷೆ ವಿಧಿಸಲಾಯಿತು.

ಹೊಸದಿಲ್ಲಿ

ರೇಲ್ವೆಗಳಲ್ಲಿ ಸರಕು ಸಾಗಿಸುವ ದರಗಳನ್ನು ಕುರಿತು ವಿಚಾರಿಸಲು ಇರುವ ರೇಲ್ವೆ ದರಗಳ ಮಂಡಲಕ್ಕೆ ನ್ಯಾ. ಲೋಕೂರರನ್ನು ಅಧ್ಯಕ್ಷರನ್ನಾಗಿ ಆರಿಸಿದೆ.

ವಿಸರ್ಜಿಸಲಾದ ವಿಂಧ್ಯಪ್ರದೇಶ ಕಾಂಗ್ರೆಸ ಸಮಿತಿಯ ಅಧಿಕಾರವನ್ನು ಅಖಿಲ ಭಾರತ ಕಾಂಗ್ರೆಸ ಸಮಿತಿಯು ವಹಿಸಿಕೊಳ್ಳುತಿದ್ದು ಇದಕ್ಕಾಗಿ ಅ. ಭಾ. ಕಾಂಗ್ರೆಸ ಸಮಿತಿಯ ಸಂಘಟಕ ಕಾರ್ಯದರ್ಶಿಗಳಾದ ಶ್ರೀ ಕೌಶಿಕರು ಅಧಿಕೃತರಾಗಿದ್ದು ಕಾಂಗ್ರೆಸ ಅಧ್ಯಕ್ಷರು ನೇಮಿಸಿದ ಅಡಹಾಕ ಕಮಿಟಿಯು ಅವರಿಗೆ ಸಹಾಯ ಮಾಡುವದು.

ಕೇಂದ್ರ ಸರಕಾರದವರು ನೇಮಿಸಿದ ವಿಶ್ವವಿದ್ಯಾಲಯ ಸಮಿತಿಯು ಸಪ್ಟಂಬರ ಮೊದಲನೇ ವಾರದಲ್ಲಿ ತನ್ನ ವರದಿಯನ್ನು ಒಪ್ಪಿಸುವದೆಂದು ತಿಳಿಯುತ್ತದೆ. ಇದೀಗ ಸಮಿತಿಯು ಭಾರತದಲ್ಲೆಲ್ಲ ಸಂಚರಿಸಿದ್ದು ಸಿಮುಲೆಗೆ ಹೋಗಿ ಅಲ್ಲಿ ವರದಿಯನ್ನು ಬರೆಯುವದು. ಡಾ. ರಾಧಾಕೃಷ್ಣನ್‌ರು ಈ ಸಮಿತಿಯ ಅಧ್ಯಕ್ಷರು.

ಹತ್ತು ವರುಷಗಳಲ್ಲಿ ಹತ್ತು ಲಕ್ಷ ಮನೆಗಳನ್ನು ಕಟ್ಟಬೇಕೆಂಬ ಯೋಜನೆಯನ್ನು ಸಫಲಗೊಳಿಸುವದಕ್ಕಾಗಿ ನೂತನಗೃಹ ನಿರ್ಮಾಣಕಾರ್ಯ ಕೂಡಲೆ ಪ್ರಾರಂಭವಾಗಬೇಕೆಂದು ಹಿಂದುಸ್ತಾನ ಸರಕಾರವು ಪ್ರಾಂತಗಳಿಗೆ ಯೋಜನೆಯೊಂದನ್ನು ಕಳಿಸಿದೆ ಎಂದು ತಿಳಿಯುತ್ತದೆ.

ಹೈದರಾಬಾದ

ಶ್ರೀ ವೆಂಕಟರಾವ ನಂದಗಿರಿ ಅಡ್ವೊಕೇಟ ಇವರು ಹೈದರಾಬಾದ ಉಸ್ಮಾನಿಯ ವಿಶ್ವವಿದ್ಯಾಲಯದ ಫೆಲೊ ಎಂದು ನಾಮಕರಣ ಹೊಂದಿದ್ದಾರೆ.

ಕನಿಷ್ಠ ೪೦ ರೂ. ಮಾಸಿಕವೇತನ ಕೊಡಬೇಕು ೫೦ ರೂ. ತುಟ್ಟಿಭತ್ತೆ ಕೊಡಬೇಕು ಮತ್ತು ತಾತ್ಪೂರ್ತಿಕವಾಗಿ ತೆಗೆದುಕೊಂಡ ಸುಮಾರು ೧೫೦೦ ಕೆಲಸಗಾರರನ್ನು ಕಾಯಂ ಮಾಡಿಕೊಳ್ಳಬೇಕು ಮುಂತಾಗಿ ಬೇಡಿಕೆಗಳನ್ನು ಮಂಡಿಸಿ ಹೈದರಾಬಾದದಲ್ಲಿಯ ಪಬ್ಲಿಕ್ ವರ್ಕ್ಸ್ ಖಾತೆಯ ವರ್ಕಶಾಪಿನ ಕೆಲಸಗಾರರು ೨೧ ದಿನಗಳ ಸಂಪಿನ ನೋಟೀಸು ಕೊಡಲು ನಿರ್ಧರಿಸಿದ್ದಾರೆ.

ಹೈದರಾಬಾದದಲ್ಲಿಯ ಜಾಗಿರದಾರರ ಹೊಲಗಳನ್ನು ಸರಕಾರವು ವಹಿಸಿಕೊಳ್ಳಲಿರುವದರಿಂದ ಜಾಗಿರದಾರರು ತಮ್ಮ ಹೊಲಗಳನ್ನು ಒತ್ತಿ ಹಾಕುವ ಇಲ್ಲವೆ ಮಾರುವ ಎತ್ತುಗಡೆಯಲ್ಲಿರುವರೆಂದು ಕಂಡುಬಂದದ್ದರಿಂದ ಸರಕಾರದವರು ಒಂದು ಅಜ್ಞೆಯನ್ನು ಹೊರಡಿಸಿ ತಮ್ಮ ಅಪ್ಪಣೆಯಿಲ್ಲದೆ ಹೊಲಗಳನ್ನು ಮಾರಬಾರದೆಂದು ವಿಧಿಸಿದ್ದಾರೆ.

ಹೈದರಾಬಾದ ಸರಕಾರದವರು ಗೋದಾವರಿ ನದಿಯ ಉತ್ತರ ದಿಕ್ಕಿಗೆ ಕಾಲುವೆ ತೋಡಿ ಅದಕ್ಕೆ ನದಿಯಿಂದ ನೀರು ಪಂಪುಮಾಡುವ ಯೋಜನೆಯೊಂದನ್ನು ಮಂಜೂರ ಮಾಡಿದ್ದಾರೆ. ಇದಕ್ಕೆ ೯೨೮ ಲಕ್ಷ ರೂಪಾಯಿ ವೆಚ್ಚ ಬರುವದೆಂದು ಅಂದಾಜಿದೆ. ಗೋದಾವರಿ ನದಿಯಿಂದ ನೀರಾವರಿ ಮತ್ತು ಜಲವಿದ್ಯುತ್ತಗಳನ್ನು ಕೈಕೊಳ್ಳಬೇಕೆಂದಿರುವ ಈ ಎಲ್ಲ ಯೋಜನೆಗೆ ಕೂಡಿ ೭೫ ಕೋಟಿ ರೂಪಾಯಿ ತಕ್ತಬಹುದೆಂದು ಅಂದಾಜು.

ಸಂಯುಕ್ತ ಪ್ರಾಂತ—ಬಿಹಾ[ರ]

ಬಿಂದಸದ ಕವಿಗಳಾದ ಶ್ರೀ ದಿ... ದರು ಮುಕ್ರದು ಮಹಾತ್ಮಾ ಗಾಂಧಿ... ಚರಿತ್ರೆಯನ್ನು ಅವಧಾಯಿ ಪದ... ಹಿಂದ ಕಾವ್ಯದಲ್ಲಿ ೧೫೦೦೦ ಪದ್ಯ... ಬರೆದಿದ್ದು ಅದರಲ್ಲಿ ೬೧ ಪ್ರಕರಣಗಳಿ... ಕಾವ್ಯ ಬರೆಯಲು ಅವರಿಗೆ ಎರಡು ವ... ಹಿಡಿಯಿತು. ಡಾ. ರಾಜೇಂದ್ರ ಪ್ರಸಾ... ಈ ಕಾವ್ಯಕ್ಕೆ ಮುನ್ನುಡಿ ಬರೆಯುವರು.

ಬಿಹಾರದ ಗವರ್ನರರಾದ ಶ್ರೀ ಮಾ... ರಾವ ಅಣೆಯವರ ತಪ್ಪಾಪಾರ್ಥ ಬಿಹ... ಬಾಗಿದ್ದ ತಪ್ಪಾದಕಾರದಲ್ಲಿ ... ಅಕ್ಕೆಯಲ್ಲಿ ಹೇಳಿದುದಕ್ಕಿಂತ ಹೆಚ್ಚು... ಗಳು ಆಮಂತ್ರಿಸಲ್ಪಟ್ಟದ್ದರಿಂದ ಅವರು... ರಲ್ಲಿ ಭಾಗವಹಿಸದೆ ಹೊರಟುಹೋ[ದರು] ... ಉಳಿದ ಪ್ರಮುಖ ಅಧಿಕಾರಿಗಳೂ ... ಭಾಗವಹಿಸದೆ ಹೊರಟುಹೋದರು.

ರಾಮಪುರದ ನವಾಬರು ಅಲೀಗಡ ... ವಿದ್ಯಾಲಯದ ಹೊಸ ಕುಲಪತಿಗಳಾಗಿ ... ಸಲ್ಪಟ್ಟರು. ಬರುವ ವರ್ಷದ ಅಂ... ಪತ್ರಿಕೆಯಲ್ಲಿ ೫೦ ಲಕ್ಷ ರೂಪಾಯಿಗಳ ಕೊ... ಇದ್ದು ಪ್ರಾಂತಿಕ ಮತ್ತು ಕೇಂದ್ರ ಸರಕಾ... ಸಹಾಯದಿಂದ ಈ ಕೊರತೆಯನ್ನು ತ... ಕೊಳ್ಳಲು ನಿರ್ಧರಿಸಲಾಗಿದೆ.

ನಾಗರೀ ಲಿಪಿಯ ಹಿಂದಿಯೇ ರಾಷ್ಟ್ರ... ಯಾಗಬೇಕು ಎಂದು ಶ್ರೀ ಕಮಲಾ... ತ್ರಿಪಾಠಿಯವರ ಅಧ್ಯಕ್ಷತೆಯಲ್ಲಿ ... ಸಂಯುಕ್ತಪ್ರಾಂತ ಹಿಂದೀ ಸಾಹಿತ್ಯ ಸ[ಮ್ಮೇ]ಲನದಲ್ಲಿ ನಿರ್ಣಯಿಸಲಾಯಿತು.

ಮಧ್ಯಪ್ರಾಂತ

ಜಬ್ಬಲಪುರದಲ್ಲಿ ವ್ಯಾಗನ್ ಕ್ಯಾ... ಫ್ಯಾಕ್ಟರಿಯಲ್ಲಿ ೧೭ ನೇ ತಾರೀಕು ಮುಂ... ಬೆಂಕಿಹತ್ತಿ ೫೦ ಸಾವಿರ ರೂಪಾಯಿ ... ಬಾಳುವ ಆಸ್ತಿ ನಾಶವಾಯಿತು. ... ಗಂಟೆಗಳ ವರೆಗೆ ಉರಿದ ನಂತರ ಬೆಂಕಿ ಹ... ದಲ್ಲಿ ಬಂದಿತು.

ಜಬ್ಬಲಪುರದಲ್ಲಿ ಹೊರನಾಡ ಕನ್ನಡ ಸಮ್ಮೇಲನ ಕಳೆದ ರವಿವಾರ ಹದಿನೇಳನೆ ತಾರೀಕು ಶ್ರೀ ನಾಡಿಗ ಕೃಷ್ಣಮೂರ್ತಿಯ... ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಮಂತ್ರಿ... ದ್ವಾರಕಾ ಪ್ರಸಾದ ಮಿಶ್ರರು ಪರಿಷತ್ತ... ಉದ್ಘಾಟಿಸಿ ಸೂಕ್ತವಾದ ಸಲಹೆಕೊಟ್ಟ... ಸಮಯೋಚಿತ ಗೊತ್ತುವಳಿ ಸ್ವೀಕೃತ... ವಿವಿಧ ಮನರಂಜನೆಗಳೊಂದಿಗೆ ಕಾರ್ಯಕ್ರ... ಕೊನೆಗಂಡಿತು.

“ಹಿಂದೂಕೋಡಿಗೆ ವಿರೋಧ ಪ್ರ... ಸುವ ಬಗ್ಗೆ ದಿನಾಂಕ ೬ ರಂದು ಪುತ್ತೂ... ಸಾರ್ವಜನಿಕ ಸಭೆಯೊಂದು ಶ್ರೀ ಕೆ. ವೆಂ... ದ್ಯನವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ... ಕೆ. ಗೋವಿಂದ ಭಟ್ಟರು ಈ ಮಸೂದೆಯಿಂ... ಗುವ ಅನ್ಯಾಯಗಳನ್ನು ವಿವರಿಸಿದರು. ... ಬಗ್ಗೆ ಸಮ್ಮೇಲನ ಕರೆಯುವ ತೀರ್ಮಾನ... ಆಗಿ ಎಲ್ಲ ಕಾರ್ಯಗಳ ಬಗ್ಗೆ “ಹಿಂದೂ ಕೋ[ಡ] ವಿರೋಧ” ಸಮಿತಿಯೊಂದನ್ನು ರಚಿಸ... ಯಿತು.

Reg. No. B. 3148

LICENCE No. 3
Licensed to Post without Prepayment

KARMAVEER 25-4-49

ಕರ್ನಾಟಕದಲ್ಲಿ

ಧಾರವಾಡ

ಬೆಳಗಾವಿಯಿಂದ ಧಟ್ಟಿಕೆರೆ ತರುತ್ತಿದ್ದ ...ಕುಪ್ಪಾಯ ಕಾರುಬೇಕ್ಕರ ಜೊತೆ ಮತ್ತು ...ಕೋತ್ರರು ಕೃಷ್ಣಾಜಾಧವ ಅಣ್ಣಿಗೇರಿ ಇವ... ಧಾರವಾಡ ಪೋಲೀಸರು ಧುಡಕಿ ಮಾಡಿ ...ಜಾಟ್ಟಿ ಕೆರೆ ಸಹಿತ ಬಂಧಿಸಿದ್ದಾರೆ. ಇವ... ಬೆಳಗಾವಿಯಿಂದ ರೇಲ್ವೆ ಮೂಲಕ ಹಲ...ರು ದಿನಗಳಿಂದ ಕಳ್ಳತನದಿಂದ ಕೆರೆ ತರುತಿ...ದಂತೆ.

...ಹುಬ್ಬಳ್ಳಿ ಕೋಟಿಯು ರೈತರು ೭೦೦ ಚೀಲ ...ಲೇಳವನ್ನು ಸರಕಾರಕ್ಕೆ ಕೊಟ್ಟಿದ್ದು ಇನ್ನು ...೨-೪೦೦ ಚೀಲ ಜೋಳ ಕೊಡಲಿದ್ದಾರೆ.

ಧಾರವಾಡ ನಗರ ಸಭೆಯ ತ್ರೈವಾರ್ಷಿಕ ...ಚುನಾವಣೆಯು ಮೇ ತಿಂಗಳ ೨೦ ನೇ ...ರೀಕು ಜರುಗಲಿದ್ದು ಒಟ್ಟು ೩೭ ಸ್ಥಳ...ಗೆ ೬೧ ಜನರು ನಾಮಪತ್ರಗಳನ್ನು ಕೊಟ್ಟಿದ್ದಾರೆ. ಹೊಸದಾಗಿ ಸ್ಥಾಪಿತವಾದ ಸಿವಿಕ್ ...ಲೀಡರ್ನವರು ತಮ್ಮ ಪರವಾಗಿ ೨೦ ಉಮೇದವಾರರನ್ನು ನಿಲ್ಲಿಸಿದ್ದಾರೆ.

...ಹ್ಯಾಡಗಿ ಹಾಂಸಭಾವಿ ರಸ್ತೆಯಲ್ಲಿ ೧೩ ನೇ ...ರೀಕು ರಾತ್ರಿ ಸರಕಾರೀ ಗೂಡ್ಸ ಟ್ರಕ್ಕು ...ಮು ಎತ್ತಿನಗಾಡಿಗೆ ಡಿಕ್ಕಿ ಹೊಡೆದುದರ ಪರಿ...ಮವಾಗಿ ಒಬ್ಬನು ಕೂಡಲೆ ಮರಣ ...ಹೊಂದಿದ್ದು ಮೂವರು ಜನರಿಗೆ ತೀವ್ರ ಸ್ವರೂ...ಪ ಗಾಯಗಳಾಗಿವೆ. ಅವರೆಲ್ಲ ಹಿರೇಕೆರೂರ ...ಸ್ಪತ್ರೆಯಲ್ಲಿ ಉಪಚಾರ ಹೊಂದುತಿರುವರು.

ಗದಗ ಬೆಟಗೇರಿ ನಗರ ಸಭೆಯ ಸದಸ್ಯ...ರ ಶ್ರೀ ಸಿ. ಎಫ್. ಅಂಗಡಿ ಸಿ. ಪಿ. ಮೂಳ...ಪ್ಪ ಮತ್ತು ಮರಿಯಪ್ಪ ಹೊನಗುಡಿಯವರು ...ಸಗಿ ಕೆಲಸ ಸಲುವಾಗಿ ೨ ತಿಂಗಳು ರಜೆ ...ಬೇಕೆಂದು ಬೇಡಿದ್ದರೂ ಅಧ್ಯಕ್ಷರು ನಾಲ್ಕು ...ತಿಂಗಳ ವರೆಗೆ ಅದನ್ನು ಹಾಗೆಯೆ ಇಟ್ಟು ಕಲೆ...ಕ್ಟರಿಗೆ ತಿಳಿಸಿದ್ದರಿಂದ ಕಲೆಕ್ಟರರು ಅವರ ...ಸದಸ್ಯತ್ವವನ್ನು ರದ್ದು ಪಡಿಸಿದ್ದರು. ಆದರೆ ಸರ...ಕಾರಕ್ಕೆ ಅವರು ಅಪೀಲು ಮಾಡಿಕೊಳ್ಳಲು ಸದ...ಸ್ಯತ್ವ ರದ್ದಾಗಿಲ್ಲವೆಂದು ಸರಕಾರದವರು ...ತೀರ್ಪ ಕೊಟ್ಟಿರುವರು.

ಬಳ್ಳಾರಿ

ಹೂವಿನ ಹಡಗಲಿಯ ಪಂಚಾಯತಿ ...ಬೋರ್ಡಿನ ಅಧ್ಯಕ್ಷ ಶ್ರೀ ಈ ಟಿ ನಾಯಕಪ್ಪ ...ಮತ್ತು ಇನ್ನಿತರ ಇಬ್ಬರ ಮೇಲೆ ಶ್ಯಾಮಜಿ ...ನಿವಾಸಮೂರ್ತಿ ಎಂಬವರ ಮನೆಯಲ್ಲಿ ...ಕವಾದ ಮಾಲುಗಳಲ್ಲಿ ಕೆಲವು ಹಳ್ಳಿಯ ...ಮಾನುಗಳ ನಾಯಕಪ್ಪನವರ ಮನೆಯಲ್ಲಿ ...ಕ್ಕವೆಂದು ಖಟ್ಲೆ ಹಾಕಿದ್ದಾರೆ. ಇವರೆಲ್ಲರನ್ನು ...ರೆಹಿಡಿದು ಜಾಮೀನ ಮೇಲೆ ಬಿಡುಗಡೆ ...ಮಾಡಲಾಗಿದೆ.

ಮದರಾಸ ಸರಕಾರದ ಕಂದಾಯ ಕೂಲಿ ...ರ ಮತ್ತು ಔದ್ಯೋಗಿಕ ಶಾಖೆಗಳ ಮಂತ್ರಿ...ಗಳಾದ ಶ್ರೀ ಎಚ್ ಸೀತಾರಾಮರೆಡ್ಡಿಯವರು ...ಹೊಸ ಮಂತ್ರಿಮಂಡಲದಲ್ಲಿ ಸೇರಿಸಿಕೊಳ್ಳ...ಲ್ಪಟ್ಟ ನಂತರ ಮೊದಲನೇ ಸಲ ಬಳ್ಳಾರಿಗೆ ...ಭೆಟ್ಟಿಕೊಟ್ಟರು. ಅವರನ್ನು ಸಂಭ್ರಮದಿಂದ ...ವಿಧ ಸಂಘ ಸಂಸ್ಥೆಯವರು ಸ್ವಾಗತಿಸಿದರು. ...ಮಂತ್ರಿಗಳು ತುಂಗಭದ್ರಾ ಯೋಜನೆಯ ...ಕಾಲುವೆಗಳನ್ನು ನಿರೀಕ್ಷಿಸಿದರು.

ಕನ್ನಡ ಸಂಸ್ಥಾನ

...ಯುದ್ಧಾನಂತರದ ಇಂಗ್ಲಂಡಿನ ಪರಿಸ್ಥಿ...ತಿಯ ಅಭ್ಯಾಸಕ್ಕಾಗಿ ಸರ್ ಮಿರ್ಜಾ ಇಸ್ಮಾ...ಯಿಲ್‌ರು ಮೇ ೧ ನೇ ತಾರೀಕಿಗೆ ಬೆಂಗಳೂರಿ...ನಿಂದ ಇಂಗ್ಲಂಡಿಗೆ ಹೊರಡುವರು. ಅವರು ...ಇಂಗ್ಲಂಡಿನಲ್ಲಿ ಒಂದು ತಿಂಗಳು ನಿಂತು ...ನಂತರ ಅವರು ಫ್ರಾನ್ಸ ಜರ್ಮನಿಗಳಿಗೆ ಭೆಟ್ಟಿ ...ಕೊಡುವರು.

...ಭದ್ರಾವತಿಯಲ್ಲಿ ಫರ್ಟಿಲಾಯಿಸರ ಕಾರಖಾನೆ...ಯೊಂದನ್ನು ಸ್ಥಾಪಿಸುವದಕ್ಕಾಗಿ ನ್ಯೂಯಾ...ರ್ಕನ ಕೆಮಿಕಲ್ ಕನ್ಸ್ಟ್ರಕ್ಸನ್ ಕಂಪನಿಯೊಂದ...ರಡನೆ ಮೈಸೂರ ಸರಕಾರವು ಕರಾರನ್ನು ...ಮಾಡಿಕೊಂಡಿದೆ. ಈ ಕಾರಖಾನೆಯ ಸ್ಥಾಪ...ನೆಗೆ ೩½ ಕೋಟಿ ರೂಪಾಯಿಗಳು ಹತ್ತುವವು. ...ವರುಷ ೨೫ ಸಾವಿರ ಟನ್ ಅಮೋನಿಯಂ ...ಸಲ್ಫೇಟ ತಯಾರಾಗುವದು. ಇನ್ನೆರಡು ವರುಷ...ಗಳಲ್ಲಿ ಈ ಕಾರಖಾನೆಯ ಉತ್ಪಾದನೆಯ ...ಕಾರ್ಯ ಪ್ರಾರಂಭವಾಗಬಹುದಾಗಿದೆ.

ಬೆಳಗಾವಿ

ಗೋಕಾವಿ ತಾಲೂಕಿನಲ್ಲಿ ರಾಷ್ಟ್ರೀಯ ಸಪ್ತಾಹದಲ್ಲಿ ೫೦ ಸಾವಿರ ರೂಪಾಯಿ ಗಾಂಧೀ ನಿಧಿ ಕೂಡಿದೆ. ಕೇಖಸಾಹೇಬ ಮೊದಲಾದವರು ಈ ನಿಧಿ ಸಂಗ್ರಹಿಸಿದ್ದು ಈಗ ಅಥಣಿ ತಾಲೂಕಿನಲ್ಲಿ ಸಂಚಾರ ನಡೆಸಿರುವರು.

ಚಂದಗಡ ಪೇಠಾವ ಹಲಕರ್ಣಿ ಕೇಂದ್ರದಲ್ಲಿ ೮೧ ನೇ ತಾರೀಕು ಕಲೆಕ್ಟರರ ನೇತೃತ್ವದಲ್ಲಿ ಧಾನ್ಯ ಎತ್ತುವಳಿ ದಿನವಾಚರಿಸಲ್ಪಟ್ಟು ಈ ವರೆಗೆ ಈ ಪೇಠಾವಲ್ಲಿ ೯೫೦೦ ಚೀಲ ಧಾನ್ಯ ಕೂಡಿದೆ. ಇಷ್ಟು ಧಾನ್ಯ ಕಳೆದ ೩ ವರುಷಗಳಲ್ಲಿ ಎಂದೂ ಕೂಡಿರಲಿಲ್ಲ.

ಬೆಳಗಾವಿಯಲ್ಲಿ ೧೫-೧೬ ಈ ಎರಡು ದಿನ ಡಾ. ಬಾಬಾಸಾಹೇಬ ಅಂಬೇಡಕರ ಇವರ ಜಯಂತ್ಯುತ್ಸವ ಶ್ರೀ ದಳವಿಯವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಶ್ರೀ ಶಾಮರಾವ ದೇಸಾಯಿ, ಚಿಕ್ಕೋಡಿ ಅನಂತರಾಯರು ಮೊದಲಾದವರು ಭಾಷಣ ಮಾಡಿದರು

ಶಹಾಪುರದಲ್ಲಿ ಕರ್ನಾಟಕ ಏಕೀಕರಣ ಸಂಘದ ಪರವಾಗಿ ಅನೌಪಚಾರಿಕ ಸಭೆ ಸೇರಿ ಕರ್ನಾಟಕ ಪ್ರಾಂತದ ಭವಿತವ್ಯವನ್ನು ಕುರಿತು ಚರ್ಚಿಸಲಾಯಿತು. ಶ್ರೀ ಮುನವಳ್ಳಿ, ದಾತಾರ, ಹಣ್ಣುಖಪ್ಪ ಅಂಗಡಿ ಮೊದಲಾದವರು ತ್ರಿಮೂರ್ತಿ ಸಮಿತಿಯ ವರದಿಯನ್ನು ವಿವೇಚಿಸಿದರು. ಕರ್ನಾಟಕ ಪ್ರಾಂತೀಯ ಸಮಿತಿ ಮತ್ತು ಏಕೀಕರಣ ಮಹಾ ಸಮಿತಿಯ ನಿರ್ಣಯಗಳನ್ನು ನೋಡಿಕೊಂಡು ಮುಂದಿನ ಮಾರ್ಗವನ್ನು ನಿರ್ಧರಿಸಬೇಕೆಂದು ಗೊತ್ತಾಯಿತು.

ಬೆಳಗಾವಿಯಲ್ಲಿಯ ಕನ್ನಡಿಗರ ಚಟುವಟಿಕೆಗಳಿಗೆ ಮೀಸಲಾಗಿದ್ದ ಕಲಾ ಮಂಟಪ ಸಂಸ್ಥೆಯು ಶ್ರೀ ಅರವಿಂದ ಜೋಶಿಯವರ ಹಿರಿತನದಲ್ಲಿ ೧೭ ನೇ ತಾರೀಕು ರೇಡಿಯೊ ಸಿನೇಮಾಗೃಹದಲ್ಲಿ ಶ್ರೀ ಕರ್ಕಿಯವರ ಹಸ್ತದಿಂದ ಪ್ರಾರಂಭಿಸಲ್ಪಟ್ಟಿತು. ಶ್ರೀಕೃಷ್ಣ ಪಾಟೀಲರು ಕಲಾಮಂಟಪದ ಧ್ಯೇಯ ಧೋರಣಗಳನ್ನು ವಿವರಿಸಿದರು. ಪ್ರ. ಗೋ. ಕುಲಕರ್ಣಿಯವರು ಕೆಲ ಮಾತು ಹೇಳಿದರು.

ಮಿರಜೆಯಲ್ಲಿ ವ್ಹಾನಲೆಸ್ ಕ್ಷಯರೋಗ ನಿವಾರಣೆ ಚಿಕಿತ್ಸಾಲಯಕ್ಕೆ ಮುಂಬಯಿ ಸರಕಾರದವರು ಪ್ರತಿವರುಷ ೪೦ ಸಾವಿರ ರೂಪಾಯಿ ಧನಸಹಾಯ ಕೊಡಲು ನಿರ್ಧರಿಸಿದ್ದಾರೆ. ಅಮೇರಿಕೆಯ ಮಿಶನ್ನಿನವರು ಈ ಆಸ್ಪತ್ರಿಯನ್ನು ನಡೆಸುತಿರುವರು. ಬ್ರಿಟಿಶರ ಆಳಿಕೆಯಲ್ಲಿ ಈ ಆಸ್ಪತ್ರೆಗೆ ಧನಸಹಾಯವೇನೂ ಸಿಕ್ಕುತಿದ್ದಿಲ್ಲ.

ಕರ್ನಾಟಕ ಲಿಂಗಾಯತ ಎಜ್ಯುಕೇಶನ ಸೊಸಾಯಿಟಿಯೆಂಬ ಪ್ರಸಿದ್ಧ ಶಿಕ್ಷಣ ಸಂಸ್ಥೆಯ ಹೆಸರನ್ನು ಕಾಲಮಾನ ಪರಿಸ್ಥಿತಿಯನ್ನನುಸರಿಸಿ ಕರ್ನಾಟಕ ಲಿಬರಲ್ ಎಜ್ಯುಕೇಶನ ಸೊಸಾಯಿಟಿ ಎಂದು ಬದಲಾಯಿಸಲಾಯಿತು.

ಗೋವೆಯ ರಘುವೀರ ದಾಮೋದರ ಲೋಟಿಕರರು ಮಾರ್ಮಗೋವಾ ಲೋಂಡಾ ಪ್ಯಾಸೆಂಜರದಲ್ಲಿ ೧೦ ಸಾವಿರ ಬೆಲೆಯ ೧೦೦ ತೊಲಿ ಬಂಗಾರಗಟ್ಟಿಯನ್ನು ಅಕ್ರಮವಾಗಿ ಒಯ್ಯುತ್ತಿದ್ದುದನ್ನು ಕ್ಯಾಸಲರಾಕಿನಲ್ಲಿಯ ಕಸ್ಟಮ ಅಧಿಕಾರಿಗಳು ಪತ್ತೆಹಚ್ಚಿ ಹೆಚ್ಚಿನ ತಪಾಸಣೆ ಕೈಕೊಂಡಿರುವರು.

ಬೆಳಗಾವಿ ನಗರಸಭೆಯ ಸಭೆ ಸೇರಿ ಬಾಬೂ ರಾಜೇಂದ್ರರು ೨೭ ಕ್ಕೆ ಬೆಳಗಾವಿಗೆ ಬಂದು ಗಾಂಧಿ ಸ್ಮಾರಕ ನಿಧಿಗಾಗಿ ಅವರ ಕೈಯಲ್ಲಿ ೧೦೦೦ ರೂಪಾಯಿ ಕೊಡಬೇಕು ಎಂದು ನಿರ್ಣಯಿಸಲಾಯಿತು.

ಬೆಳಗಾವಿ ಮುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯು ಮೇ ೨೪ ನೇ ತಾರೀಕಿಗೆ ಜರಗುವದು. ನಾಮಪತ್ರಗಳನ್ನು ಕೊಡುವ ತಾರೀಖು ಎಪ್ರಿಲ ೨೭ ಇರುವದು.

ಉತ್ತರ ಕನ್ನಡ

ಶಿರಶಿಯಲ್ಲಿ ಮುಂದಿನ ತಿಂಗಳು ಕೂಡುವ ಅಡಿಕೆ ಪರಿಷತ್ತಿನ ಕಾಲಕ್ಕೆ ಕರ್ನಾಟಕ ಯಕ್ಷಗಾನ ಪರಿಷತ್ತು ಕೂಡಿಸಬೇಕೆಂದು ಪ್ರಯತ್ನ ನಡೆದಿದೆ. ಕರ್ನಾಟಕದಲ್ಲಿ ಯಕ್ಷಗಾನ, ಕೃಷ್ಣ ಪಾರಿಜಾತ ಕಲಾಕೋವಿದರು ಅನೇಕ ಜನರಿದ್ದು ಅವರೆಲ್ಲ ಒಂದೆಡೆ ಸೇರಿ ಆ ಕಲೆಯ ಅಭಿವೃದ್ಧಿಗಾಗಿ ಪ್ರಯತ್ನಿಸುವಂತಾಗಲೆಂದು ಶ್ರೀ ಜಿ. ಆರ್. ಪಾಂಡೇಶ್ವರರು ಬರೆಯುತ್ತಾರೆ.

ಗೋವೆಯಲ್ಲಿ ಈ ಸಲ ಹವೆ ಚೆನ್ನಾಗಿಲ್ಲದ್ದರಿಂದ ಗೋಡಂಬಿ ಬೆಳೆ ಚನ್ನಾಗಿಲ್ಲ. ಗೋಡಂಬಿ ತೆಗೆಯಲು ಕೂಡ ಹವೆ ಅನುಕೂಲವಿಲ್ಲ. ಇದರಿಂದ ಗೋಡಂಬಿ ಬೆಳೆಯ ವ್ಯಾಪಾರ ಇಳಿಮುಖವಾಗಿದೆ.

ಬಂಗಾರದ ಆಭರಣಗಳು ಪಾತ್ರೆಗಳು ಹಾಗು ರೇಶಿಮೆ ಮತ್ತು ಜರದ ಬಟ್ಟೆಗಳು ಕೂಡಿ ಸುಮಾರು ಒಂದೂವರೆ ಸಾವಿರ ರೂಪಾಯಿಗಳ ಮಾಲಿನ ಕಳವು ಮಾಡಿದ ಆರೋಪದಿಂದ ಘಾತಮಾದಿ ಎಂಬವಳು ತನ್ನ ಮಗನ ವಿರುದ್ಧ ಕಾರವಾರ ಪೋಲೀಸರಲ್ಲಿ ಫಿರ್ಯಾದು ಮಾಡಿದ್ದಾಳೆ. ತಾನು ಮುಂಬಯಿಗೆ ಹೋದಾಗ ಮಗನು ಕೀಲಿ ಮುರಿದು ಆಭರಣ ಮುಂತಾದ್ದನ್ನು ಕಳವು ಮಾಡಿಕೊಂಡು ಹೋದನೆಂದು ಫಿರ್ಯಾದಿಯು ಹೇಳಿಕೆ.

ಸಿರಸಿಯಲ್ಲಿ ಮೇ ೭ ಕ್ಕೆ ಕೂಡಲಿರುವ ಅ. ಭಾ. ಅಡಿಕೆ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಶ್ರೀ ಕೆ ಆರ್ ಕಾರಂತರು ವಹಿಸುವರು.

ಕಾರವಾರದಲ್ಲಿ ಇಷ್ಟರಲಿಯೇ ವಾಯರಲೆಸ್ ಟ್ರಾನ್ಸಮಿಟಿಂಗ ಕೇಂದ್ರವನ್ನು ತೆರೆಯಲಾಗುವದು. ಈ ಬಗ್ಗೆ ಎಲ್ಲ ಸಿದ್ಧತೆಗಳು ನಡೆದಿವೆ.

ವಿಜಾಪುರ

ಗಲಗಲಿಯಲ್ಲಿಯ ರೈತರು ಒಂದೇ ದಿನದಲ್ಲಿ ೨೦೦೦ ಚೀಲಗಳನ್ನು ತಂದು ಸರಕಾರೀ ಗುದಾಮಿಗೆ ಒಪ್ಪಿಸಿ ಧಾನ್ಯ ಎತ್ತುವಳಿ ದಿನವನ್ನಾಚರಿಸಿದರು.

ವಿಜಾಪುರದ ವಿಜಯ ಕಾಲೇಜಿನ ಸಂಸ್ಥಾಪನೆಗೆ ಬಹಳಮಟ್ಟಿಗೆ ಸಹಾಯ ಸಲ್ಲಿಸಿದ ಶ್ರೀ ಬಂಥನಾಳ ಶಿವಯೋಗಿಗಳು ತಕೀವಾಡಿಗೆ ಹೋದಾಗ ೫೧ ಎತ್ತುಗಳನ್ನು ಹೂಡಿ ಅವರನ್ನು ಬರಮಾಡಿಕೊಂಡರು. ಸ್ವಾಮಿಗಳು ಎರಡು ಗಂಟೆಗಳ ವರೆಗೆ ಸಾಮಾಜಿಕ ಮತ್ತು ಶಿಕ್ಷಣದ ಮಹತ್ವವನ್ನು ಕುರಿತು ಮಾತಾಡಿದರು. ಊರ ಜನರು ಕಾಲೇಜಿನ ಸಹಾಯಾರ್ಥವಾಗಿ ೧೫೦೦ ರೂಪಾಯಿಗಳನ್ನು ಕೂಡಿಸಿ ಕೊಟ್ಟರು.

ಕರ್ನಾಟಕ ಕಾಂಗ್ರೆಸ ಸೇವಾದಲ ಸಮ್ಮೇಲನವು ಇದೇ ತಿಂಗಳ ೨೭-೨೮ ಕ್ಕೆ ಬಾಗಲಕೋಟಿಯಲ್ಲಿ ಜರಗುವದು. ಡಾ. ರಾಜೇಂದ್ರ ಪ್ರಸಾದರು ಈ ಸಮ್ಮೇಲನವನ್ನು ಪ್ರಾರಂಭಿಸುವರು. ಡಾ. ಎನ್. ಎಸ್. ಹರ್ಡೀಕರರು ಈ ಸಮ್ಮೇಲನದ ಅಧ್ಯಕ್ಷತೆಯನ್ನು ವಹಿಸುವರು. ಬಾಗಲಕೋಟೆಯ ಶ್ರೀ ಬಾಳಕೃಷ್ಣಪ್ಪಾ ವಿಡಕೆಯವರು ಸ್ವಾಗತಾಧ್ಯಕ್ಷರಾಗಿದ್ದು ಸಮ್ಮೇಲನದ ವ್ಯವಸ್ಥೆಗಳೆಲ್ಲ ಸರಾಗವಾಗಿ ಸಾಗುತಿವೆ.

ವಿಜಾಪುರ ಜಿಲ್ಹಾ ರೈತ ಪರಿಷತ್ತು ೨೭ ನೇ ತಾರೀಕು ರಾತ್ರಿ ಬಾಗಲಕೋಟಿಯ ಶ್ರೀ ಶಕ್ತಿ ಟಾಕೀಜಿನ ಎದುರಿನ ಬೈಲಿನಲ್ಲಿ ಸೇರುವದು. ಡಾ. ರಾಜೇಂದ್ರ ಪ್ರಸಾದರು ಇದರ ಪ್ರಾರಂಭೋತ್ಸವ ಜರುಗಿಸುವರು. ಶ್ರೀ ವಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು.

ದಕ್ಷಿಣ ಕನ್ನಡ

ಮೂಡಬಿದ್ರೆಯ ಮಾರಿಗುಡಿಯಲ್ಲಿ ನೂರಾರು ವರ್ಷಗಳಿಂದ ನಡೆದುಕೊಂಡು ಬಂದ ಮೂಕ ಪ್ರಾಣಿಗಳ ಬಲಿಕೊಡುವುದನ್ನು ತಾ ೧೫-೪-೪೯ನೇ ದಿನದಿಂದ ಸಂಪೂರ್ಣ ನಿಲ್ಲಿಸಲಾಗಿದೆ.

ಮಂಗಳೂರು ಮತ್ತು ಮಲ್ಪೆ ಬಂದರುಗಳ ಪರೀಕ್ಷೆಯ ಕೆಲಸವನ್ನು ಇದೀಗ ಮದ್ರಾಸಿನ ಚೀಫ್ ಇಂಜಿನಿಯರಾದ ಶ್ರೀ ರಾಮಬ್ರಹ್ಮಂ ಅವರು ಭಾರತೀಯ ನೌಕಾಬಲದ "ನಿರೀಕ್ಷಕ ನೌಕೆ"ಯೊಂದಿಗೆ ಮಾಡಿ ಮುಗಿಸಿರುತ್ತಾರೆ. ಅವರ ವರದಿಯು ಸದ್ಯದಲ್ಲೇ ಪ್ರಕಟವಾಗುವುದು.

ಮಂಗಳೂರಿನಿಂದ ೧೨ ಮೈಲು ಈಶಾನ್ಯಕ್ಕಿರುವ ಗುರುಪುರದ ಹತ್ತಿರದಲ್ಲಿ ವಿಮಾನ ನಿಲ್ದಾಣಕ್ಕಾಗಿ ಆರಿಸಿದ ಸ್ಥಳವನ್ನು ಭಾರತ ಸರಕಾರದ ವಿಮಾನ ನಿಲ್ದಾಣಗಳ ವಿಭಾಗದ ಮುಖ್ಯ ಇಂಜಿನಿಯರು ರಾಯಬಹದೂರ್ ಎಂ. ಎಸ್ ಮಾಸುರ್ ಎಂಬವರು ದಿನಾಂಕ ೮ ಮತ್ತು ೯ ರಂದು ನೋಡಿ ಪರಾಂಬರಿಸಿರುತ್ತಾರೆ.

ವಿಟ್ಲ ಫಿರ್ಕಾ ಸಪ್ಲೈ ಆಫೀಸರ್‌ರವರಾದ ಪೇದೆ ಕೆ. ಜನಾರ್ದನ ಎಂಬವನು ಮಹಾತ್ಮಾಜಿಯವರನ್ನು ಬೈದುದಕ್ಕಾಗಿ, ಅವರನ್ನು ಜಿಲ್ಲಾ ಕಲೆಕ್ಟರರ ಹುಕುಮಿನಂತೆ ಪುತ್ತೂರು ಆರ್. ಡಿ. ಓ ರವರು ಕೆಲಸದಿಂದ ತೆಗೆದು ಹಾಕಿರುತ್ತಾರೆ. ಈ ವಿಚಾರವನ್ನು ಕುಂಬಳೆಯ ಕಾಂಗ್ರೆಸ್ ಕಾರ್ಯಕರ್ತರಾದ ಬಿ. ದೇವಪ್ಪಾಳ್ವರು ವಿಚಾರಿಸಿ ಕಲೆಕ್ಟರರಿಗೆ ವರದಿ ಮಾಡಿದುದಾಗಿದೆ.

ದಕ್ಷಿಣ ಕನ್ನಡ ಜಿಲ್ಹಾ ವಾಣಿಜ್ಯ ಸಂಘದ ಸಕಲ ಸದಸ್ಯರ ಪರಿಷತ್ತೊಂದು ದಿನಾಂಕ ೯ ರಂದು ಮಂಗಳೂರಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿ ಮದ್ರಾಸು ಸರಕಾರವು ಸದ್ಯದಲ್ಲೇ ಕಳ್ಳಪೇಟೆಯನ್ನು ನಿಲ್ಲಿಸಲಿಕ್ಕಾಗಿ ತರಲಿರುವ ಮಸೂದೆಯನ್ನು ಪರಿಶೀಲಿಸಲಾಯಿತು. ಸರಕಾರಕ್ಕೊಂದು ಮನವಿ ಮಾಡಲು ಸಮಿತಿಯನ್ನು ರಚಿಸಲಾಯಿತು.

ಈ ಪತ್ರಿಕೆಯನ್ನು ಹುಬ್ಬಳ್ಳಿ, ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ" ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಜ. ರಾ. ಜೋಹರೆಯವರು ಮುದ್ರಿಸಿ ಪ್ರಕಟಿಸಿದರು.